## ಶ್ರೀ ಸರ್ವಮೂಲ ಸಂದೇಶ

**ಪ್ರಾಯೋ ಹಿ ಕಾಮಿತಾ ಅರ್ಥಾಃ ಧರ್ಮಂ ಹನ್ಯುರ್ಹರಿಃ ಪುನಃ ।**
**ನ ಧರ್ಮ ಹಾನಿಕೃತ್ ಕಿಂತು ಕಾಮಿತೋ ಧರ್ಮವೃದ್ಧಿಕೃತ್ ।**
**ಧರ್ಮಾವಿರುದ್ಧಕಾಮೋಽತೋ ವಿಷ್ಣುರ್ಭೂತೇಷು ಸಂಸ್ಥಿತಃ ।।**

ಪ್ರಾಯಃ ಲೋಕದಲ್ಲಿ ನಾವು ಪಡೆಯುವ ನಾನಾ ವಿಧ ಕಾಮನೆಗಳು ನಮ್ಮ ಧರ್ಮಾಚರಣೆಗೆ ಬಾಧಕವಾಗಬಹುದು. ಆದರೆ ಹರಿಯನ್ನು ನಾವು ಬಯಸಿದಲ್ಲಿ ಅವನು ಧರ್ಮವೃದ್ಧಿಯನ್ನೇ ಮಾಡುವನು. ಆದ್ದರಿಂದಲೇ ಅವನನ್ನು ಎಲ್ಲಾ ಪ್ರಾಣಿಗಳಲ್ಲಿರತಕ್ಕ 'ಧರ್ಮಾವಿರುದ್ಧಕಾಮ ಸ್ವರೂಪ'ನೆಂದು ಶಾಸ್ತ್ರಗಳು ತಿಳಿಸುತ್ತವೆ.

**-ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ-8 ಸಂಚಿಕೆ-8 ವಿರೋಧಿ ಸಂ.।। ಭಾದ್ರಪದ- ಆಶ್ವಯುಜ ಅಕ್ಟೋಬರ್ 2009

**ಸಂಸ್ಥಾಪಕರು:**

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ವಿದ್ಯಾಮಾನ್ಯ ಪ್ರಕಾಶನ

**ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)**

**ಶ್ರೀಪಲಿಮಾರು ಹೃಷೀಕೇಶ ಮಠ, ಉಡುಪಿ**

**www.palimarumatha.org**

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಗೀತಾಮೃತ** | ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು | 1 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 3 |
| **ತೈತ್ತರೀಯೋಪನಿಷತ್** | ವಿ|| ಬನ್ನಂಜೆ ಗೋವಿಂದಾಚಾರ್ಯ | 5 |
| **ಹರಿಭಕ್ತಿಸಾರ** | ವಿ|| ಹಯವದನ ಪುರಾಣಿಕ್ | 7 |
| **ಅವಲೋಕನ** | ವಿ|| ಸಗ್ರಿ ರಾಘವೇಂದ್ರ ಉಪಾಧ್ಯಾಯ | 9 |
| **ಭಾರತಭಾವದರ್ಪಣ** | ವಿ|| ರಾಮವಿಠ್ಠಲಾಚಾರ್ಯ | 16 |
| **ಕಠೋಪನಿಷತ್** | ಡಾ|| ಎನ್. ವೇಂಕಟೇಶ್ ಆಚಾರ್ಯ | 20 |
| **ನಾರಾಯಣವರ್ಮ** | ವಿ|| ಬೆ.ನಾ ವಿಜಯೀಂದ್ರಾಚಾರ್ಯ | 22 |
| **ಮಾರ್ಕಂಡೇಯ ಪುರಾಣ** | ವಿ|| ಅಡ್ವೆ ಲಕ್ಷ್ಮೀಶಾಚಾರ್ಯ | 25 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸ ಭಟ್ | 27 |
| **ಮಧ್ವಚರಿತ್ರೆ** | ವಿ|| ಅನಂತಕೃಷ್ಣಾಚಾರ್ಯ | 29 |
| **ವಿಷ್ಣುಪುರಾಣ** | ಸ್ಫೂರ್ತಿ | 31 |
| **ಜ್ಯೌತಿಷ ಚಿಂತನೆ** | ವಿ|| ಶ್ರೀ ಶ್ರೀಪತಿ ಉಪಾಧ್ಯಾಯ | 34 |
| **ನೆನಪಿನ ಅಂಗಳ** | ವಿ|| ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

**ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ**

**ಪ್ರಧಾನ ಸಂಪಾದಕರು**

**ವಿ|| ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ**



**ಸಂಪಾದಕ ಮಂಡಳಿಃ**

ವಿ|| ಬಲರಾಮ ಭಟ್ಟ, ಉಡುಪಿ

ವಿ|| ಮೋಹನಾಚಾರ್ಯ, ಬೆಂಗಳೂರು

ವಿ|| ಗಿರೀಶ ಉಪಾಧ್ಯಾಯ, ಕುತ್ಯಾರು

ಮುಖಪುಟ ವಿನ್ಯಾಸಃ ಕೆ.ಎಮ್. ಶೇಷಗಿರಿ, ಬೆಂಗಳೂರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀಲಕ್ಷ್ಮೀನಾರಾಯಣ ಶರ್ಮ, ಉಡುಪಿ

ಶ್ರೀ ಹರ್ಷ, ಬೆಂಗಳೂರು

ಅಕ್ಷರ ವಿನ್ಯಾಸ: ಶ್ರೀಮತಿ ಸ್ವಾತಿ ಭಾಗವತ್, ಉಡುಪಿ



| | | | |
|---|---|---|---|
| **ಬಿಡಿ ಪ್ರತಿ** | : ರೂ. 8.00 | **ವಾರ್ಷಿಕ ಚಂದಾ** | : ರೂ. 90.00 |
| **15 ವರ್ಷಕ್ಕೆ** | : ರೂ. 1,250.00 | **ಸದಸ್ಯರು** | : ರೂ. 2,250.00 |
| **ಪೋಷಕರು** | : ರೂ. 3,000.00 | | |



**ಆಯಾಯಾ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

ವಿದ್ವತ್ ಪ್ರಪಂಚ

# ಗೀತಾಮೃತ



**-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು**

ಜೀವನು ನಿತ್ಯ ಅನಾದಿ ಎಂದು ನೀನು ಹೇಳಿದ್ದಿ. ಪರಮಾತ್ಮನೂ ನಿತ್ಯ, ಜೀವನೂ ನಿತ್ಯ, ಅನಾದಿ. ಆದರೆ ಜೀವನಿಗಿಂತ ಪರಮಾತ್ಮನಿಗೆ ವಿಶೇಷವೇನಿದೆ. ಜೀವನು ಪರಮಾತ್ಮನು ಸಮಾನ ಆದಾಗ ಪರಮಾತ್ಮನ್ನನ್ನು ವಿಶೇಷವಾಗಿ ಪೂಜಿಸಬೇಕು ಗೌರವಿಸಬೇಕು ಎಂದು ನೀ ಯಾಕಾಗಿ ಹೇಳುತ್ತಿ. ಯಾಕೆಂದರೆ ಆ ಪರಮಾತ್ಮನಲ್ಲಿ ಜೀವನಿಗಿಂತ ಯಾವ ವೈಶಿಷ್ಟ್ಯವು ಇಲ್ಲ. ಎಂಬುದಾಗಿ ಅರ್ಜುನನು ಶ್ರೀಕೃಷ್ಣನಲ್ಲಿ ಪ್ರಶ್ನಿಸುತ್ತಾನೆ.

ಪರಮಾತ್ಮನಲ್ಲಿ ಜೀವನಿಗಿಂತ ಬಹಳ ವೈಶಿಷ್ಟ್ಯಗಳಿವೆ. ಪರಮಾತ್ಮನು ಎಲ್ಲಾ ದೇಶಗಳಲ್ಲಿ ವ್ಯಾಪ್ತನಾಗಿದ್ದಾನೆ. ಎಲ್ಲಾ ಗುಣಗಳಿಂದ ಪೂರ್ಣನಾಗಿದ್ದಾನೆ ಅವನಿಗೆ ದುಃಖದ ಪ್ರಸಕ್ತಿಯೇ ಇಲ್ಲ. ನಾಶ ರಹಿತವಾದ ದೇಹವಿದೆ. ಆದರೆ ಜೀವನು ದುಃಖಿ, ದೇಹ ನಾಶವುಳ್ಳವನು, ಅಪೂರ್ಣ, ಅಸ್ವತಂತ್ರ, ಸ್ವತಂತ್ರನಾದ ಪರಮಾತ್ಮನ ಅನುಗ್ರಹದಿಂದಲೇ ಮೋಕ್ಷಪಡೆಯಲಿಕ್ಕೆ ಯೋಗ್ಯನಾದವನು. ಈ ರೀತಿಯಾಗಿ ಜೀವನಿಗಿಂತ ವೈಶಿಷ್ಟ್ಯಪೂರ್ಣವಾದ ಭಗವಂತನ ಆರಾಧನೆಯನ್ನು ಮಾಡಲೇಬೇಕು. ಎಲೋ ಅರ್ಜುನ ನೀನು ಸ್ವಹಿತ ಕರ್ತವ್ಯವಾದ ಅಂದರೆ ಕ್ಷತ್ರಿಯ ಧರ್ಮಕ್ಕನುಗುಣವಾದ ಯುದ್ಧವನ್ನು ಮಾಡಲೇಬೇಕು ಎಂಬುದಾಗಿ ಉಪದೇಶಿಸಿದನು.

ಜೀವನು ಅಸ್ವತಂತ್ರ ನಿತ್ಯ ಎಂಬುದಾಗಿ ಹೇಗೆ ವ್ಯವಹಾರ ಮಾಡಲು ಸಾಧ್ಯ. ಯಾಕೆಂದರೆ ಲೋಕದಲ್ಲಿ ಇವನು ಸಂಹಾರ ಮಾಡಿದನು ಇವನು ಇವನಿಂದ ಸಂಹಾರ ಮಾಡಲ್ಪಟ್ಟನು ಇತ್ಯಾದಿ ವ್ಯವಹಾರಗಳು ಇರುವಾಗ ಸಂಹಾರಕಾರ್ಯದಲ್ಲಿ ಜೀವನು ಸ್ವತಂತ್ರ, ಸಂಹರಿಸಲ್ಪಡುವ ಈ ಜೀವನು ಅನಿತ್ಯ ಎಂಬ ತಿಳುವಳಿಕೆ ಬರುವ ಪ್ರಯುಕ್ತ ಅಸ್ವತಂತ್ರ ನಿತ್ಯ ಎಂಬ ವ್ಯವಹಾರವು ಜೀವನಿಗೆ ಹೇಗೆ ಕೂಡುತ್ತದೆ ಎಂಬ ಜಿಜ್ಞಾಸೆಗೆ ಶಾಸ್ತ್ರಕಾರರು ಈ ರೀತಿಯಾಗಿ ಪರಿಹಾರವನ್ನು ತಿಳಿಸುತ್ತಾರೆ. ಜನರಿಗೆ ಬರುವ ಈ ರೀತಿಯ ತಿಳುವಳಿಕೆಯು ಭ್ರಾಂತಿರೂಪವಾದುದು. ಯಾಕೆಂದರೆ ನಿತ್ಯನಾದ ಈಶ್ವರನು ಬಿಂಬ. ಜೀವನು ಪ್ರತಿಬಿಂಬ ಎಂದಾದ ಮೇಲೆ ಪ್ರತಿಬಿಂಬನಾಗಿರತಕ್ಕಂತಹ ಜೀವನು ನಿತ್ಯವೇ ಆಗಿರಬೇಕು. ಪ್ರತಿಬಿಂಬವು ಬಿಂಬದ ಅಧೀನವಾದ್ದರಿಂದ ಪ್ರಕೃತದಲ್ಲಿ ಜೀವನು ಪರಮಾತ್ಮನ ಅಧೀನವೇ ಆಗಿರಬೇಕು. ಆದ್ದರಿಂದ ಲೋಕದ ತಿಳುವಳಿಕೆ ಏನಿದೆ ಅದು ಭ್ರಾಂತಿಯೇ ಆಗಿರುತ್ತದೆ. ಜೀವನು ಸ್ವರೂಪತಃ ಹುಟ್ಟುವುದಿಲ್ಲ. ನಾಶವನ್ನು ಹೊಂದುವುದಿಲ್ಲ. ದೇಹ ಸಂಬಂಧ, ದೇಹ ವಿಯೋಗ ಈ ನಿಮಿತ್ತದಿಂದ ಜೀವನಿಗೆ ಸೃಷ್ಟಿನಾಶದ ವ್ಯವಹಾರವನ್ನು ಕೂಡಿಸಬೇಕು. ಈ ಜೀವನು ಯಾವಾಗಲೂ ಅಸ್ವತಂತ್ರನಾಗಿರತಕ್ಕವನು. ಈ ದೇಹವನ್ನು ಬಿಡಬಾರದು ಎಂಬ ಅಪೇಕ್ಷೆ ಅವನಿಗೆ ಇದ್ದರೂ ಕೂಡ

ಅನಿವಾರ್ಯವಾಗಿ ಈ ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಪ್ರವೇಶಮಾಡುತ್ತಾನೆ. ಇದರಿಂದಾಗಿ ಜೀವನ ಅಸ್ವಾತಂತ್ರ್ಯವು ತಿಳಿಯುತ್ತದೆ. ಜೀವನು ಅನಿತ್ಯ ಸ್ವತಂತ್ರ ಎನ್ನುವ ಭ್ರಾಂತಿಯಾದರೂ ಯಾಕಾಗಿ ಬಂತು? ಈ ಭ್ರಾಂತಿ ವಿಷಯದಲ್ಲಿ ಶಾಸ್ತ್ರದಲ್ಲಿ ಹೇಳಿದ ತತ್ವದ ಅಜ್ಞಾನವೇ ಕಾರಣ. ಶಾಸ್ತ್ರದ ಯಥಾರ್ಥ ಜ್ಞಾನವಿದ್ದವನಿಗೆ ಇಂತಹ ಭ್ರಾಂತಿಬರಲು ಸಾಧ್ಯವೇ ಇಲ್ಲ.

ಜೀವನಿಗೆ ಅಸ್ವಾತಂತ್ರ್ಯವನ್ನು ಒಪ್ಪಿದರೆ, ಕೆಲವು ಸಂಶಯವು ಬರುವ ಸಾಧ್ಯತೆಗಳಿವೆ.
ಮೋಕ್ಷ ಪ್ರಾಪ್ತಿಯಾದಮೇಲೆ ಜೀವನಿಗೆ ಅಸ್ವಾತ್ರಂತ್ರ್ಯ ಇರುವುದಾದರೆ ಮೋಕ್ಷವು ಮಹಾಫಲವಾಗಲಾರದು. ಜೀವನು ಅಸ್ವತಂತ್ರನಾದರೆ ಜೀವನಿಂದ ಪರಮಾತ್ಮನೇ ಕರ್ಮ ಮಾಡಿಸುವ ಕಾರಣ ಜೀವನು ಆ ಕರ್ಮದ ಫಲವನ್ನು ಯಾಕೆ ಭೋಗಿಸುತ್ತಾನೆ. ಕೊಡಲಿಯಿಂದ ವೃಕ್ಷ ಛೇದನ ಮಾಡಿದರೆ ಛೇದನಕ್ಕೆ ನಿಮಿತ್ತವಾದ ಕೊಡಲಿಯು ಯಾವುದೇ ಫಲವನ್ನು ಭೋಗಿಸಲಾರದು ಮುಖ್ಯ ಕಾರಣವಾದ ಪುರುಷನೇ ಅದರ ಫಲವನ್ನು ಅನುಭವಿಸುತ್ತಾನೆ. ಪ್ರಕೃತದಲ್ಲಿ ಜೀವನು ನಿಮಿತ್ತ ಮಾತ್ರನಾದ್ದರಿಂದ ಈಶ್ವರನೇ ಮುಖ್ಯ ಕಾರಣವಾದ್ದರಿಂದ ಕರ್ಮದ ಫಲವಾದ ಸುಖ ದುಃಖಾದಿಗಳು ಜೀವನಿಗೆ ಬರಲು ಸಾಧ್ಯವಿಲ್ಲ.

ಜೀವನು ಮೋಕ್ಷದಲ್ಲಿ ಅಸ್ವತಂತ್ರನಾದರೂ ತನ್ನಿಮಿತ್ತಕವಾದ ದುಃಖವು ಅಲ್ಲಿಲ್ಲ. ಇಲ್ಲಿ ಅಸ್ವಾತಂತ್ರ್ಯ ಎಂಬ ದೋಷ ದುಃಖಕ್ಕೆ ಕಾರಣವಾದರೂ ಮೋಕ್ಷದಲ್ಲಿರತಕ್ಕಂತಹ ಅಸ್ವಾತ್ರಂತ್ರ್ಯ ದುಃಖಕ್ಕೆ ಕಾರಣವಲ್ಲ. ಯಾಕೆಂದರೆ ಮೋಕ್ಷದ ಅಸ್ವಾತ್ರಂತ್ರ್ಯ ಎಂದರೆ ಪರಮಾತ್ಮನ ಇಚ್ಛೆಗೆ ಅನುಸಾರಿಯಾದ ಇಚ್ಛೆಯು ಜೀವನಿಗೆ ಬರುವುದು ಎಂದು ಅರ್ಥ. ಎಂದರೆ ಪರಮಾತ್ಮನು ಯಾವುದನ್ನು ಇಚ್ಛಿಸುತ್ತಾನೋ ಅದನ್ನೇ ಜೀವನೂ ಇಚ್ಛಿಸುತ್ತಾನೆ. ಆದ್ದರಿಂದ ಜೀವನು ಇಚ್ಛಿಸುವ ವಿಷಯಗಳೇ ಪ್ರಾಪ್ತವಾಗುತ್ತದೆ. ಈಶ್ವರನ ಕಿಂಕರ ಭಾವವನ್ನು ಮೋಕ್ಷಪಡೆದ ಸಜ್ಜೀವಿಯು ಸದಾ ಅಪೇಕ್ಷಿಸುತ್ತಾನೆ. ಅದ್ದರಿಂದ ಮನೋಭಿಷ್ಟವಾದ ಕೈಂಕರ್ಯವು ಮೋಕ್ಷದಲ್ಲಿ ದೋಷವೆಂದು ಹೇಳಲಾಗುವುದಿಲ್ಲ.

ವೃಕ್ಷ ಛೇಧನ ಕಾರ್ಯದಲ್ಲಿ ಕೊಡಲಿ ಮೊದಲಾದ ವಸ್ತುಗಳು ಅಚೇತನ ಪದಾರ್ಥಗಳು. ಆದರೆ ಜೀವನು ಚೇತನ. ಕರ್ತಾ ಶಾಸ್ತ್ರಾರ್ಥವತ್ವಾತ್ ಎಂಬ ಸೂತ್ರದಲ್ಲಿ ಜೀವನ ಕರ್ತೃತ್ವವನ್ನು ಸಮರ್ಥಿಸಿದ್ದಾರೆ. ಶಾಸ್ತ್ರದ ವಿಧಿ ನಿಷೇಧಗಳು ಜಡ-ಜೀವ-ಈಶ್ವರ ಈ ಮೂರು ವಸ್ತುಗಳಲ್ಲಿ ಯಾರಿಗಾಗಿ ಎಂಬ ಪ್ರಶ್ನೆಯನ್ನು ಮಾಡಿಕೊಂಡು ಈಶ್ವರನು ಸ್ವತಂತ್ರನಾಗಿದ್ದರಿಂದ ಈ ವಿಧಿ ನಿಷೇಧಗಳಿಗೆ ಆತನು ವಿಷಯನಾಗಲಾರ. ಜಡ ವಸ್ತುಗಳಿಗೆ ವಿಧಿ ನಿಷೇಧಗಳು ಹೇಳುವುದೇ ಅನಾವಶ್ಯಕ. ಆದ್ದರಿಂದ ವಿಧಿ ನಿಷೇಧಗಳಿಗೆ ವಿಷಯನಾಗತಕ್ಕವನು ಜೀವನೇ ಎಂದು ಇಲ್ಲಿ ಸಾಧಿಸಿದ್ದಾರೆ. ವಿಧಿ ಎಂದರೆ ಇದನ್ನು ಮಾಡು ಎಂದು ತಿಳಿಸುವಿಕೆ. ಸರ್ವಥಾ ಕರ್ತೃತ್ವವು ಜೀವನಲ್ಲಿ ಇಲ್ಲದೇ ಹೋದರೆ ಇದನ್ನು ಮಾಡು ಎಂಬ ವಿಧಿಯು ಜೀವನನ್ನು ಕುರಿತು ಕೂಡುವುದಿಲ್ಲ. ಜೀವನು ಈಶ್ವರನಂತೆ ಸ್ವತಂತ್ರ ಕರ್ತನಲ್ಲ. ಜಡದಂತೆ ಅಕರ್ತನಂತೂ ಖಂಡಿತ ಆಲ್ಲ. ಆದ್ದರಿಂದ ಈಶ್ವರನಿಗೆ ಕರ್ಮಫಲವು ಬರುವ ಪ್ರಸಕ್ತಿಯೇ ಇಲ್ಲ. ಕರ್ಮಫಲವು ಯಾವಾಗಲೂ ರಾಗ-ದ್ವೇಷವಿರುವವರಿಗೆ ಬರುವುದು.

( ....33ನೇ ಪುಟದಲ್ಲಿ)

# ವಿದುರನೀತಿ

-ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರು ಮಠ ಬರಹ:ಕೃಷ್ಣಾ

ಆರು ರೀತಿಯ ಜನರು ಬದುಕುವ ಕ್ರಮದ ಬಗ್ಗೆ ವಿದುರ ವಿವರಿಸಿದ ಬಳಿಕ ಯಾರಿಂದ ಉಪಕಾರ ಪಡೆದು ಉಪಕೃತರಾದ ಮೇಲೆ ಅವರನ್ನು ಪರಿತ್ಯಾಗ ಮಾಡುವಂತಹ ಆರು ರೀತಿಯ ಜನರ ಬಗ್ಗೆ ಹೇಳಲು ಮುಂದುವರಿಸುತ್ತಾನೆ.

**ಷಡೇತೇ ಹ್ಯವಮನ್ಯಂತೇ ನಿತ್ಯಂ**

**...........ಪೂರ್ವೋಪಕಾರಿಣಂ ಆಚಾರ್ಯಂ ಶಿಕ್ಷಿತಾಃ ಶಿಷ್ಯಾಃ**

**ಕೃತದಾರಾಶ್ಚ ಮಾತರಂ ನಾರೀಂ ವಿಗತಕಾಮಾಸ್ತು**

**ಕೃತಾರ್ಥಶ್ಚ ಪ್ರಯೋಜಕಂ ನಾವಂ ನಿಸ್ತೀರ್ಣಕಾಂತಾರಾಃ ನಾತುರಾಶ್ಚ ಚಿಕಿತ್ಸಕಂ**

ಮೊದಲನೆಯದಾಗಿ ಗುರುಶಿಷ್ಯರ ಭಾವ ಸಂಬಂಧದ ಬಗ್ಗೆ ಹೀಗೆ ಹೇಳುತ್ತಾನೆ. ಗುರುಗಳಲ್ಲಿ ಅಧ್ಯಯನ ಮುಗಿಸಿದ ಮೇಲೆ, ಗುರುಗಳನ್ನು ಸಸಾರ ಮಾಡುವ ಪ್ರಸಂಗ ಇದೆ. ಒಬ್ಬ ಅಧ್ಯಾಪಕನಲ್ಲಿ ಓದಿದ ವಿದ್ಯಾರ್ಥಿ ಒಂದೇ ವಾಹನದಲ್ಲಿದ್ದರೂ ಆ ನಿಂತಿರುವಂತ ಅಧ್ಯಾಪಕನಿಗೆ ಜಾಗ ಕೊಡದೆ ಅವರನ್ನು ಕಡೆಗಣಿಸುವ ಪ್ರಸಂಗ ನಾವು ಈ ದಿನಗಳಲ್ಲಿ ಕಾಣುತ್ತೇವೆ. ಇನ್ನು ಲಗ್ನವಾದ ಬಳಿಕ ಮಕ್ಕಳು ತಮ್ಮ ಹೆತ್ತವರನ್ನು ಪರಿತ್ಯಾಗ ಮಾಡುತ್ತಾರೆ ಎಂದು ವಿದುರ ವೇದವ್ಯಾಸರ ಮಾತನ್ನು ಪುನಃರುಚ್ಚರಿಸುತ್ತಾನೆ. ವೇದವ್ಯಾಸ ದೇವರು ಹೇಳಿದ ಮಾತು ತ್ರಿಕಾಲ ಸತ್ಯ. ನಮ್ಮ ಮನೆಗಳಲ್ಲಿ ಜಗಳವಾಗುವುದಾದರೆ ಅದು ಬಾಹ್ಯ ಸೌಂದರ್ಯ ನೋಡಿಕೊಂಡು ಮನೆಯೊಳಗೆ ಸಂಗ್ರಹ ಮಾಡಿರುವ ಕಾರಣದಿಂದಲೇ ಆಗಿರುತ್ತದೆ. ಹಾಗಾದರೆ ಒಳಗಿನ ವಸ್ತುವನ್ನು ನೋಡಬೇಕಾದರೆ ದೇವರು ನಮಗೆ ಒಳಗಣ್ಣು ಕೊಡಬೇಕು. ಆದ್ದರಿಂದ ದಾಸರು 'ಹೊಸ ಕಣ್ಣು ಎನಗೆ ಹಚ್ಚಲಿ ಬೇಕು ಜಗದಂಬೆ, ವಸುದೇವಸುತನ ಕಾಂಬುದಕೆ ' ಎಂದರು. ಮೂರನೆಯ ರೀತಿಯ ಜನರೆಂದರೆ ತಾನು ಮೋಹಿಸಿದಂತಹ ಹುಡುಗಿಯ ಬಗ್ಗೆ ಇವನಿಗೆ ಮೋಹ ಕಡಿಮೆ ಆದಲ್ಲಿ ಆ ಹುಡುಗಿಯನ್ನು ಬಿಟ್ಟು ಬಿಡುವವನು. ನಾಲ್ಕನೆಯವನು ಪ್ರಯೋಜನವನ್ನು ಪಡೆಯುವ ತನಕ ಜನರ ಸುತ್ತಮುತ್ತ ಓಡಾಡಿಕೊಂಡಿದ್ದು, ಉಪಕಾರ ಪಡೆದ ನಂತರ ಯಾರಿಂದ ಪ್ರಯೋಜನ ಪಡೆದಿರುತ್ತಾನೋ ಅವರನ್ನು ತ್ಯಾಗ ಮಾಡುವವನು. ಇನ್ನೊಂದು, ನದಿ ದಾಟಿದ ಮೇಲೆ ದೋಣಿಯ ಪ್ರಯೋಜನವಿಲ್ಲ. ಕಾಯಿಲೆ

ವಾಸಿಯಾದ ಮೇಲೆ ವೈದ್ಯನ ಪ್ರಯೋಜನವಿಲ್ಲ. ಈ ರೀತಿಯ ಜನರು ತಮಗೆ ಉಪಕಾರ ಮಾಡಿದ ಜನರನ್ನು ಕೆಲಸವಾದ ಮೇಲೆ ಪರಿತ್ಯಾಗ ಮಾಡುತ್ತಾರೆ. ಆದ್ದರಿಂದ ಧೃತರಾಷ್ಟ್ರ! ಇಂತಹ ಯಾವುದೇ ವ್ಯಕ್ತಿಗಳನ್ನು ಸಮಾಜದಲ್ಲಿ ನಂಬಬೇಡ– ಎಂದು ವಿದುರನು ಎಚ್ಚರಿಕೆ ಕೊಡುತ್ತಾನೆ.

ವಿದುರನು ಮುಖ್ಯವಾಗಿ ಒಬ್ಬ ವ್ಯಕ್ತಿಗೆ ತನ್ನ ಜೀವನದಲ್ಲಿ ಅಗತ್ಯವಾಗಿ ಬೇಕಾಗಿರುವ ವಿಷಯವನ್ನು ಹೇಳುತ್ತಾ ಮುಂದುವರಿಸುತ್ತಾನೆ. **'ಆರೋಗ್ಯಂ ಆನೃಣ್ಯಂ ಅವಿಪ್ರವಾಸಃ'** ಮೊದಲು ಬೇಕಾಗಿರುವುದೇ ಆರೋಗ್ಯ, ನಂತರದಲ್ಲಿ ಋಣವಿಲ್ಲದ ಜೀವನ, ಸಂಚಾರ ಮಾಡದಿರುವುದು, ಒಳ್ಳೆಯ ಜನರ ಸಹವಾಸ, ಸ್ವಪ್ರತ್ಯಯ ವೃತ್ತಿ– ತಿಳಿದು ಮಾಡುವಿಕೆ. ಒಂದು ಕೆಲಸದಲ್ಲಿ ಒಬ್ಬನು ತೊಡಗುವಾಗ, ಅವನಿಗೆ ಅದರ ಬಗ್ಗೆ ತಿಳಿದಿದ್ದರೆ ಆ ಕೆಲಸದಲ್ಲಿ ತೃಪ್ತಿ ಇರುತ್ತದೆ. ಇದನ್ನು ಬಿಟ್ಟು ಬೇರೆಯವರು ಮಾಡುತ್ತಿದ್ದಾರೆಂದು ಕೆಲಸ ಮಾಡಿದರೆ, ಕಾಟಾಚಾರಕ್ಕೆ ಕೆಲಸ ಮಾಡತಕ್ಕಂತಹ ಪ್ರಸಂಗ ಬರುತ್ತದೆ. ಇದರ ಬಗ್ಗೆ ಒಂದು ಕಥೆ ಇದೆ. ಒಬ್ಬ ತೀರ್ಥಸ್ನಾನಕ್ಕೆ ಒಂದು ತಂಬಿಗೆ ಹಿಡಿದುಕೊಂಡು ಹೋದನು. ದಾಸರು ಹೇಳಿದಂತೆ– ಹರಿಯ ಚಿಂತೆಗೆ ಸಮಯವಿಲ್ಲ. ಏಕಾದಶಿ ದಿವಸ, ಧಾರಣೆಯ ದಿವಸ ಪಾರಣೆಯ ಚಿಂತೆ. ಹಾಗೆಯೇ ಇವನಿಗೆ ಗಂಗೆಯ ಸ್ನಾನದಲ್ಲಿ ತಂಬಿಗೆಯ ಚಿಂತೆ ಆದಕ್ಕೆ ಅವನು ತಂಬಿಗೆಯನ್ನು ಒಂದು ಹೊಂಡ ತೆಗೆದು ಹೂತು ಅದರ ಮೇಲೆ ಗುರುತಿನ ಸಂಕೇತವಾಗಿ ಮಣ್ಣಿನ ಮುದ್ದೆಯನ್ನು ಮಾಡಿ ಇಟ್ಟು ಸ್ನಾನಕ್ಕೆ ಹೋದನು. ಇದನ್ನು ಕಂಡ ಬೇರೆ ಯಾತ್ರಿಕರು ಸರಿಯಾದ ಕಾರಣ ತಿಳಿಯದೆ ಅಂತಹ ಮಣ್ಣಿನ ಮುದ್ದೆಗಳನ್ನು ಮಾಡಿ ಸ್ನಾನಕ್ಕೆ ಇಳಿದರು. **'ಗತಾನುಗತಿಕಃ ಲೋಕಃ ನಲೋಕಃ ಪಾರಮಾರ್ಥಿಕಃ'** ಈ ಜನರಿಗೆ ಕೇಳಿ ಮಾಡುವ ಪ್ರಜ್ಞೆ ಇಲ್ಲ. ಯದ್ಯಪಿ ಚತುರ್ಮುಖ ಬ್ರಹ್ಮನು ಎಲ್ಲರಿಗೂ ಒಂದು ವಿವೇಚನಾ ಶಕ್ತಿಯನ್ನು ಕೊಟ್ಟಿದ್ದಾನೆ. ನಾವು ಅದನ್ನು ಉಪಯೋಗಿಸದೆ, ತುಕ್ಕು ಹಿಡಿಯುವಂತೆ ಮಾಡಿದ್ದೇವೆ. ಆದ್ದರಿಂದಲೇ ಹಿರಿಯರು ಒಂದು ಮಾತು ಅಂದರು. ಶರೀರವನ್ನು ರಥವನ್ನಾಗಿ ಮಾಡಿಕೋ, ಇಂದ್ರಿಯಗಳನ್ನು ಕುದುರೆಗಳನ್ನಾಗಿ, ಮನಸ್ಸನ್ನು ಕಡಿವಾಣವಾಗಿ ಮಾಡಿಕೋ, ಬುದ್ಧಿ ಇದ್ದರೆ ಆ ಬುದ್ಧಿಯ ಕೈಯಲ್ಲಿ ಕಡಿವಾಣ ಕೊಡುವಂತವನಾಗು.

ಧೃತರಾಷ್ಟ್ರ! ಪಾಂಡವರು ಭುಜಬಲ, ನೈತಿಕಬಲ ಇಟ್ಟುಕೊಂಡು ಯುದ್ಧಕ್ಕೆ ತಯಾರಾಗಿದ್ದಾರೆ. ಆದರೆ ನಿನ್ನ ಮಕ್ಕಳಿಗೆ ನೈತಿಕಬಲ, ಭುಜಬಲ ಇಲ್ಲದೆ ಅವರು ಯುದ್ಧಕ್ಕೆ ಹೋಗುವ ಪ್ರಸಂಗ ಬಾರದಿರಲಿ. ಸ್ವಂತ ಬುದ್ಧಿಯಿಂದ ಕೆಲಸ ಮಾಡುವುದನ್ನು ನಿನ್ನ ಮಕ್ಕಳಿಗೆ ಕಲಿಸಿಕೊಡು. ಇದರಿಂದ ನೀನು ಜೀವನದಲ್ಲಿ ಕ್ಷೇಮದಿಂದ ಇರಲು ಸಮರ್ಥವಾಗುತ್ತಿ ಎಂದು ವಿದುರನು ಹೇಳುತ್ತಾನೆ. ★

# ತೈತ್ತಿರೀಯೋಪನಿಷತ್

**ಬರಹ: ವೆಂಕಟರಮಣ ಆಚಾರ್ಯ, ಉಡುಪಿ** **ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ**

ಅಧಿಲೋಕವನ್ನು ಉಪಾಸನೆ ಮಾಡಿದರೆ ಆಲೋಕದಲ್ಲಿ ತುಂಬಿರುವ ನಾರಾಯಣನನ್ನು ಉಪಾಸನೆ ಮಾಡಿದ ಹಾಗೆ ಆಗುತ್ತದೆ. ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿಗಳಲ್ಲಿ ಉಪಾಸನೆ ಮಾಡಿದರೆ ವಾಸುದೇವನನ್ನು ಉಪಾಸನೆ ಮಾಡಿದ ಫಲ ಇದೆ. ಜ್ಞಾನಪ್ರಪಂಚದಲ್ಲಿ ಭಗವಂತನನ್ನು ಉಪಾಸಿಸಿದರೆ ಸಂಕರ್ಷಣ ರೂಪಿ ಪರಮಾತ್ಮನನ್ನು ಉಪಾಸಿಸಿದಷ್ಟು ಫಲ ಇದೆ. ಈ ಸೃಷ್ಟಿ ಪ್ರಪಂಚದಲ್ಲಿ ಪ್ರದ್ಯುಮ್ನ ಪೂಜಿಸಿಕೊಳ್ಳುತ್ತಾ ಇದ್ದಾನೆ. ವ್ಯಕ್ತಿಯ ಅಧ್ಯಾತ್ಮ ಪ್ರಪಂಚದಲ್ಲಿ ಅನಿರುದ್ಧ ಇದ್ದು ನಿಯಂತ್ರಿಸುತ್ತಾ ಇದ್ದಾನೆ. ಆದರೆ ಒಟ್ಟು ಐದು ರೂಪಗಳನ್ನು ಒಂದೇ ಸಲ ಪೂಜಿಸಬೇಕಾದರೆ ಸಂಹಿತೆಯನ್ನು ಉಪಾಸಿಸಿದರೆ ಮಾತ್ರ ಸಾಧ್ಯ. ಸಂಹಿತೆಯನ್ನು ಉಪಾಸನೆ ಮಾಡಿದರೆ ಎಲ್ಲವನ್ನು ಉಪಾಸನೆ ಮಾಡಿದಂತೆ ಆಗುತ್ತದೆ. ಪೂರ್ವ ವರ್ಣದಲ್ಲಿ ಪಂಚರೂಪದ ಪರಮಾತ್ಮ ಇದ್ದಾನೆ. ಉತ್ತರ ವರ್ಣದಲ್ಲಿ ಪಂಚರೂಪದ ಪರಮಾತ್ಮ ಇದ್ದಾನೆ. ಸಂಧಿ, ಸಂಧಾನಗಳಲ್ಲೂ ಪಂಚರೂಪದ ಪರಮಾತ್ಮ ಇದ್ದಾನೆ. ಹೀಗೆ ಒಂದೊಂದು ವರ್ಣದಲ್ಲಿ ಪಂಚರೂಪದ ಭಗವತ್ಸನ್ನಿಧಾನ ಇದೆ. ಒಂದು ವರ್ಣವನ್ನು ಹೇಳಿದರೆ ಪಂಚರೂಪಿ ಪರಮಾತ್ಮನನ್ನು ಉಪಾಸಿಸಿದಷ್ಟು ಫಲ ಇದೆ. ಇದು ಉಪಾಸನೆಯಲ್ಲಿ ಇರತಕ್ಕ ಮುಖ. ಈ ಐದು ಸ್ಥಾನಗಳನ್ನೇ 'ಮಹಾಸಂಹಿತೆ' ಗಳೆಂದು ಹೇಳಿದ್ದಾರೆ. ವರ್ಣ ಶಬ್ದಗಳ ಸಂಕಲನಗಳನ್ನು ಕೇವಲ ಸಂಹಿತೆ ಎಂದು ಹೇಳಿದ್ದಾರೆ, ಈ ಐದು ಸ್ಥಾನಗಳನ್ನು 'ಮಹಾಸಂಹಿತೆ' ಗಳೆಂದು ಹೇಳುತ್ತಾರೆ. ಈ ಸಂಹಿತೆ ಎಂದರೆ ನಾವು ತಿಳಿದುಕೊಂಡ ಲೌಕಿಕವಾದ ಸಂಹಿತೆ ಅಲ್ಲ. ಅ +ಗ್ನಿ ಎಂಬುದು ಬರೇ ಅಕ್ಷರಗಳ ಸಂಧಿ. ಸಂಧಾನ ಅಲ್ಲ. ಅದು ಎರಡು ಭಗವಂತನ ರೂಪಗಳ ಸಮಾಗಮ. ಅಗ್ನಿ ಎಂದು ಹೇಳುವುದರಿಂದ ಮಹತ್ತಾದ ಭಗವಂತನ ಗುಣವನ್ನು ಗಾನ ಮಾಡಿದಂತೆ. ಹೀಗೆ ಆ ಮಹಾಸಂಹಿತೆಗಳನ್ನು ಹೇಳುತ್ತೇವೆ ಎಂದು ಹೇಳಿದರು. ಇಲ್ಲಿ 'ತಾ' ಎಂದು ಪ್ರಯೋಗ ಇದೆ. ಇವುಗಳು ಎಂದು ಹೇಳದೆ ಅವುಗಳು ಎಂದು ಹೇಳಿದ್ದಾರೆ. ಏಕೆಂದರೆ ಮಹಾಸಂಹಿತೆಗಳ ಪೂರ್ಣ ವಿವರಣೆ ನಮಗೆ ಸಿಗುವ ತನಕ ಅವು ನಮಗೆ ಗೊತ್ತಿಲ್ಲ. ಗೊತ್ತಾದ ನಂತರ ಈ ಮಹಾಸಂಹಿತೆಗಳು ಎಂದು ಹೇಳುತ್ತಾರೆ. ಸಂಹಿತೆಯಾಗಬೇಕಾದರೆ ನಾಲ್ಕು ರೂಪಗಳು ಬೇಕು. ಪೂರ್ವವರ್ಣ, ಉತ್ತರವರ್ಣ, ಸಂಧಿ, ಸಂಧಾನ ಇದ್ದಾಗ ಮಾತ್ರ ಸಂಹಿತೆಯಾಗುತ್ತದೆ. ಈ ಅಧಿಲೋಕದಲ್ಲಿ ನಾಲ್ಕು ರೂಪಗಳಾವುವು? ಮುಂದಿನ ಮಂತ್ರದಲ್ಲಿ ಈ ಮಹಾಸಂಹಿತೆಗಳನ್ನು ಬಹಳ ಸುಂದರವಾದ ಕಾವ್ಯಾತ್ಮಕ ಭಾಷೆಯಲ್ಲಿ ಹೇಳುತ್ತಾರೆ. ಸಂಹಿತೆ ಎಂಬುದು

ಸುಂದರವಾದ ಮಹಾಕಾವ್ಯ. ಇಡೀ ವಿಶ್ವವೇ ಭಗವಂತ ನಿರ್ಮಿಸಿದ ಒಂದು ಸುಂದರವಾದ ಮಹಾಕಾವ್ಯ. ಅದರಲ್ಲಿ ಚಂದ್ರ, ಸೂರ್ಯ, ನಕ್ಷತ್ರಗಳು ಬೆಳಕು ನೀಡುವದೇ ಒಂದು ಸುಂದರ ಮಹಾಕಾವ್ಯ. ಜ್ಞಾನ ಪ್ರಪಂಚವೇ ಒಂದು ಸುಂದರವಾದ ಮಹಾಕಾವ್ಯ. ಈ ಸೃಷ್ಟಿ ಪ್ರಪಂಚದಲ್ಲಿ ಪ್ರಜೆಗಳು ನಡೆಸುತ್ತಿರುವ ಸಂಸಾರವೇ ಒಂದು ಮಹಾಕಾವ್ಯ. ನಿರಂತರವಾದ ಸೃಷ್ಟಿ ಪ್ರವಾಹವೇ ಒಂದು ಸುಂದರವಾದ ಮಹಾಕಾವ್ಯ. ಒಬ್ಬೊಬ್ಬ ವ್ಯಕ್ತಿಯು ತನ್ನದೇ ಆದ ಗುಣದಿಂದ ಗುರುತಿಸಲ್ಪಡುತ್ತಾನೆ. ಒಬ್ಬೊಬ್ಬ ವ್ಯಕ್ತಿಯು ಭಗವಂತ ಸೃಷ್ಟಿಸಿದ ಸುಂದರವಾದ ಕಾವ್ಯ ಎಂದು ತಿಳಿದು ನೋಡು. ಕಾವ್ಯ ಆಗಬೇಕಾದರೆ ಪೂರ್ವವರ್ಣ ಬೇಕು. ಉತ್ತರವರ್ಣ ಬೇಕು, ಸಂಧಿ ಬೇಕು. ಸಂಧಾನ ಬೇಕು. ಪೂರ್ವವರ್ಣ ಹಾಗೂ ಉತ್ತರವರ್ಣ ಸೇರಿ ಶಬ್ದವಾದರೆ, ಶಬ್ದ ಸೇರಿ ವಾಕ್ಯ ಆಗುತ್ತದೆ. ಈ ವಾಕ್ಯಗಳು ಸೇರಿದ ನಂತರ ಸುಂದರವಾದ ಕಾವ್ಯದ ಸೃಷ್ಟಿ ಆಗುತ್ತದೆ. ಈ ಸೃಷ್ಟಿಯ ಮಹಾಕಾವ್ಯಗಳಾವುವು? ಇದನ್ನು ಮುಂದಿನ ಮಂತ್ರದಲ್ಲಿ ಹೇಳುತ್ತಾರೆ.

**ಅಥಾಧಿಲೋಕಮ್ । ಪೃಥಿವೀ ಪೂರ್ವರೂಪಮ್। ದ್ಯೌರುತ್ತರರೂಪಮ್ । ಆಕಾಶಃ ಸಂಧಿಃ । ವಾಯುಃ ಸಂಧಾನಮ್। ಇತ್ಯಧಿಲೋಕಮ್ । ಅಥಾಧಿಜ್ಯೌತಿಷಮ್ । ಅಗ್ನಿಃ ಪೂರ್ವರೂಪಮ್।ಆದಿತ್ಯ ಉತ್ತರರೂಪಮ್ । ಆಪಃ ಸಂಧಿಃ । ವೈದ್ಯುತಃ ಸಂಧಾನಮ್। ಇತ್ಯಧಿಜ್ಯೌತಿಷಮ್। ಅಥಾಧಿವಿದ್ಯಮ್। ಆಚಾರ್ಯಃ ಪೂರ್ವರೂಪಮ್। ಅಂತೇವಾಸ್ಯುತ್ತರರೂಪಮ್। ವಿದ್ಯಾಸಂಧಿಃ । ಪ್ರವಚನಂ ಸಂಧಾನಮ್। ಇತ್ಯಧಿವಿದ್ಯಮ್। ಅಥಾಧಿಪ್ರಜಮ್। ಮಾತಾ ಪೂರ್ವರೂಪಮ್। ಪಿತೋತ್ತರರೂಪಮ್। ಪ್ರಜಾಸಂಧಿಃ । ಪ್ರಜನನಂ ಸಂಧಾನಮ್। ಇತ್ಯಧಿಪ್ರಜಮ್। ಅಥಾಧ್ಯಾತ್ಮಮ್ ।ಅಧರಾ ಹನುಃ ಪೂರ್ವರೂಪಮ್। ಉತ್ತರಾ ಹನುರುತ್ತರರೂಪಮ್। ವಾಕ್ ಸಂಧಿಃ। ಜಿಹ್ವಾ ಸಂಧಾನಮ್। ಇತ್ಯಧ್ಯಾತ್ಮಮ್। ಇತೀ ಮಾ ಮಹಾಸಂಹಿತಾಃ ॥**

ಅಥ ಎಂಬ ಶಬ್ದದಿಂದ ಪ್ರಾರಂಭಿಸಿ ಹೇಳುತ್ತಾರೆ. ಅಥ ಎಂಬುದು ಕ್ರಮ ಸೂಚಕ ಶಬ್ದ. ಇಡೀ ವಿಶ್ವವೇ ಭಗವಂತ ನಿರ್ಮಿಸಿದ ಒಂದು ಸುಂದರವಾದ ಮಹಾಕಾವ್ಯ. ಇದರಲ್ಲಿ ಭೂಮಿಯೇ ಪೂರ್ವ ರೂಪ, ಸ್ವರ್ಗವೇ ಉತ್ತರ ರೂಪ. ಸಂಧಿ ಎಂದರೆ ಮಧ್ಯ. ಆಕಾಶವೇ ಭೂಮಿ, ಸ್ವರ್ಗಗಳಿಗೆ ಸಂಧಿ, ಸ್ವರ್ಗ, ಭೂಮಿಗಳಲ್ಲಿ ತುಂಬಿರುವ ವಾಯು ಮಂಡಲವೇ ಸಂಧಾನ. ಅನಂತಾನಂತ ಲೋಕಗಳನ್ನು ಸಂಧಾನ ಮಾಡುವ ವಾಯು ಶಕ್ತಿಯೇ ಸಂಧಾನ. ಇದೊಂದು ಮಹಾಕಾವ್ಯ. ಹೀಗೆ ಈ ಅಧಿಲೋಕ ಒಂದು ಸುಂದರವಾದ ಕಾವ್ಯ. ಈ ಜಗತ್ತು ಒಂದು ಮಹಾಕಾವ್ಯ. ಇದರ ನಂತರ ಜಗತ್ತಿನಲ್ಲಿರುವ ಬೆಳಕಿನ ಪ್ರಪಂಚವು ಸಹ ಒಂದು ಅದ್ಭುತವಾದ ಮಹಾಕಾವ್ಯ.

**(ಸಶೇಷ)**

# ಶ್ರೀಹರಿಭಕ್ತಿಸಾರ

-ಎ ।। ಹಯವದನ ಪುರಾಣಿಕ, ತಿರುಪತಿ

**ಪಂಟಿಸಿದ ಮದಮುಖರು ಕೆಲಕೆಲ**
**ರುಂಟು ರಿಪುಗಳು ದಟ್ಟಿಸುತ ಬಲು**
**ಕಂಟಕದಿ ಕಾಡುವರು ಕಾಯ್ಯೆ ಕಲುಷ ಸಂಹಾರ ।**
**ಬಂಟನಲ್ಲವೆ ನಾನು ದೀನರ**
**ನಂಟನಲ್ಲವೆ ನೀನು ನಿನ್ನೊಳ**
**ಗುಂಟೆ ನಿರ್ದಯ ನೋಡಿ ರಕ್ಷಿಸು ನಮ್ಮನನವರತ ››71››**

ಮುಖಾಮುಖಿಯಾಗಿ ನೇರವಾಗಿ ಹೋರಾಡುವ ಅಹಂಕಾರಿಗಳಾದ ಶತ್ರುಗಳು ಕೆಲವರಿರುತ್ತಾರೆ. ಇನ್ನು ಕೆಲವರು ಆಪತ್ತಿನಲ್ಲಿ ಬಲಗುಂದಿರುವಾಗ ಘರ್ಷಣ ಮಾಡುತ್ತ ಕಾಡುವವರು. ನೀನು ಅವರಿಂದ ನಮ್ಮನ್ನು ಕಾಪಾಡು. ಪಾಪನಾಶಕನು ನೀನು. ನಾನು ನಿನ್ನ ಸೇವಕ, ನೀನು ದೀನರಿಗೆ ಬಂಧು, ಅಲ್ಲವೆ? ನಿನ್ನಲ್ಲಿ ನಿರ್ದಯತೆ ಉಂಟೆ? ನೋಡಿ, ನಮ್ಮನ್ನು ಸದಾ ಕಾಪಾಡು.

## ಪಂಟಿಸಿದ ಮದಮುಖರು ಕೆಲ ಕೆಲರುಂಟು ರಿಪುಗಳು

ಶರೀರದ ಮೇಲೆ ನೇರವಾಗಿ ದಾಳಿ ಇಡುವ ಅಹಂಕಾರಿಗಳಾದ ಶತ್ರುಗಳು ಆಧಿಗಳು ಮತ್ತು ವ್ಯಾಧಿಗಳು, ಅಂದರೆ ಮನೋರೋಗಗಳು ಮತ್ತು ಶಾರೀರ ರೋಗಗಳು. ಎರಡಕ್ಕೂ ಕಾರಣ ಕಲುಷ. ಅಂದರೆ ಮನೋಮಲ ಶಾರೀರಮಲಗಳು. ಮನಸಿನಲ್ಲಿ ರಜಸ್ಸು ತಮಸ್ಸುಗಳು ಮಲಗಳು. ಅವುಗಳಿಂದ ಕಾಮಕ್ರೋಧಾದಿ ವಿಕಾರಗಳೂ ಅಪಸ್ಮಾರ ಉನ್ಮಾದಾದಿ ರೋಗಗಳೂ ಉಂಟಾಗಿ ನೇರವಾಗಿ ಮನಸಿನ ಮೇಲೆ ದಾಳಿ ಇಟ್ಟು ದುರ್ಬಲಗೊಳಿಸುತ್ತವೆ. ಮನೋದೌರ್ಬಲ್ಯದ ಪರಿಣಾಮವಾಗಿ ಶರೀರ ದೌರ್ಬಲ್ಯವೂ ಉಂಟಾಗುತ್ತದೆ. ಶರೀರದಲ್ಲಿ ವಾತಪಿತ್ತ ಕಫ ಧಾತುಗಳು ಸಮತೋಲ ತಪ್ಪಿದಾಗ ದೋಷಗಳಾಗಿ ಪರಿಣಮಿಸಿ ಶ್ವಾಸಕಾಸಾದಿ ಶಾರೀರ ರೋಗಗಳನ್ನು ಹುಟ್ಟು ಹಾಕುವವು. ಅದರಿಂದ ಶರೀರ ದೌರ್ಬಲ್ಯ, ಆ ಮೂಲಕ ಮನೋದೌರ್ಬಲ್ಯ. ಪ್ರಾಣವಾಯು ಶರೀರವನ್ನು ಕಾಪಾಡುತ್ತಿದ್ದರೂ ಶರೀರ ಕ್ರಮೇಣ ದುರ್ಬಲವಾಗುತ್ತದೆ. ಜೊತೆಗೆ ಮುಪ್ಪು ಶರೀರವನ್ನು ವ್ಯಾಪಿಸಿ ಅದನ್ನು ದುರ್ಬಲಗೊಳಿಸುತ್ತದೆ. ಪೂರ್ವಜನ್ಮದ ಪಾಪ ಈ ಎಲ್ಲ ಶತ್ರುಗಳಿಗೆ ಬೆಂಬಲ ನೀಡುತ್ತದೆ.

## ದಟ್ಟಿಸುತ ಬಲು ಕಂಟಕದಿ ಕಾಡುವರು

ಹೀಗೆ ಬಲು ಕಂಟಕದಲ್ಲಿ, ದೊಡ್ಡ ಆಪತ್ತಿನಲ್ಲಿ ಶರೀರ ಸಿಲುಕಿ ದುರ್ಬಲಗೊಂಡಿರುವಾಗಲೆ ಆ ಸಮಯನೋಡಿ, ಜ್ವರಗಳು ಚೆನ್ನಾಗಿ ಘರ್ಷಣೆ ಮಾಡಿ ಬಲವಾಗಿ ಕಾಟ ಕೊಡುತ್ತವೆ. ಆರೋಗ್ಯವೇ ಸಂಪತ್ತು, ರೋಗವೇ ವಿಪತ್ತು. ಆಧಿವ್ಯಾಧಿಗಳು ಶರೀರವುಮನಸ್ಸುಗಳನ್ನು ಹಿಂಡಿ ಜರ್ಜರಿತಗೊಳಿಸುವುದೇ ದೊಡ್ಡ ಆಪತ್ತು. ಅವುಗಳಿಗೆ ಶಾಂತಿ ಪ್ರಾಯಶ್ಚಿತ್ತಾದಿ ದೈವವ್ಯಪಾಶ್ರಯ ಚಿಕಿತ್ಸೆಯನ್ನೂ ಔಷಧೋಪಚಾರ ರೂಪವಾದ ಯುಕ್ತಿ-ವ್ಯಪಾಶ್ರಯ ಚಿಕಿತ್ಸೆಯನ್ನೂ ಚರಕ ಸಂಹಿತೆ ಎಂಬ ವೈದ್ಯಶಾಸ್ತ್ರ ವಿಧಾನ ಮಾಡಿದೆ. ಮುಪ್ಪಿಗೂ ರಸೌಷಧವಿಧಾನ ಉಕ್ತವಾಗಿದೆ. ಆದರೂ ಒಮ್ಮೆ ರೋಗಗಳಿಗೆ ಈಡಾದ ಶರೀರ ದುರ್ಬಲವಾಗಿ ತಿರುಗಿ ಅವೇ ರೋಗಗಳಿಗೆ ಕರೆ ನೀಡುತ್ತದೆ. ತಿರುಗಿ ಜರ್ಜರಿತವಾಗುತ್ತ ಹೋಗುತ್ತದೆ. ಕೊನೆಯಲ್ಲಿ ಜ್ವರಗಳಿಗೆ ಆಮಂತ್ರಣ ನೀಡುತ್ತದೆ.

ಶೈವ ವೈಷ್ಣವಗಳೆಂದು ಜ್ವರಗಳು ಎರಡು ವಿಧವೆಂದು ಭಾಗವತ ಹೇಳಿದೆ. ಅವುಗಳನ್ನು ಚರಕಸಂಹಿತೆ **'ಉಷ್ಣಸಮುತ್ಥಶೀತಾಭಿಪ್ರಾಯ'** ಮತ್ತು **'ಶೀತಸಮುತ್ಥ ಉಷ್ಣಾಭಿಪ್ರಾಯ'**ಗಳೆಂದು ವ್ಯವಹರಿಸಿದೆ. ಈ ಉಷ್ಣಶೀತಜ್ವರಗಳು ಶರೀರವನ್ನು ಸುಡುತ್ತವೆ. ಮನೆಗೆ ಬೆಂಕಿಬಿದ್ದಾಗ ಜನರು ಹೊರಗೆ ಧಾವಿಸುಂತೆ ಶರೀರ ಜ್ವರಕ್ಕೆ ತುತ್ತಾದಾಗ ಪ್ರಾಣವಾಯು ಹೊರಗೆ ಹೋಗುತ್ತದೆ. ಜೀವಕ್ಕೆ ಪ್ರಾಣಸಂಕಟಕೊಡುತ್ತದೆ. ಜೀವನೂ ಶರೀರದಲ್ಲಿ ಇರಲಾಗದೆ ಅವನೂ ಹೊರಗೆ ಹೋಗುತ್ತಾನೆ. ಹೀಗೆ ಜ್ವರಗಳ ಕಾಟ ಅಸಹನೀಯವಾಗಿರುತ್ತದೆ. ಇದು ಭಾಗವತ ಪುರಂಜನೋಪಾಖ್ಯಾನದಲ್ಲಿ ಸ್ಪಷ್ಟವಿದೆ.

## ಕಾಯ್ಯೆ ಕಲುಷ ಸಂಹಾರ

ಶ್ರೀಹರಿ, ನೀನು ಕಲುಷನಾಶಕ, ಪಾಪಪರಿಹಾರಕ. ನಿನ್ನ ನಾಮಸ್ಮರಣೆ ಪಾಪಾಟವಿಗೆ ಕಾಳ್ಗಿಚ್ಚು. ಪೂರ್ವಜನ್ಮದ ಪಾಪ ನಾಮಸ್ಮರಣೆಯಿಂದ ನಾಶವಾದರೆ ರೋಗಗಳಿಗೆ ಬೆಂಬಲವಿಲ್ಲವಾಗಿ ಅವು ಬಲಗುಂದುತ್ತವೆ. ಔಷಧೋಪಚಾರಗಳಿಂದ ಗುಣವಾಗುತ್ತವೆ. ಮದಮುಖರಾಗಿದ್ದವರು ಈಗ ಹಲ್ಲುಕಿತ್ತ ಹಾವಿನಂತಾಗುತ್ತಾರೆ. ಕಲುಷ ಎಂದರೆ ಪಾಪ. ಅಥವಾ ಕಲುಷ ಎಂದರೆ ಮನೋಮಲವಾದ ರಜಸ್ಸು ತಮಸ್ಸುಗಳು. ನಾಮಸ್ಮರಣೆಯಿಂದ ಅವೂ ಉಪಶಮಹೊಂದಿದರೆ ಮನಸ್ಸಿಗೆ ಆರೋಗ್ಯ. ಅದರಿಂದ ಶರೀರಕ್ಕೂ ಆರೋಗ್ಯ ಲಭಿಸುತ್ತದೆ. ಹೀಗೆ, ಕಲುಷ ಸಂಹಾರಕನಾದ ಹರಿಯೆ, ನಮ್ಮನ್ನು ಕಾಪಾಡು.

(...15ನೇ ಪುಟದಲ್ಲಿ)

ಅವಲೋಕನ

# ಹರಿತ, ಸೂಕ್ಷ್ಮ, ಗಾಢ ಪ್ರಜ್ಞೆಯ ಶ್ರೀವಿಬುಧೇಶತೀರ್ಥರ ಚಿಂತನಾಲಹರಿ

-ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ

ಇತ್ತೀಚೆಗಷ್ಟೇ ಶ್ರೀ ಹರಿಯೆಡೆಗೆ ಸಾಗಿದ ಅದಮಾರು ಮಠಾಧೀಶ ಶ್ರೀವಿಬುಧೇಶತೀರ್ಥರ ಹೆಸರು ಕೇಳಿದಾಕ್ಷಣ ಅವರ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಹಾಗೂ ಚಾಲನೆಯ ಅಸಾಧಾರಣ ಕೌಶಲ್ಯ, ಅದಕ್ಕೆ ಬೇಕಾದ ಶಿಸ್ತಿನ, ನಿಷ್ಠುರತೆಯ ಪ್ರಜ್ಞೆ-ಇವೆಲ್ಲ ನೆನಪಿಗೆ ಬರುವುದು ಸಹಜ. ಇವುಗಳ ಜೊತೆಗೆ ಅವರ ಚಿಂತನಾಲಹರಿಯೂ ಗಮನಾರ್ಹ. ಅದನ್ನು ಐದು ಅಂಶಗಳಲ್ಲಿ ಪರಿಶೀಲಿಸೋಣ.

## ಹೃದಯದ ಭಾಷೆಗೆ ಪ್ರಾಶಸ್ತ್ಯ

**'ಶಾಸ್ತ್ರಾರ್ಥ ಯುಕ್ತ್ಯಾನುಭವಸೂತ್ರವಮಂ ಪ್ರಮಾಣಂ...'** ಶಾಸ್ತ್ರಾರ್ಥವನ್ನು ಅನುಭವಕ್ಕೆ ತಂದುಕೊಂಡಾಗ ಅದು ಉತ್ತಮ ಪ್ರಮಾಣವೆನಿಸುವುದೆಂಬ ಶ್ರೀಮದಾಚಾರ್ಯರ ಸಂದೇಶವನ್ನು ಮತ್ತೆ ಮತ್ತೆ ಉಲ್ಲೇಖಿಸುತ್ತಿದ್ದ ಶ್ರೀವಿಬುಧೇಶತೀರ್ಥರ ಪ್ರಕಾರ ಶ್ರೀಮಧ್ವಾಚಾರ್ಯರ ತತ್ವಗಳು ಅನುಭವಕ್ಕೆ ತೀರ ಹತ್ತಿರವಾದುದರಿಂದಲೇ ಹೆಚ್ಚಿನವರಿಗೆ ಅವು ರುಚಿಸುತ್ತವೆ. ಮಧ್ವಮತ ಅನುಭವಾನುಗುಣವಾಗಿರುವುದರಿಂದ ಅದು ಎಲ್ಲರಿಂದಲ್ಲೂ ಮಾನ್ಯವಾಗಲೇಬೇಕು. ಆದ್ದರಿಂದಲೇ ಪ್ರಪಂಚದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮಾಧ್ವರೇ ಇರುವರು ಎಂಬುದು ಶ್ರೀಪಾದರ ಉದ್ಘೋಷಣೆ. ಕೆಲವರಿಗೆ ಶ್ರೀಮಧ್ವರ ಪರಿಚಯ ಇಲ್ಲದಿರಬಹುದು. ಶ್ರೀಮಧ್ವರು ಪ್ರತಿಪಾದಿಸಿರುವ ಹೆಚ್ಚಿನ ತತ್ವಗಳನ್ನು ಒಪ್ಪಿಕೊಳ್ಳುವ ಪ್ರಯುಕ್ತ ಅವರೆಲ್ಲ ಮಾಧ್ವರೇ. ಪ್ರಪಂಚದಲ್ಲಿ ವ್ಯಾಪಕವಾಗಿ ಇರುವ ಕ್ರೈಸ್ತಧರ್ಮ, ಇಸ್ಲಾಂಧರ್ಮಗಳಲ್ಲೂ ಜಗತ್ಸತ್ಯತ್ವ, ಜೀವೇಶಭೇದ ಮೊದಲಾದ ತತ್ವಗಳನ್ನೂಒಪ್ಪಲಾಗಿದೆ ತಾನೇ? ಆದ್ದರಿಂದ ಆಯಾ ಧರ್ಮೀಯರೂ ಹೆಚ್ಚಿನ ಮಾಧ್ವ ತತ್ವಗಳನ್ನೂ ಒಪ್ಪಿಕೊಂಡಂತೆಯೇ. ಹಾಗಾಗಿ ಅವರೂ ಮಾಧ್ವರೇ.

ಹೀಗೆ ಪ್ರಪಂಚದಲ್ಲಿ ಮಾಧ್ವರ ಸಂಖ್ಯೆ ಅಧಿಕವಾಗಿರುವುದೂ ಮಾಧ್ವಸಿದ್ಧಾಂತ ಶ್ರೇಷ್ಠ ಎಂಬುದಕ್ಕೆ ಒಂದು ಕಾರಣವೆನಿಸಬಲ್ಲದು.

ಈ ರೀತಿಯಾಗಿ ಮಾಧ್ವಮತದ ಶ್ರೇಷ್ಠತ್ವವನ್ನು ಸಮರ್ಥಿಸುತ್ತಿದ್ದ ಶ್ರೀಪಾದರು ಅದಕ್ಕೆ ಮೂಲಭೂತಕಾರಣವಾಗಿ ತೋರಿಸುತ್ತಿದ್ದ ಅನುಭವಾರೂಢತ್ವವನ್ನು 'ಹೃದಯದ ಭಾಷೆ' ಎಂದು ಗುರುತಿಸಿ ಅದರ ಹಿರಿಮೆಯನ್ನು ದಾಸಸಾಹಿತ್ಯ ಸಮ್ಮೇಲನವೊಂದರಲ್ಲಿ (6-2-89) ಹೀಗೆ ಸಾರಿದ್ದರು. ನಾಗರಿಕತೆ ಹೆಚ್ಚಾದಂತೆ ನಮ್ಮ ವ್ಯವಹಾರಗಳೆಲ್ಲ ಬುದ್ಧಿಯ ಭಾಷೆಯಲ್ಲೇ ನಡೆಯುತ್ತಿವೆ. ವಾಸ್ತವವಾಗಿ

ಹೃದಯ ಬುದ್ಧಿಯನ್ನು ಆಳುವಂತಾಗಬೇಕು. ಭಗವಂತ ನಮ್ಮ ಹೃದಯದ ಭಾಷೆಗೆ ಒಲಿಯುವುದೇ ಹೊರತು ಬುದ್ಧಿಯ ಭಾಷೆಗೆ ಅಲ್ಲ. ಹೃದಯದ ಸಂಪರ್ಕವಿಲ್ಲದ ಬುದ್ಧಿಯ ಭಾಷೆ ಎಷ್ಟೇ ನಾಜೂಕಾಗಿದ್ದರೂ, ಭಗವಂತನು ಅದನ್ನು ಮೆಚ್ಚಲಾರ. **'ನಾಯಮಾತ್ಮಾ ಪ್ರವಚನೇನ ಲಭ್ಯ....'** ಎಂಬ ಉಪನಿಷತ್ತಿನ ಸಂದೇಶದ ಆಂತರ್ಯ ಇದೇ.

ಯಮದೇವ ನಚಿಕೇತನಿಗೆ ಭಗವಂತನನ್ನು ಪರಿಚಯಿಸಿಕೊಡುತ್ತ **'ಯ ಏಷು ಸುಪ್ತೇಷು...'** ಎಂದು ಪ್ರತಿಯೊಬ್ಬರ ಅನುಭವಕ್ಕೆ ಬಂದಿರುವ ಸ್ವಪ್ನಕರ್ತೃತ್ವ ಮಹಿಮೆಯನ್ನೇ ಉಪದೇಶಿಸಿರುವನು. ಬ್ರಹ್ಮಸೂತ್ರದಲ್ಲೂ **'ಭಗವದ್ಭಕ್ತ್ಯರ್ಥಂ ತನ್ಮಹಿಮೋಕ್ತಿ....'** ಎಂದು ಭಗವಂತನ ಮಹಿಮೆಯನ್ನು ಹೇಳಲು ಪ್ರಾರಂಭಿಸಿದವರು ಮೊದಲು ಸ್ವಪ್ನಕರ್ತೃತ್ವವನ್ನೇ ನಿರೂಪಿಸಿರುವರು. ಶ್ರೀವಾದಿರಾಜರೂ ಯುಕ್ತಿಮಲ್ಲಿಕಾದಲ್ಲಿ **'ತಸ್ಮೈಕಸ್ಮೈಚಿದಸ್ಮನ್ಮನಸಿ ಧೃತಕಥಾವಿಸ್ಮೃತೌ ಸ್ಮಾರಕಾಯ'** ಎಂದು ಮರೆತು ಹೋದಾಗ ಜ್ಞಾಪಿಸಿಕೊಡುವ ದೇವರಿಗೆ ಪ್ರಣಾಮವನ್ನು ಸಲ್ಲಿಸುವ ಮೂಲಕ ಎಲ್ಲರ ಅನುಭವಕ್ಕೆ ಬರುವ ಮಹಿಮೆಯನ್ನೇ ಉಲ್ಲೇಖಿಸಿರುವರು.

ಉಪನಿಷತ್ತುಗಳು, ಗೀತೆ- ಇತ್ಯಾದಿ ನಮ್ಮ ಪ್ರಾಚೀನ ಶಾಸ್ತ್ರಗಳೆಲ್ಲ ಹೆಚ್ಚಾಗಿ ಹೃದಯಭಾಷೆಯಲ್ಲೇ ಇವೆ. ಹಾಗಾಗಿ ಹೃದಯ ಭಾಷೆಯ ಪರಿಚಯವಿಲ್ಲದ ' ವಿಚಾರವಾದಿ' ಗಳಿಗೆ ಅವು ಶುಷ್ಕವಾಗಿ ಕಂಡರೂ ಆಶ್ಚರ್ಯವಿಲ್ಲ.

ದಾಸಸಾಹಿತ್ಯದ ಬಹುಭಾಗವೂ ಇಂತಹ ಹೃದಯಭಾಷೆಯಲ್ಲೇ ರಚಿತವಾಗಿರುವುದರಿಂದ ಹೃದಯವಂತರಷ್ಟೇ ಅದರ ಸವಿಯನ್ನು ಅನುಭವಿಸಬಲ್ಲರು.

### ಮಧ್ವಸಿದ್ಧಾಂತದ ಹಿರಿಮೆಯ ಪ್ರತಿಪಾದನೆ

ಮಧ್ವಸಿದ್ಧಾಂತದ ತತ್ವಗಳನ್ನು ತಮ್ಮ ಅನುಭವದ ಕುಲುಮೆಯಲ್ಲಿ ಸಂಸ್ಕ ರಿಸುತ್ತಿದ್ದ ಶ್ರೀಪಾದರು ಶ್ರೀಸಾಮಾನ್ಯನು ಒಪ್ಪುವಂತೆ ಮಾಧ್ವತತ್ವಗಳನ್ನು ಪ್ರಸ್ತುತಪಡಿಸುತ್ತಿದ್ದರು. ಶ್ರೀಮಧ್ವಾಚಾರ್ಯರು ಬೋಧಿಸಿದ ಪ್ರೇಮಸಂದೇಶವನ್ನು ಚೆನ್ನಾಗಿ ಪರಿಶೀಲಿಸಿದರೆ ಪ್ರತಿಯೊಬ್ಬರೂ ಮಾಧ್ವತತ್ವಜ್ಞಾನದೆಡೆಗೆ ಧಾವಿಸಿ ಬರುವುದರಲ್ಲಿ ಸಂದೇಹವಿಲ್ಲ.ಪ್ರೇಮ, ವಿಶ್ವಾಸ ಯಾರಿಗೆ ಬೇಕಿಲ್ಲ? ಯಾರಿಂದ ನಾವು ಪ್ರೇಮವನ್ನೂ, ವಿಶ್ವಾಸವನ್ನೂ ನಿರೀಕ್ಷಿಸುವೆವೋ ಅವರಿಂದ ಅವು ದೊರಕದಿದ್ದಲ್ಲಿ ನಿದ್ದೆಯೇ ಬರಲಾರದೆನ್ನುವಷ್ಟೂ ಬದುಕಿನಲ್ಲಿ ದೊಡ್ಡ ಪಾತ್ರ ಪ್ರೇಮವಿಶ್ವಾಸಗಳದ್ದು. ಅಂತಹ ಪ್ರೇಮ ವಿಶ್ವಾಸಗಳ ಮೂಲ ನೆಲೆ ಭಗವಂತ. ಅವನು ಎಲ್ಲರ ಹೃದಯದಲ್ಲಿದ್ದು ಪ್ರೇಮ ವಿಶ್ವಾಸಗಳನ್ನು ಚಿಮುಕಿಸುವವನು. ಹೀಗೆಂದು ಸಾರಿದ 'ಭಕ್ತಿ ಸಂದೇಶ' ವನ್ನು ಯಾರು ತಾನೇ ಒಪ್ಪಲಾರರು? ಎಂಬುದು ಶ್ರೀಪಾದರ ಸವಾಲು.

ಮಧ್ವಸಿದ್ಧಾಂತದಲ್ಲಿ ವಿಶೇಷವಾಗಿ ಪ್ರತಿಪಾದಿತವಾಗಿರುವ ಭಗವಂತನ ಬಗೆಗೆ ದಾಸ್ಯದಔಚಿತ್ಯವನ್ನು ಶ್ರೀಪಾದರು ಸಮರ್ಥಿಸಿರುವ ಪರಿ ಇದು. ದಾಸ್ಯ ಎಂದರೆ ಗುಲಾಮಗಿರಿ ಎಂದಿಟ್ಟುಕೊಂಡು ಅಂತಹ ದಾಸ್ಯ ಎಂದಾಕ್ಷಣ ಜುಗುಪ್ಸೆ ಪಡುವವರು, ಆಕ್ರೋಶತಾಳುವವರು ಇದ್ದಾರೆ. ಅಂತಹವರು ಮಧ್ವಸಿದ್ಧಾಂತ ಸಮರ್ಥಿಸುವ ದಾಸ್ಯವನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ.

ನಾವು ನಮ್ಮ ಪ್ರತಿಯೊಂದು ಚಟುವಟಿಕೆಗಾಗಿಯೂ ಭಗವಂತನನ್ನು ಸಂಪೂರ್ಣವಾಗಿ ಅವಲಂಬಿಸಿರುವೆವು. ಕ್ಷಣಕ್ಷಣಕ್ಕೆ ನಡೆಯುತ್ತಿರುವ ನಮ್ಮ ಶ್ವಾಸೋಚ್ಛ್ವಾಸಗಳೂ ಅವನ ನೆರವಿನಿಂದಲೇ ನಡೆಯುತ್ತಿರುವಂತಹದ್ದು. **'ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿಕಶ್ಚನ । ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ'** ಎಂಬ ಕಾಠಕೋಪನಿಷತ್ತು ನಮ್ಮ ಉಸಿರಾಟ ಬರೇ ಪ್ರಾಣಾಪಾನವಾಯುಗಳಿಂದಾಗಲೀ, ಅವುಗಳ ಅಭಿಮಾನಿಗಳಿಂದಾಗಲೀ ಅಲ್ಲ, ಅವರೂ ಯಾರನ್ನು ಆಶ್ರಯಿಸಿರುವರೋ ಅಂತಹ ಭಗವಂತನಿಂದಾಗಿಯೇ ಉಸಿರಾಡುವುದು, ಬದುಕುವುದು ಎಂದು ಸಂದೇಶಿಸಿದೆ. ಅಂತ್ಯ ಕಾಲದಲ್ಲಿ ಉಸಿರೆಳೆಯುತ್ತಿರುವ ವ್ಯಕ್ತಿಯನ್ನು ಪರಿಶೀಲಿಸಿದರೆ ಉಸಿರಾಟ ನಡೆಸುವುದೂ ಎಷ್ಟು ಕಷ್ಟ ಸಾಧ್ಯ. ಚಟುವಟಿಕೆ ಎಂಬುದಾಗಿಯೂ, ಅದಕ್ಕೂ ಭಗವಂತನ ನೆರವು ಬೇಕೇ ಬೇಕು ಎಂಬುದಾಗಿಯೂ ಮನದಟ್ಟಾಗದಿರದು.

ಹೀಗೆ ನಮ್ಮ ಪ್ರತಿಯೊಂದು ವ್ಯವಹಾರವೂ ಮುಖ್ಯವಾಗಿ ಅವನ ಅವಲಂಬನೆಯಿಂದಲೇ ನಡೆಯುತ್ತಿದೆ ಎಂಬ ಸತ್ಯದ ಪ್ರಜ್ಞೆಯೇ 'ದಾಸ್ಯಭಾವ' ಎನಿಸಿದೆ.

'ದಾಸನ ಮಾಡಿಕೋ ಎನ್ನ....' ಮುಂತಾದ ಹರಿದಾಸ ಸಾಹಿತ್ಯದಲ್ಲಿ ಕೇಳಿಕೊಂಡಿರುವ ದಾಸ್ಯ ಈ ಬಗೆಯದ್ದೇ.

ಈ ದಾಸ್ಯಭಾವ ಮೋಕ್ಷಪುರುಷಾರ್ಥ ಗಳಿಸಲು ಅವಶ್ಯಕವಾಗಿರುವಂತೆ ನಮ್ಮ ಅನೇಕ ಲೌಕಿಕ ಸಮಸ್ಯೆಗಳ ಪರಿಹಾರಕ್ಕೂ ಅತ್ಯಾವಶ್ಯಕವಾದುದು. ನಮ್ಮಲ್ಲಿ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಹೀಗೆ ಬೇರೆ ಬೇರೆ ಮಟ್ಟದ ಸಮಸ್ಯೆಗಳಿವೆ. ಈ ಎಲ್ಲ ಸಮಸ್ಯೆಗಳಿಗೂ ಮೂಲ ಕಾರಣ ಅಹಂಕಾರ ಆಗಿರುತ್ತದೆ. ನಮ್ಮ ಅಹಂಕಾರ ಒಂದಲ್ಲ ಒಂದು ರೀತಿಯಿಂದ ಪ್ರಭಾವ ಬೀರಿ ಯಾವುದಾದರೊಂದು ಸಮಸ್ಯೆಯನ್ನು ಹುಟ್ಟಿಸಿ ಹಾಕುವುದು. ಇದರಿಂದಾಗಿ ದುಃಖ ದುಮ್ಮಾನಗಳು. ಹೀಗೆ ಎಲ್ಲ ಸಮಸ್ಯೆಗಳಿಗೂ ಕಾರಣದಂತಿರುವ ಅಹಂಕಾರದ ಕೊಳೆಯನ್ನು ತೊಳೆಯಲು ಯಾವುದಾದರೊಂದು ಸಾಧನವಿದ್ದರೆ ಅದು 'ದಾಸ್ಯಭಾವ'. ಇದನ್ನು ಹೃದ್ಗತ ಮಾಡಿಕೊಂಡಂತೆ ನಮ್ಮಲ್ಲಿಯ ಅಹಂಕಾರ ಕ್ರಮೇಣ ಕರಗುತ್ತದೆ. ಜೊತೆಗೆಯೇ ಆ ಅಹಂಕಾರ ಪ್ರಯುಕ್ತಗಳಾದ ಸಮಸ್ಯೆಗಳೂ, ದುಃಖ ದುಮ್ಮಾನಗಳೂ ಕ್ರಮೇಣ ಪರಿಹೃತಗಳಾಗುವುದು. ಹೀಗೆ ಮಧ್ವಸಿದ್ಧಾಂತ ಬೆಳಕು ಚೆಲ್ಲುವ 'ದಾಸ್ಯಭಾವ' ವಿಶ್ವಶಾಂತಿಗೆ ಮುಖ್ಯವಾದ ಮಂತ್ರ ಎನಿಸಿದೆ.

## ಅದ್ವೈತಮತದ ನಿರಾಕರಣೆ

ಶ್ರೀಪಾದರು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿದ್ದರೂ ಅದ್ವೈತಮತದ ನಿರಾಕರಣೆಗೆ ಸಾಮರಸ್ಯ ಹೆಸರಿನಿಂದ ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ ಎಂಬುದು ಗಮನಾರ್ಹ.

ಶ್ರೀಪಾದರ ಪ್ರಕಾರ ಅದ್ವೈತ ಸಿದ್ಧಾಂತದ 'ಕಾಣುವ ಪ್ರಪಂಚ' ಇಲ್ಲ ಇತ್ಯಾದಿ ತತ್ವಗಳು ಅನುಭವಕ್ಕೆ ತೀರಾ ವಿರುದ್ಧವಾದವು. ಉಡುಪಿ ಕೃಷ್ಣನನ್ನು ಕಂಡು, ಆರಾಧಿಸಿ ಆನಂದವನ್ನು ಅನುಭವಿಸುವೆವು. ಅಂತಹ ಕೃಷ್ಣನ ಪ್ರತಿಮೆಯೇ ಇಲ್ಲ. ಬರೇ ಕಂಡದ್ದಷ್ಟೇ ಎಂದಾಗ ನಮ್ಮ ಭಾವುಕ ಹೃದಯಕ್ಕೆ ಎಷ್ಟು ಆಘಾತ ಆಗದಿರದು! ಅಷ್ಟೇ ಆಘಾತ, ನಿರಾಸೆ ಭಗವಂತನು ನಿರ್ಮಿಸಿದ ಪ್ರಪಂಚವನ್ನು ಮಿಥ್ಯಾ ಎಂದಾಗಲೂ ಆಗುವುದು. ಅಲ್ಲದೆ ಪ್ರಪಂಚ ಮಿಥ್ಯಾ ಆದಲ್ಲಿ ನಮ್ಮ ಪೂಜೆ ಪುರಸ್ಕಾರಾದಿಗಳೆಲ್ಲ ಅರ್ಥಹೀನ ಎಂದಾದೀತು. ಮಿಥ್ಯಾತ್ವವಾದದ ಈ ನ್ಯೂನತೆಯನ್ನು ಅರಿಯದೆಯೇ ಜನ ಅದನ್ನು ಅವಲಂಬಿಸುತ್ತಿದ್ದಾರಷ್ಟೆ. ಶಂಕರಾಚಾರ್ಯರ ಮತದ ಪ್ರಕ್ರಿಯೆಗಳನ್ನು ಚೆನ್ನಾಗಿ ಅರಿತರೆ ಹೆಚ್ಚಿನವರಿಗೆ ಅದು ಖಂಡಿತಾ ಹಿಡಿಸದು ಎಂಬುದು ಶ್ರೀಪಾದರ ಅನಿಸಿಕೆ.

ಹೀಗಿದ್ದರೂ ಶಾಂಕರ ಮತ ಕೆಲವೆಡೆ ಪ್ರಸಿದ್ಧಿ ಹೊಂದಿರಲು ಶ್ರೀಪಾದರು ಆಡು-ಹಂದಿಯ ಕಥೆಯೊಂದರ ಮೂಲಕ ಸಮರ್ಥಿಸುತ್ತಿದ್ದರು (7-2-87) ಬಡಪಾಯಿಯೊಬ್ಬ ಆಡನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ಅದನ್ನು ಕಂಡ ಠಕ್ಕರು ಕ್ರಮೇಣ ಒಬ್ಬೊಬ್ಬರಾಗಿಯೇ ಬಂದು 'ಹಂದಿಯನ್ನು ಯಾಕೆ ಕೊಂಡೊಯ್ಯುತ್ತಿರುವಿ' ಎಂದು ಬೇರೆ ಬೇರೆ ಭಂಗಿಯಲ್ಲಿ ಹೇಳುತ್ತ ಕ್ರಮೇಣ ಅವನಿಗೆ ತಾನು ಹೊರುತ್ತಿರುವುದು ಆಡೋ, ಹಂದಿಯೋ ಎಂಬ ಸಂದೇಹವೂ, ಕೊನೆಗೆ ಆಡು ಅಲ್ಲ, ಹಂದಿಯೇ ಎಂಬ ವಿಪರೀತ ಜ್ಞಾನವೂ ಬಂದು ಆಡನ್ನು ಅಲ್ಲೇ ಬಿಟ್ಟು ಬಿಡುವಂತಾಯಿತು. 'ಶಂಕರಾಚಾರ್ಯರೇ, ನಿಜವಾದ ಆಚಾರ್ಯರು, ಅವರ ತತ್ವಜ್ಞಾನವೇ ನಿಜವಾದ ತತ್ವಜ್ಞಾನ' ಎಂಬುದಾಗಿ ಅನೇಕರು ಭಾವಿಸಿಕೊಂಡಿರುವುದೂ ಈ ಆಖ್ಯಾಯಿಕೆಯ ಬಡಪಾಯಿಯಂತೆಯೇ. ಶಂಕರಾಚಾರ್ಯರ ಹಾಗೂ ಅವರ ತತ್ವಜ್ಞಾನದ ವಿಚಾರ ಮತ್ತೆ ಮತ್ತೆ ಕಿವಿಗೆ ಬಿದ್ದಾಗ ಕ್ರಮೇಣ 'ಬ್ರೈನ್ ವಾಷ್ ' ಆಗಿ ತಾನೂ ಆ ವಿಚಾರವನ್ನು ಒಪ್ಪಿಕೊಳ್ಳುವ ಸ್ಥಿತಿಯಾಗಿದೆ ಹೊರತು ಶಂಕರಾಚಾರ್ಯರು ದೊಡ್ಡವರು, ಅವರ ತತ್ವಜ್ಞಾನ ದೊಡ್ಡದು ಎನ್ನುವವರಿಗೆ ಶಂಕರಾಚಾರ್ಯರೆಂದರೆ ಯಾರು ಅವರು ಯಾಕೆ ದೊಡ್ಡವರು? ಅವರ ಸಿದ್ಧಾಂತವೇನು? ಎಂದೆಲ್ಲ ಗೊತ್ತಿರಬೇಕೆಂದಿಲ್ಲ. ಬೌದ್ಧರ ಪ್ರಭಾವದಿಂದ ವೇದಗಳೇ ಅಪ್ರಮಾಣಗಳೆಂದು ಆಗುವ ಸ್ಥಿತಿಯಲ್ಲಿ 'ವೇದ ಪ್ರಮಾಣ' ಎಂದು ಶಬ್ದಮಾತ್ರದಿಂದಾದರೂ ಸಾರಿದರೆಂದು ಅಂದು ಶಂಕರಾಚಾರ್ಯರ ಅನುಯಾಯಿಗಳಾದರು. ಆದರೆ ಬೌದ್ಧರಿಗಿಂತ ಅಧಿಕವಾಗಿ ವೇದಪ್ರಾಮಾಣ್ಯವನ್ನು ಹೇಗೆ ಶಂಕರಾಚಾರ್ಯರು ಪ್ರತಿಪಾದಿಸಿರುವರೆಂಬ

ಪರಿಶೀಲನೆಯನ್ನು ನಡೆಸಲೇ ಇಲ್ಲ.

## ಉಪನಿಷತ್ ಸಂದೇಶಗಳ ಮನನ

ಶ್ರೀಪಾದರ 'ಪೇಟೆಂಟ್ ಸಬ್ಜೆಕ್ಟ್' ಉಪನಿಷತ್ತುಗಳು. ಆದುದರಿಂದಲೆ ಅವರು ಸಪ್ತೋಪನಿಷದಃ (ಮಾಧ್ವ ಭಾಷ್ಯೋಪೇತಾಃ) ಎಂದು ಮಾಧ್ವಭಾಷ್ಯ ಸಹಿತವಾಗಿ ಏಳು ಉಪನಿಷತ್ತುಗಳನ್ನು ಶುದ್ಧಪಾಠದೊಂದಿಗೆ ಪ್ರಕಟಿಸಿದ್ದರು. ಆಂಗ್ಲಭಾಷೆಯಲ್ಲಿ ಬರೆದ ಅವರ ಪುಟ್ಟ Introduction ನಿಂದ ಕೂಡಿದ ಆ ಉಪನಿಷತ್ತುಗಳ ಕೃತಿಯನ್ನು ಪ್ರಪಂಚದ ಎಲ್ಲ ವಿಶ್ವವಿದ್ಯಾಲಯಗಳಿಗೆ ಕಳುಹಿಸಿಕೊಡಬೇಕೆಂಬ ಅವರ ಕನಸು ನನಸಾಗಿದೆಯೋ ಇಲ್ಲವೋ.

ಉಪನಿಷತ್ತುಗಳ ಸಂದೇಶಗಳನ್ನು ಯಾವಾಗಲೂ ಮೆಲುಕು ಹಾಕುತ್ತ ತಮ್ಮದಾಗಿಸಿಕೊಳ್ಳುತ್ತಿದ್ದರು.

ಹುಬ್ಬಳ್ಳಿಯಲ್ಲಿ ಒಮ್ಮೆ (28-11-81) ಈಶಾವಾಸ್ಯೋಪನಿಷತ್ತಿನ ಬಗ್ಗೆ ಪ್ರವಚನ ನೀಡುತ್ತ ಪ್ರಸ್ತುತಪಡಿಸಿರುವ ಅವರ ವಿಚಾರ ಹೀಗಿದೆ.

**'ಹಿರಣ್ಮಯೇನ ಪಾತ್ರೇಣ.....'** ಎಂಬ ಈಶಾವಾಸ್ಯೋಪನಿಷತ್ತಿನ ಮಂತ್ರದಲ್ಲಿ ಸೂರ್ಯಮಂಡಲದಿಂದ ಸೂರ್ಯನಾರಾಯಣನ ಮುಖ ಆವರಿಸಲ್ಪಟ್ಟಿದ್ದು, ಅದರ ಅನಾವರಣಕ್ಕಾಗಿ ಪ್ರಾರ್ಥಿಸಲಾಗುತ್ತಿದೆ. ಎಂದು ವ್ಯಾಖ್ಯಾನಿಸಲಾಗುವುದು.

ಆದರೆ **'ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ'**ಭಗವಂತನ ಕಾಂತಿಯಿಂದಲೇ ಉಳಿದೆಲ್ಲ ಪ್ರಕಾಶಕ ಪದಾರ್ಥಗಳು ಬೆಳಗುತ್ತಿವೆ ಎಂಬ ಹೆಗ್ಗಳಿಕೆಗೆ ಪಾತ್ರನಾದ ಭಗವಂತನ ಮುಖ ಸೂರ್ಯಮಂಡಲದಿಂದ ಆವರಿಸಲ್ಪಟಿದೆ ಎಂದರೆ ಮಿಣುಕು ಹುಳವೊಂದರಿಂದ ಸೂರ್ಯಮಂಡಲ ಆವರಿಸಲ್ಪಟ್ಟಿದೆ ಎನ್ನುವಷ್ಟೇ ಹಾಸ್ಯಾಸ್ಪದ ಎಂದು 'ಪೂರ್ವಪಕ್ಷ' ಮಾಡಿದ ಶ್ರೀಪಾದರು ಸಾಂಕೇತಿಕಾರ್ಥವನ್ನು ಇಟ್ಟುಕೊಂಡು ಹೊರಟ ಮಾತು ಅದಾಗಿದೆ ಎಂದು ಅಭಿಪ್ರಾಯಪಟ್ಟು ಆ ಸಾಂಕೇತಿಕಾರ್ಥವನ್ನು ಹೀಗೆ ಬೆಳಗಿಸಿದ್ದರು. ಸೂರ್ಯಮಂಡಲದಲ್ಲಿ ಸನ್ನಿಹಿತನಾಗಿರುವ ಸೂರ್ಯನಾರಾಯಣನ ಸ್ವರೂಪ ಜ್ಞಾನ ಬರಲು ಸೂರ್ಯಮಂಡಲ ಅಡ್ಡ ಬಂದಿದೆ ಎಂಬುದು ಆ ಮಾತಿನ ಅರ್ಥ. ನಮಗೆ ಮಳೆ, ಬಿಸಿಲು, ಉಷ್ಣ ಬೆಳೆ ಇತ್ಯಾದಿಗಳನ್ನು ನೀಡಿ ನಮ್ಮನ್ನು ಕಾಪಾಡುತ್ತಿರುವವನು ಸೂರ್ಯಾಂತರ್ಗತ ಸೂರ್ಯ ನಾರಾಯಣ. ಇದನ್ನು ನಾವು ವಿವೇಚಿಸಿಕೊಳ್ಳಲಾರದವರಾಗಿರುವುದಕ್ಕೆ ಸೂರ್ಯ ಮಂಡಲವೂ ಕಾರಣ. ಯಾಕೆಂದರೆ ಸೂರ್ಯಮಂಡಲ ತಾನೇ ನಮಗೆ ಬಿಸಿಲು, ಮಳೆ ಮುಂತಾದುವನ್ನು ನೀಡುತ್ತಿರುವಂತೆ ಕಾಣುತ್ತಿದೆ. ಹೀಗೆ ನಮ್ಮ ಸಂರಕ್ಷಕ ಭಗವಂತ ಎಂಬ ಸತ್ಯದರ್ಶನಕ್ಕೆ ಅಡ್ಡಿ ಮಾಡುವುದನ್ನೇ **'ಸತ್ಯಸ್ಯಾಪಿಹಿತಂ ಮುಖಂ'** ಸತ್ಯದ ಮುಖ ಮರೆಯಾಗಿದೆ ಎಂದಿದೆ

ಉಪನಿಷತ್ತು. ಅದನ್ನು ಸ್ಮರಿಸುವುದೆಂದರೆ ನಮ್ಮ ಸಂರಕ್ಷಣೆಯಲ್ಲಿ ಸೂರ್ಯಮಂಡಲದ್ದೇನೂ ಮಹತ್ತ್ವದ ಪಾತ್ರವಿಲ್ಲ, ಸೂರ್ಯಮಂಡಲಾಂತರ್ಗತನಾದ ಸೂರ್ಯನಾರಾಯಣನೇ ಮುಖ್ಯ ರಕ್ಷಕ ಎಂಬ ವಿವೇಕೋದಯವಾಗುವಂತೆ ಮಾಡುವುದು. ಹೀಗೆ ಸೂರ್ಯಮಂಡಲದಲ್ಲಿ ಆರೋಪಿಸಿಕೊಂಡಿರುವ ಸೂರ್ಯನಾರಾಯಣನ ಗುಣಧರ್ಮಗಳನ್ನು ಸೂರ್ಯಾಂತರ್ಯಾಮಿಯಾದ ಅವನಲ್ಲೇ ಕಂಡುಕೊಳ್ಳುವಂತೆ ಅನುಗ್ರಹಿಸು ಎಂಬುದಾಗಿ ಪ್ರಾರ್ಥನೆಯೇ **'ಸತ್ಯಸ್ಯಾಪಿಹಿತಂ ಮುಖಮ್ '**

## ಅನುಭವದ ಪರಿಪಕ್ವತೆ

ಸದಾ ಚಿಂತನಶೀಲರಾಗಿದ್ದ ಶ್ರೀಪಾದರು ಯಾವುದೇ ಸಾಮಾನ್ಯ ವಿಚಾರವನ್ನೂ ತಮ್ಮ ಅನುಭವದ ಪಾಕದಲ್ಲಿ ಹುರಿದು ಪ್ರಭಾವಕಾರಿಯಾಗಿ ಪ್ರಸ್ತುತ ಪಡಿಸುತ್ತಿದ್ದರು.

ಬ್ರಾಹ್ಮಣರು ಗಾಯತ್ರಿಯನ್ನು ಜಪಿಸಬೇಕೆಂಬುದನ್ನು ಶ್ರೀಪಾದರು ಹೀಗೆ ಬ್ರಾಹ್ಮಣಸಭೆಯೊಂದರಲ್ಲಿ (18-9-88) ಸಮರ್ಥಿಸಿದ್ದರು. 'ಸೂರ್ಯನ ಮೂಲಕ ಹರಿದು ಬರುವ ಭಗವಚ್ಛಕ್ತಿಯು ಜಗತ್ತಿನ ಬೆಳವಣಿಗೆಗೆ ಅತ್ಯಾವಶ್ಯಕವಾದುದು. ರೇಶ್ಮೆಯ ಹುಳುಗಳನ್ನು ಸಾಕುವವರಿಗೆ ಇದು ಅನುಭವ ಸಿದ್ಧ ವಿಚಾರ. ರೇಶ್ಮೆ ಹುಳುಗಳಲ್ಲಿ ಕೆಲವು ಉಳಿದವುಗಳಿಗಿಂತ  ಅಧಿಕವಾಗಿ ಬೆಳೆದವೆಂದರೆ ಅವುಗಳ ಬೆಳವಣಿಗೆಯನ್ನು ಸ್ಥಗಿತಗೊಳಿಸಲು ಅವುಗಳನ್ನು ಫ್ರಿಡ್ಜಿನಲ್ಲಿಟ್ಟು ಅವುಗಳಿಗೆ ಸೌರಶಕ್ತಿಯ ಸಂಪರ್ಕ ಆಗದಂತೆ ಮಾಡಲಾಗುವುದು.

ಹೀಗೆ ಸೌರಶಕ್ತಿ ಬೆಳವಣಿಗೆಗಷ್ಟೇ ಅಲ್ಲದೆ, ಬೌದ್ಧಿಕ ಶಕ್ತಿಯ ಜಾಗೃತಿಗೂ ಕಾರಣವಾದುದು. ಸೌರಶಕ್ತಿ ಮಿದುಳಿನ ಎಷ್ಟೋ ಸುಪ್ತಕೋಶಗಳನ್ನೂ, ಬಳ್ಳಿಗಳನ್ನೂ ಎಬ್ಬಿಸಿ ಬೌದ್ಧಿಕಶಕ್ತಿಯನ್ನು ಅಭಿವೃದ್ಧಿ ಪಡಿಸುವುದು. ಬ್ರಾಹ್ಮಣನು ಈ ರಹಸ್ಯವನ್ನು ಅರಿತಿರುವನು. ಆದುದರಿಂದಲೇ ಸಂಧ್ಯಾಕಾಲಗಳಲ್ಲಿ ಅವನು ತನ್ನ ಮಿದುಳಿಗೆ ಸೌರಶಕ್ತಿಯ ಸಂಪರ್ಕ ದೊರಕುವಂತೆ ಮಾಡಿಕೊಳ್ಳುವನು. ಸಂಧ್ಯಾನುಷ್ಠಾನದ ಗಾಯತ್ರೀ ಜಪಾನುಷ್ಠಾನದ ಉದ್ದೇಶವೇ ಇದು. ವಿದ್ಯುಚ್ಛಕ್ತಿಯನ್ನು ವಯರಿನ ಮೂಲಕ ಬಲ್ಬಿನೆಡೆಗೆ ಸಾಗಿಸಿ ಬಲ್ಬಿನಲ್ಲಿ ಬೆಳಕನ್ನು ಪಡೆಯುವಂತೆ ಸೌರಶಕ್ತಿಯನ್ನು ಗಾಯತ್ರೀಮಂತ್ರದ ಧ್ಯಾನದ ಮೂಲಕ ಮಿದುಳಿನೆಡೆಗೆ ಸಾಗಿಸಿ, ಮಿದುಳಿನ ಸುಪ್ತಶಕ್ತಿಗಳನ್ನು ಪ್ರಭೋಧಿಸಿ ಅಧಿಕ ಬೌಧಿಕಶಕ್ತಿಯನ್ನು ಗಳಿಸಿಕೊಳ್ಳಲಾಗುವುದು. ಏಕಾಗ್ರತೆಯ ಧ್ಯಾನ ಸೌರಶಕ್ತಿ ಹಾಗೂ ಮಿದುಳು ಇವುಗಳೊಳಗೆ ಸಂಬಂಧವನ್ನು ಕಲ್ಪಿಸುವ ತಂತಿಯ ಪಾತ್ರವನ್ನು ನಿರ್ವಹಿಸಬಲ್ಲದು.

ಸಮಾಜದಲ್ಲಿ ತಾವು ಹೇಗೆ ಪಾಠ ಕಲಿತೆವೆಂಬುದಕ್ಕೆ ಅವರೊಂದು ತಮ್ಮ ಜೀವನದ ಘಟನೆಯನ್ನು ಹೀಗೆ ಉದಾಹರಿಸುತ್ತಿದ್ದರು.

'ನಾವು ಆಗ ಪೂರ್ವಾಶ್ರಮದ ರಮೇಶ ಹೆಸರಿನ ಬಾಲಕ. ಶ್ರೀಮಂತ ಕುಟುಂಬದವರೊಬ್ಬರು

ಬಂದು ಮಠದಲ್ಲಿರುವವರನ್ನೆಲ್ಲ ಸೇರಿಸಿ 'ಗ್ರೂಪ್ ಫೋಟೋ' ತೆಗೆಸಿದರು. ನನಗೆ ಆ ಫೋಟೋ ತೆಗೆಸಿಕೊಳ್ಳುವ ಅವಕಾಶ ದೊರಕಲಿಲ್ಲ. ತುಂಬ ಅಸಮಾಧಾನವಾಯಿತು. ಅಳುತ್ತ ಕೂತೆ. ಆಗ ಪಲಿಮಾರು ಮಠದ, ಶ್ರೀರಘುಮಾನ್ಯತೀರ್ಥರು ನನ್ನಲ್ಲಿಗೆ ಬಂದು ನನ್ನನ್ನು ಸಮಾಧಾನಿಸುತ್ತ ಸರಳವಾಗಿ ಉಪದೇಶಿಸಿದರು. ' ನೋಡು, ರಮೇಶ, ಫೋಟೋ ತೆಗೆಯುವವರು ನಿನ್ನಲ್ಲಿಗೆ ಬಂದು ಫೋಟೋ ತೆಗೆಯುವಂತಾಗಬೇಕೇ ವಿನಹ ಫೋಟೋ ತೆಗೆಯುವವರಲ್ಲಿಗೆ ಹೋಗಿ ಫೋಟೋ ತೆಗೆಸಿಕೊಳ್ಳುವ ದೈನ್ಯದ ವ್ಯಕ್ತಿತ್ವ ನಿನ್ನದಾಗಬಾರದು. ಸವಾಜ ನಿನ್ನನ್ನು ಅರಸಿಕೊಂಡು ಬರುವಂತಾಗಬೇಕೇ ವಿನಹ ನೀನು ಸಮಾಜದ ಬೆನ್ನು ಹತ್ತುವಂತಾಗಬಾರದು'.

ಶ್ರೀಪಾದರ ಆ ಉಪದೇಶ ಆಗ ನನಗೆ ಪೂರ್ಣವಾಗಿ ಅರ್ಥವಾಗಿರಲಿಲ್ಲ. ಆದರೆ ಸಮಾಜದ ಸಂಬಂಧವನ್ನು ಹೆಚ್ಚೆಚ್ಚಾಗಿ ಹಚ್ಚಿಕೊಂಡಂತೆ ಅದರ ಆಳಪೂರ್ಣವಾಗಿ ತಿಳಿಯಿತು. ನಾನು ಜೀವನದಲ್ಲಿ ಅಳವಡಿಸಿಕೊಳ್ಳಲು ಆರಿಸಿಕೊಂಡ ಆದರ್ಶಗಳಲ್ಲಿ ಆ ಉಪದೇಶದ ಆದರ್ಶವೂ ಒಂದು. ' ★

*ಶ್ರೀವಿಬುಧೇಶತೀರ್ಥ ಸಂದೀಪ್ತಾಧ್ಯಾತ್ಮಚಿಂತನ ಸಂದರ್ಭಃ ।*

*ಸಂಗೃಹೀತೋಽತಿಯತ್ನೇನ ತದಂತರ್ಯಾಮಿತುಷ್ಟಯೇ॥*

---

(.....8ನೇ ಪುಟದಿಂದ)

### ಬಂಟನಲ್ಲವೆ ನಾನು?

ನಾನು ನಿನ್ನ ಬಂಟ, ಸೇವಕನಲ್ಲವೆ? ನಾನು ನನ್ನ ಹೆಂಡತಿ ಮಕ್ಕಳನ್ನು ಮಾತ್ರವಲ್ಲದೆ ನನ್ನ ಶರೀರ ಇಂದ್ರಿಯ ಮನಸ್ಸುಗಳನ್ನು ನಿನಗೊಪ್ಪಿಸಿದ್ದೇನೆ. ಇಂಥ ಸೇವಕನನ್ನು ಕಾಪಾಡುವುದು ನಿನಗೆ ಉಚಿತವಲ್ಲವೆ?

### ದೀನರ ನಂಟನಲ್ಲವೆ ನೀನು?

ಒಂದು ವೇಳೆ ನನ್ನನ್ನು ಸೇವಕನೆಂದು ನೀನು ಒಪ್ಪಿಕೊಳ್ಳದಿದ್ದರೂ ಸರಿಯೆ, ನೀನು ದೀನರ ನಂಟ ತಾನೆ? ಅನಾಥ ರಕ್ಷಕನೆಂದು ನಿನಗೆ ಬಿರುದು. ನನ್ನನ್ನು ದೀನ, ಅನಾಥ ಎಂದಾದರೂ ಒಪ್ಪಿಕೊಳ್ಳು. ನನಗೆ ರಕ್ಷಕನಾಗು.

### ನಿನ್ನೊಳಗುಂಟೆ ನಿರ್ದಯ ನೋಡಿ ರಕ್ಷಿಸು

ನಾನೇ ಸ್ವತಂತ್ರನೆಂದು ಬೀಗುತ್ತ ಪಾಪಕರ್ಮವೆಸಗುವವರಿಗೆ ನಿರ್ದಯವಾಗಿ ನೀನು ಶಿಕ್ಷೆ ನೀಡುವಿ. ಅದರಲ್ಲೇನೂ ತಪ್ಪಿಲ್ಲ. ಆದರೆ ಅಂತ ತಪ್ಪು ಮಾಡದ ನನ್ನಂಥ ಬಡಪಾಯಿಗಳು ಕಷ್ಟದಲ್ಲಿರುವಾಗ ಕಾಪಾಡದಿರುವಷ್ಟು ನಿರ್ದಯತೆ ನಿನ್ನಲ್ಲಿ ಉಂಟೆ? ಸರ್ವಥಾ ಇಲ್ಲ. ಏಕೆಂದರೆ ನೀನು ದಯಾಸಾಗರ. ದಯೆಯಿಂದ ನೋಡಿ ನಮ್ಮನ್ನು ಸದಾ ಕಾಪಾಡು. ★

# ಕಣ್ಣುಕಂಡದ್ದನ್ನು ಮನಸು ಒಪ್ಪಿರಬೇಕು

–ವಿ|| ರಾಮವಿಟ್ಠಲಾಚಾರ್ಯ, ಬೆಂಗಳೂರು

ಪುರುರಾಜನ ವಂಶಪರಂಪರೆಯಲ್ಲಿ 'ಇಲಿನ' ಎಂಬ ಮಹಾರಾಜನ ಪುತ್ರ ದುಷ್ಯಂತ. ತಾಯಿ ರಥಂತರೀ. ತಂದೆಯಿಂದ ಪಟ್ಟಾಭಿಷಿಕ್ತನಾದ ದುಷ್ಯಂತ. ಚತುಸ್ಸಾಗರಪರ್ಯಂತ ಭೂಮಿಯ ಚಕ್ರವರ್ತಿಯಾದ ದುಷ್ಯಂತನ ಆಳ್ವಿಕೆಯಲ್ಲಿ ಚಾತುರ್ವರ್ಣ್ಯ ವ್ಯವಸ್ಥೆ ಸುಸ್ಥಿರವಾಗಿತ್ತು. ಸುಭಿಕ್ಷೆಯಿತ್ತು. ಪ್ರಜೆಗಳೆಲ್ಲ ಧರ್ಮರತರಾಗಿದ್ದರು.

ಅಂದೊಮ್ಮೆ ಕ್ರೂರಮೃಗಗಳಿಂದ ತುಂಬಿದ್ದ ಕಾಡಿಗೆ ಬೇಟೆಗಾಗಿ ಬಂದ ರಾಜಾ ದುಷ್ಯಂತ ಹಿಂಸ್ರ ಪ್ರಾಣಿಗಳನೆಲ್ಲ ಬೆನ್ನಟ್ಟಿ ನಿಗ್ರಹ ಮಾಡುತ್ತ ತನ್ನ ಸೇನೆಯೊಂದಿಗೆ ಕಾಡಿಂದ ಕಾಡಿಗೆ ಅಲೆಯುತ್ತ ಬಂದ. ಕಣ್ವ ಮುನಿಗಳ ಪ್ರಶಾಂತ ಪರಿಸರ ಆಶ್ರಮದ ಬಳಿಗೆ ಬಂದ. ಸೇನೆಯನ್ನು ದೂರ ನಿಲ್ಲಿಸಿ ರಾಜವೇಷವನ್ನು ಕಳಚಿಟ್ಟು ವಿನೀತವೇಷದಿಂದ ಆಶ್ರಮವನ್ನು ಪ್ರವೇಶಿಸಿದ ಕಣ್ವಮುನಿಗಳ ಸಂದರ್ಶನ ಭಾಗ್ಯಕ್ಕಾಗಿ.

ಆಶ್ರಮದಲ್ಲಿ ಯಾರೂ ಕಾಣಲಿಲ್ಲ. ಹೊರ ಆವರಣದಲ್ಲಿ ನಾಕುವೇದಗಳ ಪಾರಾಯಣ ಮಾಡುತ್ತಿದ್ದ ಅನೇಕ ಋಷಿಮುನಿಗಳು ಇದ್ದರು. ಕೆಲವು ಋಷಿಗಳು ಯಜ್ಞಯಾಗತಪೋನಿರತರಾಗಿದ್ದರು. ಆಶ್ರಮದಲ್ಲಿದ್ದ ಮುನಿಗಳ ಕುಟೀರಕ್ಕೆ ಬಂದ. ಅಲ್ಲಿ ಯಾರೂ ಕಾಣಲಿಲ್ಲ. ಯಾರಿದ್ದೀರಿ? ಎಂದು ಕೂಗಿ ಕೇಳಿದ. ಮೀನು ಕಣ್ಣಿನ ಲಾವಣ್ಯದರಸಿ ತಾರುಣ್ಯ ಕಾಂತಿಯ ತಾಪಸವೇಷದ ಚೆಲುವೆಯೊಬ್ಬಳು 'ತಮಗೆ ಸ್ವಾಗತ ಬನ್ನಿ' ಎಂದಳು. ರೂಪ ಯೌವನಸಂಪನ್ನಳು. ಶೀಲಾಚಾರವತಿಯೂ ಆದ ಆ ಹೆಣ್ಣು ಮಗಳು ಸ್ಫುರದ್ರೂಪದ, ಸುಲಕ್ಷಣ ಸಂಪನ್ನನಾದ ನೀಳತೋಳು, ವಿಶಾಲವಾದೆದೆ, ತಾವರೆಯಂತಹ ಕಣ್ಣು, ಸಿಂಹಸ್ಕಂಧನಾದ ನೃಪೋತ್ತಮ ದುಷ್ಯಂತನನ್ನು ಮೆಲ್ಲನೆ ತಲೆಯೆತ್ತಿ ನಗುಮೊಗದ ಮಿಂಚು ಕಣ್ಣಿನಿಂದ ನೋಡಿದಳು. ಆಸನಕೊಟ್ಟು ಉಪಚರಿಸಿದಳು. ಕುಶಲಪ್ರಶ್ನೆ ಕೇಳಿದಳು. ಸೌಂದರ್ಯಕ್ಕೆ ಜೀವ ತುಂಬುವ ಆ ಸಿಂಗಾರಿ ಸುಂದರಿಯನ್ನು ಕುತೂಹಲದಿಂದ ರಾಜ ನೋಡಿದ. ಆಗಲೇ ಎರಡೂ ಮನಸ್ಸುಗಳು ಸಂಚು ಹೂಡಿ ಹೊಂಚು ಹಾಕಿದವು.

ಸುಂದರಿ! ಯಾರು ನೀನು? ಈ ಎಲೆಮನೆಯಲ್ಲಿ ನೆಲೆಸಿಹೆಯಲ್ಲ? ನಿನ್ನ ಜನ್ಮಜನ್ಯ ಸೌಜನ್ಯ ಸೌಶೀಲ್ಯ ಸೌಂದರ್ಯಗಳು ನನ್ನ ಮನಸೂರೆಗೊಂಡಿವೆ. ನಾನು ರಾಜಾದುಷ್ಯಂತ. ಕ್ಷತ್ರಿಯ ಜಾತಿಯ ಹೆಣ್ಣನ್ನು ಬಿಟ್ಟು ಋಷಿಕುಮಾರಿಯರನ್ನಾಗಲಿ, ನನಗಿಂತ ಕೆಳವರ್ಣದ ಹೆಣ್ಣನ್ನಾಗಲಿ ಬಯಸದ ನನ್ನ

ಸಂಸ್ಕಾರವಂತ ಮನಸ್ಸು ನಿನ್ನನ್ನು ಒಪ್ಪಿದೆ ಬಯಸಿದೆಯೆಂದರೆ ನೀನು ಕ್ಷತ್ರಿಯ ಜಾತಿಯವಳೇ ಆಗಿರಬೇಕು. ನನ್ನ ಮನಸ್ಸು ಕಂಡ ಕಂಡದ್ದನ್ನೆಲ್ಲ ಬಯಸುವಷ್ಟು ದುಷ್ಟವಲ್ಲ. ನಾನೂ ಸುಸಂಸ್ಕೃತ. ಸುಶಿಕ್ಷಿತ. ಸದ್ಧರ್ಮರತ.

ನಿನ್ನ ಜನನದ ಪೂರ್ವೋತ್ತರಗಳನ್ನು ತಿಳಿಸು ಸುದತಿ! ಎಂದನು ರಾಜ.

ಸ್ವಾಮಿ! ನಾನು ಪೂಜ್ಯ ಕಣ್ವರ ಮಗಳು. ಸುಳ್ಳು ಹೇಳಬಾರದು. ನನ್ನ ಚರಿತ್ರೆಯನ್ನು ಹೇಳುತ್ತೇನೆ. ಪರಮಪೂಜ್ಯ ವಿಶ್ವಾಮಿತ್ರರು ರಾಜರ್ಷಿಗಳಾಗಿದ್ದವರು ಬ್ರಹ್ಮರ್ಷಿಗಳಾಗಲು ತೀವ್ರತಪೋನಿಷ್ಠರಾಗಿದ್ದರು.ಇಂದ್ರ ಹೆದರಿದ. ದೀಪ್ತ ವೀರ್ಯರಾದ ವಿಶ್ವಾಮಿತ್ರರು ತಪಸ್ಸಿದ್ಧಿಯನ್ನು ಪಡೆದರೆ ನನ್ನನ್ನು ಸ್ಥಾನಚ್ಯುತನನ್ನಾಗಿಸಿಯಾರು ಎಂದು ಕೊಂಡ ಇಂದ್ರ ಮೇನಕೆಯನ್ನು ಕರೆದು ನಿನ್ನ ಬಿಂಕ ಬಿನ್ನಾಣಗಳ ವೈಯ್ಯಾರದಿಂದ ವಿಶ್ವಾಮಿತ್ರರನ್ನು ವಿಚಲಿತಗೊಳಿಸು ಎಂದು ಆಜ್ಞೆಯಿತ್ತ. ಉರಿಬೆಂಕಿಯಂತಿರುವ ಜಿತೇಂದ್ರಿಯ ಮುನಿ ಮುನಿದರೆ ನನ್ನ ಗತಿ ಏನು? ಇದು ನನ್ನಿಂದಾಗದ ಕೆಲಸ ಎಂದು ಬೆದರಿದಳು. ಅಂಜಿಕೆ ಬೇಡ ವಾರಾಂಗನೆಯೆ! ನೀನು ಅವರ ಮುಂದೆ ಆಡುತ್ತ ಸುಳಿದಾಡು. ವಾಯು ಬೀಸಿ ನಿನ್ನ ವಸನವನ್ನು ಅಪಹರಿಸುತ್ತಾನೆ. ಮನ್ಮಥನು ಮುನಿಯ ಮನವನ್ನು ಕಲಕುತ್ತಾನೆ. ಮುಂದೆ ಎಲ್ಲವೂ ಸುಗಮವಾಗುವುದು.

ಶಕ್ರನ ಮಾತಿನಂತೆ ಮೇನಕೆ ತಪೋನಿರತನಾದ ಮುನಿಗೆ ನಮಿಸಿ ಕುಣಿದಳು. ಮಂದಾನಿಲ ತಂಪಾಗಿ ಬೀಸುತ್ತಲೆ ಮೇನಕೆಯ ಮೇಲುದವನ್ನು ಮೇಲಕ್ಕೆ ಹಾರಿಸಿದನು. ಮದನ ಮುನಿಮನದಲ್ಲಿ ಕಂಪನವುಂಟು ಮಾಡಿದ. ಮಂದಮಾರುತದ ತಂಪು, ಜೊತೆ ಬಂದ ಸುಮಗಳ ಕಂಪು, ಇಂಚರದ ಇಂಪು, ಮೇನಕೆಯ ಮೈಪೆಂಪು ಋಷಿಯ ಚಿತ್ತಕ್ಕೆ ಸೊಂಪು ಹೆಚ್ಚಿಸಿತು. ಮುನಿಯ ಒಡಲಾಳದಲ್ಲಿ ಕಂಪನ. ಚೆಲುವೆಯ ಒಡಲು ರೋಮಾಂಚನದ ಕಡಲು. ಬಯಕೆ ಮುಟ್ಟಿತು ಮುಗಿಲು. ತಿಳಿಯಲೇ ಇಲ್ಲ ಇರುಳು ಹಗಲು. ಹೆಗಲು ಹೆಗಲುಗಳ ಜುಗಲ್ಬಂದಿಗೆ ಬಂಧಿಯಾದರು ವಿಶ್ವಾಮಿತ್ರರು. ಹಗಲು ಇರುಳುಗಳು ಉರುಳಿದವು. ಮುನಿಯ ತಪಸ್ಸಿನ ಪುಣ್ಯಗಳು ಉರುಳು ಹಾಕಿಕೊಂಡವು. ಸಾವಿರಾರು ವರ್ಷಗಳು ಒಂದೇ ದಿವಸವೆನಿಸಿದವು.

ಪುಣ್ಯಕ್ಷಯವಾಗಿ ಋಷಿಗೆ ಮೋಹ ಮುಸುಕು ಹಾಕಿತು. ಮೋಹ ಸಹನೆಯನ್ನು ಕೆಣಕಿತು. ಕ್ರೋಧ ಕಾಮದ ಮೇಲೆ ಸವಾರಿ ಹೂಡಿತು. ಮನಸ್ಸಿನ ಚೆಲ್ಲಾಟ ತಳಮಳಗಳೆಲ್ಲ ಮಾಲಿನೀ ನದಿಯಲ್ಲಿ ಮುನಿಯು ಕಾಲು ಬಡಿಯುತ್ತಿದ್ದ ನೀರಲ್ಲಿ ಘೀಳಿಡುತ್ತಿದ್ದವು. ಋಷಿಯ ಮನದ ಉಬ್ಬಸವನ್ನು ಅರಿತ ಅಪ್ಸರೆ ಮುನಿಯ ತೆಕ್ಕೆಗೆ ಸಿಲುಕಿದಳು. ಹಾಸಿಗೆಯಲ್ಲಿ ಅರಳಿದಳು. ಮುನಿಯ ಮಾನಸಸರೋವರದಲ್ಲಿ ಮಿಂದಳು. ನೆಂದಳು. ನಲಿದಳು. ಉಲಿದಳು. ಉಳಿದಳು.

ವಿಶ್ವಾಮಿತ್ರರಿಗೆ ತಡವಾಗಿಯಾದರೂ ಪುಣ್ಯ ಖಾಲಿಯಾದುದು ಅರಿವಾಯ್ತು. ಕಾಮಕ್ಕೆ

ಸೋತು ಅದನ್ನು ಗೆಲ್ಲುವ ಪಾಠ ಕಲಿತರು. ಶಠರಾಗದೆ ಹಠ ಹಿಡಿದರು. ಎದ್ದು ಮುಂದೆ ನಡೆದರು. ಸೋತು ಗೆದ್ದರು. ಗೆದ್ದಲು ಹಿಡಿಯಲಿಲ್ಲ.

ಮೇನಕೆ ಬಂದ ಕೆಲಸವಾಯ್ತು ಎಂದ ಮೇಲೆ ಹೋದಳು. ವಿಶ್ವಾಮಿತ್ರ ಮೇನಕೆಯರ ಕಾಮಫಲ ಹೆಣ್ಣುಕೂಸಾಯಿತು. ಮುನಿ ಅಪ್ಸರೆಗೆ ಬಲಿಯಾದರು. ಅವರಿಗೆ ಎಚ್ಚರಿಕೆ ಬಂದು ಮಗು ತಬ್ಬಲಿಯಾಯಿತು! ಕಾನನದ ಹಕ್ಕಿ ಪಕ್ಕಿಗಳು ಕಾರುಣ್ಯ ಸೂಸಿ ಮಗುವಿನ ಅಕ್ಕಪಕ್ಕ ಕುಳಿತವು. ಕಾವಿಟ್ಟವು.

ಮುನಿ ಕಣ್ವರು ವನಕ್ಕೆ ಹೋದವರು ಮಗುವನ್ನು ಕಂಡು ಕರಗಿದರು. ವಿಶ್ವಾಮಿತ್ರರ ಮಗಳು ಇವಳು. ನಿಮ್ಮಲ್ಲಿ ನ್ಯಾಸವಾಗಿ ಬಂದಿದೆ. ಪೋಷಣೆ ಮಾಡಿರಿ ಎಂದವು ಹಕ್ಕಿಗಳು. ಶಕುಂತ (ಹಕ್ಕಿ)ಗಳಿಂದ ಲಾಲನೆಗೊಂಡ ಹೆಣ್ಣುಮಗುವಿಗೆ ಶಕುಂತಲೆ ಎಂದು ಹೆಸರಿಟ್ಟರು. ಅವಳೇ ನಾನು. ಹಣೆಯಲ್ಲಿ ಓಲಾಡುತ್ತಿದ್ದ ಕುಂತಲೆಯನ್ನು ಪಕ್ಕಕ್ಕೆ ಸರಿಸಿಕೊಳ್ಳುತ್ತ ಶಕುಂತಲೆ ಉಸುರಿದಳು ಪೂರ್ವ ಕಥೆಯನ್ನು ಅಪೂರ್ವಸುಂದರನ ಮುಂದೆ.

ತಂದೆ ಯಾರೆಂದು ತಿಳಿಯದ ನಾನು ಕಣ್ವರನ್ನೇ ತಂದೆಯೆಂದು ಭಾವಿಸಿದ್ದೇನೆ. ಅವರು ಯಾರಿಗೆ ಧಾರೆಯೆರೆದು ಕೊಟ್ಟರೆ ಅವರ ಹೆಂಡತಿ ನಾನಾಗಬೇಕು. ಅಲ್ಲವೆ?

ರಾಜನಿಗೆ ಎಲ್ಲ ಸ್ಪಷ್ಟವಾಯಿತು. ಊಹೆ ನಿಜವಾಯಿತು. ನೋಡಿದೆಯಾ ಹೆಣ್ಣೆ! ನನ್ನ ಮನ ಅಂದುಕೊಂಡಂತೆ ನೀನು ಕ್ಷತ್ರಿಯ ಹೆಣ್ಣುಮಗಳು! ಅದಕೆಂದೆ ನನ್ನ ಮನದಲ್ಲಿ ಬಯಕೆ ಮೊಳೆತಿದ್ದು! ಆರು ಬಗೆಯ ವಿವಾಹವಿಧಿಯಲ್ಲಿ ಕ್ಷತ್ರಿಯರಿಗೆ ಒಪ್ಪಿತವಾದ ಗಾಂಧರ್ವವಿವಾಹ ವಿಧಿಯಿಂದ ನಾವು ದಂಪತಿಯರಾಗೋಣ. ನನ್ನ ರಾಜ್ಯ ನಿನ್ನದೇ.

ರಾಜ! ಈ ಗಾಂಧರ್ವ ವಿವಾಹ ಧರ್ಮಮಾರ್ಗವೇ ಆಗಿದ್ದರೆ, ನಿನ್ನ ಮನದ ನಿರ್ಧಾರದಲ್ಲಿ ನಿನಗೆ ಧರ್ಮಸಮ್ಮತವೆಂಬ ಖಾತರಿಯಿದ್ದರೆ ಕರಾರಿನ ಮೇಲೆ ಮದುವೆಯಾಗುತ್ತೇನೆಂದಳು. ನನ್ನಲ್ಲಿ ಹುಟ್ಟುವ ಮಗ ಮುಂದೆ ಯುವರಾಜನಾಗಬೇಕು.

ಇದೆಲ್ಲ ದೈವಸಂಕಲ್ಪವೆಂದರಿತ ರಾಜ ಶಕುಂತಲೆಯ ಕರಾರಿಗೆ ತಕರಾರು ತೆಗೆಯದೆ ಒಪ್ಪಿದ. ಕಾಮವನ್ನೂ ಧರ್ಮದ ರಾಜಮಾರ್ಗದಲ್ಲಿ ಮುನ್ನಡೆಸಿದ ಮನದನ್ನೇ ಶಕುಂತಲೆಯನ್ನು ವಿವಾಹವಾದ. ಅವಳೊಂದಿಗೆ ಸ್ವಲ್ಪಕಾಲ ಕಳೆದ. ಶೃಂಗಾರದಾನಂದವನ್ನು ಹಂಚಿಕೊಂಡ. ಪ್ರಿಯೆ! ನಾನು ನಗರಕ್ಕೆ ತೆರಳಿ ಚತುರಂಗ ಸೇನೆಯೊಂದಿಗೆ ರಾಜೋಚಿತ ಸಕಲ ಗೌರವಗಳೊಡನೆ ನಿನ್ನನ್ನು ಬರಮಾಡಿಕೊಳ್ಳುತ್ತೇನೆ. ನಲ್ಲೆ ಬರಲೆ? ಮೆಲ್ಲನೆ ನಲ್ಲನೆಡೆಗೆ ನಡೆದು ಬಂದ ನಲ್ಲೆಯನ್ನು ನೀಳತೋಳುಗಳಿಂದ ಬಿಗಿದಪ್ಪಿಕೊಂಡ. ಇನಿಯನ ತೋಳ್ಸೆರೆಯಲ್ಲಿ ತುಂಬಿಕೊಂಡ ಶಕುಂತಲೆಯನ್ನು ಪ್ರಣಯದ ನಗೆ ಬೀರಿ ಕಣ್ತುಂಬ ತುಂಬಿಕೊಂಡ. ರಾಜನಿಗೆ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿದಳು. ಸಂಗಮದ ಹೃದಯಂಗಮ ಸನ್ನಿವೇಶದಲ್ಲಿ ವಿರಹದ ಸಂತಾಪವೂ ಕಾಡಿತ್ತು ಶಕುಂತಲೆಯನ್ನು.

ಶೃಂಗಾರದಲ್ಲಿಯೂ ಬೆವರಿದಳು. ವಿರಹದ ನೆನಹಿನ ನೋವಿನಲು ಬೆವರಿದಳು. ನನ್ನ ಪುಣ್ಯದ ಮೇಲೆ ಆಣೆ ಮಾಡಿ ಹೇಳುತ್ತೇನೆ. ಹೆದರಬೇಡ. ಬೇಗ ಬರಮಾಡಿಕೊಳ್ಳುತ್ತೇನೆಂದು ಹೊರಟ ದುಷ್ಯಂತ.

ಶಕುಂತಲೆ ಮೆಲ್ಲನೆ ಕುಟೀರದೆಡೆಗೆ ಸಾಗಿದಳು. ಹೊರಡುತ್ತಿರುವ ರಾಜನ ಬಗ್ಗೆ ಯೋಚಿಸುವುದೆ? ಬರಲಿರುವ ಮುನಿಯ ಬಗ್ಗೆ ಯೋಚಿಸುವುದೇ. ನನ್ನನ್ನು ಮಮತೆಯಿಂದ ಲಾಲನೆ ಪಾಲನೆಗೈದ ಮುನಿಗಳು ನನ್ನ ನಡವಳಿಕೆಯನ್ನು ಮನ್ನಿಸುವರೇ? ಮುನಿವರೆ?

ಬಂದೇ ಬಂದರು ಮುನಿಗಳು. ಮುಜುಗರದಿಂದ ಮುಂದೆ ಬರದೆ ದೂರ ನಿಂತ ಶಕುಂತಲೆಯನ್ನು ನೋಡಿ ಶಂಕೆಯಿಂದಲೆ ಕೇಳಿದರು. ಹೀಗೇಕೆ ಏನಾಯಿತು? ಅಪ್ಪ! ಮನ್ನಿಸಿರಿ ಎಂದು ಪೀಠಿಕೆಯಿಟ್ಟು ಮುನಿಯ ಕಾಲು ತೊಳೆದು ವಿಶ್ರಾಂತಿಗೆ ವ್ಯವಸ್ಥೆ ಮಾಡಿ ಕಾಲು ಒತ್ತುತ್ತ ನಡೆದುದನ್ನೆಲ್ಲ ಹೆದರಿಕೆಯಿಂದಲೆ ವಂಚನೆ ಮಾಡದೆ ಹೇಳಿದಳು. ಅವರ ಪ್ರತಿಕ್ರಿಯೆಗೆ ಕಾತರದಿಂದ ಆತುರವಾಗಿ ಕಾದಳು.

ಕಣ್ವರು ಶಕುಂತಲೆಯ ಪ್ರಾಮಾಣಿಕತೆ ವಿನಯ, ನೀತಿವಂತ ನಡವಳಿಕೆಯನ್ನು ದುಷ್ಯಂತನ ವಿವೇಕ, ಧಾರ್ಮಿಕತೆಗಳನ್ನು ಗಮನಿಸಿ ಹೇಳಿದರು ಮಗಳೇ! ಇಲ್ಲಿ ಏನೂ ತಪ್ಪಿಲ್ಲ! ನಿಮ್ಮೀರ್ವರ ವ್ಯಕ್ತಿತ್ವದಂತೆ ಪ್ರೀತಿಯೂ ನಿರ್ಮಲವಾಗಿದೆ. ಅಂಕೆ ಮೀರದೆ ಧರ್ಮಸಮ್ಮತವಾಗಿಯೇ ಎಲ್ಲ ನಡೆದಿದೆ. ಇದು ಹೀಗೆ ಆಗಬೇಕೆಂದು ದೈವಸಂಕಲ್ಪವಿತ್ತೆಂದು ತೋರುತ್ತದೆ. ನಿನ್ನ ಮಗ ಚಕ್ರವರ್ತಿಯಾಗುತ್ತಾನೆ. ಯಶಸ್ವಿಯಾಗುತ್ತಾನೆ. ನಿನ್ನ ಮೇಲೆ ಕೋಪವಿಲ್ಲ. ನಿನ್ನ ಹಿತವಾದ ನಡೆ ಸಂತಸ ತಂದಿದೆ. ಬೇಕಾದ ವರ ಕೇಳು.

ನೀವು ಒಲಿದರೆ ಆ ರಾಜನ ವಿಷಯದಲ್ಲಿಯೂ ಪ್ರಸನ್ನರಾಗಬೇಕೆಂದು ವಿಜ್ಞಾಪಿಸಿದಳು. ರಾಜನ ಧರ್ಮನಿಷ್ಠೆ, ರಾಜ್ಯದ ಅಖಂಡತೆ ನಷ್ಟವಾಗದಿರಲಿ ಎಂದಳು. 'ತಥಾಸ್ತು' ಎಂದರು ಮುನಿಗಳು. ಅವಳ ಮುಗ್ಧತೆ ಸ್ನಿಗ್ಧತೆಗಳು ನಿರ್ಮಲ ಅನುರಾಗ ಎಲ್ಲವೂ ಆಕರ್ಷಿಸಿದವು ಮುನಿಗಳ ಮನವನ್ನು. ಪರರ ಸೊತ್ತಾಗಿ ಹೋದ ಮಗಳನ್ನು ಮಮತೆಯಿಂದ ನೋಡಿ ತಲೆ ಮೇಲೆ ಕೈಯಾಡಿಸಿದರು.

ದುಷ್ಯಂತ ಶಕುಂತಲೆಯರು ಆಕಸ್ಮಿಕವಾಗಿ ಭೇಟಿಯಾದರು. ಮೊದಲ ನೋಟದಲ್ಲಿಯೇ ಒಬ್ಬರನ್ನೊಬ್ಬರು ಮೆಚ್ಚಿದರು. ಬಯಸಿದರು. ಮದುವೆಯಾದರು ಕೂಡ. ಎಲ್ಲವೂ ಸಂಸ್ಕಾರ ಸಂಪನ್ನವಾದ ತಪ್ಪುದಾರಿ ತುಳಿಯದ ಧರ್ಮನಿಷ್ಠವಾದ ಮನಸ್ಸಿನ ನಿರ್ಧಾರದ ನೆಲೆಯಲ್ಲಿ ನಡೆದವು. ಸಫಲವಾದವು. ಹಿರಿಯರ ಅನುಮತಿಯೂ ದೊರೆಯಿತು. ಕಣ್ಣು ಕಂಡರೂ ಮನಸ್ಸು ಒಪ್ಪಿದ ಮೇಲೆ ಪರಸ್ಪರ ಸಮರ್ಪಿತರಾದರು. ಸಾತ್ವಿಕ ತರಬೇತಿ ಪಡೆದ ಹಿಂದಿನವರ ಮನಸ್ಸು ತಪ್ಪನ್ನು ಎಂದೂ ಒಪ್ಪಿಕೊಳ್ಳುತ್ತಿರಲಿಲ್ಲ.

ಕಂಡ ಕಂಡವರನ್ನೆಲ್ಲ ಬಯಸಿ ಬೇಗ ಬಯಲಾಗುವ ಇಂದಿನ ಯುವ ಯುವತಿಯರು ತುಂಬ ಕಲಿಯಬೇಕಾದ ಪಾಠ ಇಲ್ಲಿದೆ. ★

# ಕಠೋಪನಿಷತ್

ಡಾ। ಎಸ್. ವೇಂಕಟೇಶಾಚಾರ್ಯ

ಪರಿಯಂತಿ= ಅತ್ತಿಂದಿತ್ತ ಸುತ್ತುತ್ತಿರುತ್ತಾರೆ. ಅವರು ಸುಳ್ಳು ಪ್ರಶಸ್ತಿಗೆ ಮಾರು ಹೋಗಿ ಉಳಿದವರೂ ಪ್ರಶಸ್ತಿ ನೀಡುತ್ತಾರೆ. ಕಡೆಗೆ ಮಹಾತ್ಮ ಎನ್ನುತ್ತಾರೆ. ಇದೇ ಸಾಧನೆ ಎಂದುಕೊಳ್ಳುತ್ತಾರೆ. ಅಯ್ಯೋ-ಗುರಗಳಾದರೂ ಗದರಬೇಡವೇ? ತೀಡಿ ತಿದ್ದುವ ಹಿರಿಯರಿಲ್ಲವೆ? ಎಂಬ ಆತಂಕ ಬೇಡ. ಅವರ ಗುರುಗಳೂ ಕೂಡ ಹೀಗೆಯೇ ಇರುವವರು. **ಅಂಧೇನೈವ ನೀಯಮಾನಾಃ ಯಥಾ ಅಂಧಾಃ।।** ಕುರುಡನಿಗೆ ಕುರುಡನೇ ಮಾರ್ಗದರ್ಶಕನಾಗಿ ನಿಲ್ಲುತ್ತಾನೆ. ಅವರಿಗೆ ಅಧ್ಯಾತ್ಮದ ಕುರುಡು. ಐದು ಮನೆ ಕಟ್ಟಿದವನಿಗೆ ಹತ್ತು ಮನೆ ಕಟ್ಟಿರುವವನೇ ಗುರು. ವಕ್ರಮಾರ್ಗದಿಂದ ನೂರಾರು ಪ್ರಶಸ್ತಿ ಪಡೆದವನು ಹತ್ತಾರು ಪ್ರಶಸ್ತಿ ಪಡೆವನಿಗೆ ಗುರು.

ಅಂತೂ ಕುರುಡರ ಸಂತೆ. ಕುರುಡರಿಗೆ ಕುರುಡನೇ ಒಗ್ಗುತ್ತಾನೆ. ಅಲ್ಲಿ ಬೆಳಕಿನ-ಪ್ರಾಮಾಣಿಕತೆಯ ಮಾತಾಡಿದವನು ನಿಷ್ಠುರನಾಗುತ್ತಾನೆ.

ಪ್ರಾಯಃ ಈ ತೆರನೇ ಪ್ರಶಸ್ತಿ ಪಡೆದವರೆಲ್ಲಾ ನರಕದಲ್ಲಿ ಯಮನ ಬಳಿ ಬಂದಿರಲೇ ಬೇಕಲ್ಲವೇ? ಯಮ ಆ ಚಿತ್ರಗುಪ್ತ ವರದಿಯನ್ನೇ ಬಯಲು ಮಾಡುತ್ತಿದ್ದಾನೆ.

ಇದು ಲೌಕಿಕವನ್ನೇ ನಂಬಿ ಹೊರಟವರ ಕಥೆ. ಇವರ ಪಾಡು ಹೀಗೆ. ಇನ್ನು ವೇದ ತಿಳಿದು ಕರ್ಮನಿಷ್ಠರಾದವರ ಪಾಡು ಬೇರೇ ಏನೂ ಅಲ್ಲ. ಅವರಿಗೆ ಅಧಿಕಾರ-ಹಣ-ಲೌಕಿಕ ಕೀರ್ತಿಯ ಚಪಲ ಇಲ್ಲ ನಿಜ. ಆದರೆ ಅಜ್ಞಾನ ಇದೆ. ಹೀಗಾಗಿ ಅವರೇ ಪಂಡಿತರು ಎಂದುಕೊಳ್ಳುತ್ತಾರೆ. ವಿಮರ್ಶೆಗೆ ಮೊದಲೇ ಕರ್ಮಶ್ರೇಷ್ಠ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ. **ಅವಿದ್ಯಾಯಾಂ ಅಂತರೇ ವರ್ತಮಾನಾಃ ಸ್ವಯಂ ಧೀರಾಃ** ಮಿಗಿಲಾಗಿ **ಪಂಡಿತಂ ಮನ್ಯಮಾನಾಃ ।** ಹೀಗಾಗಿ ಮೀಮಾಂಸಕರಾಗಿಯೂ ಮಿತಿ ಮೀರಿದ ಹಮ್ಮು ಅವರನ್ನು ಕಿವುಡರನ್ನಾಗಿಸಿತು. ಜ್ಞಾನದ ಪಾತ್ರದ ಬಗೆಗೆ ವೇದ ವಾಕ್ಯ ಕಂಡರೂ ಅವರೂ ಅಚಲರಾದರು. ಆ ವಾಕ್ಯವನ್ನು **'ದಂದ್ರಮ್ಯಮಾಣಾಃ'** ವಕ್ರಗತಿಯಲ್ಲೇ ಅರ್ಥೈಸುತ್ತಾರೆ. ಅವರ ಪರಿಧಿ ಇಷ್ಟೇ. ಕರ್ಮ ಶ್ರೇಷ್ಠವಾದರೆ ಸ್ವರ್ಗ , ಕರ್ಮ ಹೀನಾಯರಾದರೆ ನರಕ. ಇವೆರಡರಲ್ಲೇ 'ಪರಿಯಂತಿ' ಸುತ್ತುತ್ತಿರುತ್ತದೆ. ಬ್ರಹ್ಮಜ್ಞಾನದ ಎತ್ತರ ಬರಲಿಲ್ಲ. ಹೀಗಾಗಿ ವೇದ ಹಿಡಿದೂ ಕೂಡ ಮೂಢರಾದರು.

ಅಯ್ಯೋ ವೇದದಂತಹ ಪ್ರಮಾಣ ಹಿಡಿದೂ ಕೂಡ ಜಾರಿಬಿದ್ದರೇನು? ಗುರುಗಳಾದರೂ ತಿದ್ದಬಾರದಾಗಿತ್ತೇ ಎಂಬ ಆತಂಕ ಬೇಡ. ಅವರ ಗುರುಗಳೂ ಮೂಢರೇ. ಹಾಗಿರುವವರನ್ನೇ ಅವರು

ಗುರುಗಳನ್ನಾಗಿ ಆಯ್ದುಕೊಳ್ಳುತ್ತಾರೆ. ಅದೇ ಪರಂಪರೆ. ಕೇಳಿದರೆ ಆದಾಯ ಇರುವ ಇದೇ ಸಂಪ್ರದಾಯ ಎನ್ನುತ್ತಾರೆ. ಕುರುಡನಿಗೆ ಕುರುಡನಾದವನ ಸಹವಾಸವೇ ಒಗ್ಗುತ್ತದೆ. ಹೀಗೆ ದುರಂತದ ಸರಣಿ ಮುಂದುವರೆಯುತ್ತದೆ.

ಆದ್ದರಿಂದ ಪುರಂದರ ದಾಸರ ಮಾತು ನೆನಪಾಗುತ್ತದೆ-

*ನಗೆಯು ಬರುತಿದೆ ಎನಗೆ ನಗೆಯು ಬರುತಿದೆ*

*ಭುವಿಯೊಳಿರುವ ಜನರು ಸೇರಿ ಹಗರಣ ಮಾಡುವುದನು ಕಂಡು*

*ನಗೆಯು ಬರುತಿದೆ ಎನಗೆ ನಗೆಯು ಬರುತಿದೆ.*

ಆದ್ದರಿಂದ ಮೊದಲು ತತ್ವವಿದ್ಯೆಯ ಹಸಿವು-ಅದಕ್ಕನುಗುಣವಾದ ಗುರುವಿನ ಲಾಭ ಇವೆರಡೂ ಪೂರ್ವಜನ್ಮದ ಸುಕೃತ. ಪರ್ಯನುಗ್ರಹದ ಸಂಕೇತ. ವೇದವ್ಯಾಸ ಗದ್ಯದ ಒಂದು ವಾಕ್ಯ ಹೀಗಿದೆ. **ಗುರುಷು ಸ್ಥಿತ್ವಾ ತದ್ದ್ವಾರಾ ಜ್ಞಾನೋಪದೇಷ್ಟೇ**

ಗುರುಗಳಲ್ಲಿ ನಿಂತು ಜ್ಞಾನ ನೀಡುವವನೂ ಆ ಹರಿಯೇ ಎನ್ನುತ್ತಾರೆ. ಗುರು ಸಿಗದಿದ್ದರೆ ಸಾಧನೆ ಹೇಗಾದೀತು?

1) ಇನ್ನು ದಡ್ಡರನ್ನಾದರೆ ತಿಳಿ ಹೇಳಬಹುದು. ಬುದ್ಧಿವಂತ ಎಂದು ಕೊಂಡವನಿಗೆ ತಿಳಿ ಹೇಳುವುದು ಹೇಗೆ? ಹಠವಾರಿ, ತಿಳಿಗೇಡಿ ಇಬ್ಬರಿಗೂ ಉಪದೇಶ ವ್ಯರ್ಥ. ನಿದ್ದೆ ಮಾಡುವವನನ್ನು ಎಬ್ಬಿಸಬಹುದು. ನಿದ್ದೆಯ ನಾಟಕ ಆಡುತ್ತಿರುವವನ್ನು ಎಬ್ಬಿಸಲಾಗದು.

2) ಅಂದು ಸುಖಭೋಗ ಬಯಸುತ್ತಾ ಅದರಲ್ಲೇ ಮುಳುಗಿದ ಯಯಾತಿಯ ಒಂದೇ ಉದಾಹರಣೆ ಪುರಾಣದಲ್ಲಿ ಇತ್ತು. ಇಂದು ಎಲ್ಲೆಲ್ಲಿ ನೋಡಿದರೂ ಯಯಾತಿಗಳು ವ್ಯಾಪಿಸಿದ್ದಾರೆ. ಈ ಭೋಗಲಾಲಸೆಗೆ ಕೊನೆ ಇದೆಯೇ?

**ನ ಸಾಂಪರಾಯಃ ಪ್ರತಿಭಾತಿ ಬಾಲಂ ।**

**ಪ್ರಮಾದ್ಯಂತಂ ವಿತ್ತಮೋಹೇನ ಮೂಢಮ್॥**

**ಅಯಂ ಲೋಕಃ ನಾಸ್ತಿ ಪರಃ ಇತಿ ಮಾನೀ ।**

**ಪುನಃ ಪುನರ್ವಶಮಾಪದ್ಯತೇ ಮೇ ॥**

ಸಾಂಪರಾಯ ಎನಿಸಿದ ಭಗವಂತನು, ಹಣದ ಮೋಹದಿಂದ ಹುಚ್ಚನಾದವನಿಗೆ, ಹಾದಿ ತಪ್ಪಿದ ಬಾಲಿಶನಿಗೆ ತೋರುವವನಲ್ಲ. ಅಂತಹ ಹಾತೊರೆಯುವವನು ಹೇಳುವುದೇನೆಂದರೆ ಇರುವುದೇ ಈ ಭೂಲೋಕ. ಬೇರೆ ಲೋಕ ಇಲ್ಲ. ಸಂಪತ್ತೇ ಸ್ಥಿರ ಎಂದು ಅಭಿಮಾನ ತಂದುಕೊಂಡವ ಅವನು ಮತ್ತೆ ಮತ್ತೆ ಯಮ ಯಾತನೆಯ ನೆರಳಿನಲ್ಲಿ ನರಳುತ್ತಾನೆ. (ನನ್ನ ಅಧೀನವಾಗಿಯೇ ಇರುತ್ತಾನೆ)

**(ಸಶೇಷ)**

ಸ್ತೋತ್ರ ಚಿಂತನೆ

ಭಾಗ-18

# ಶ್ರೀನಾರಾಯಣವರ್ಮ

-ಬಿ.ನಾ. ವಿಜಯೀಂದ್ರಾಚಾರ್ಯ, ಮೈಸೂರು

**ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।**

**ಅನೇನ ಪ್ರಸವಿಷ್ಯಧ್ವಂ ಏಷ ವೋಽಸ್ತ್ವಿಷ್ಟಕಾಮಧುಕ್**

**ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯತ ।।**

ಯಜ್ಞದಿಂದ ಮಳೆ, ಮಳೆಯಿಂದ ಬೆಳೆ. ಬೆಳೆಯಿಂದ ಜೀವ. ಜೀವನಿಂದ ಯಜ್ಞ, ಹೀಗೆ ಜಗಚ್ಚಕ್ರ, ನಡೆಯಲೆಂದು ಲೋಕ-ಜೀವ-ಯಜ್ಞ ಎಂಬ ಪದಾರ್ಥಗಳನ್ನು ಬ್ರಹ್ಮ ಸೃಷ್ಟಿಸಿದ. ಆದರೆ ಬ್ರಹ್ಮನ ಸೃಷ್ಟಿಯನ್ನೇ ಆದಿ ಹಿರಣ್ಯಾಕ್ಷ ಅಪಹರಿಸಿದ. ಆವಾಗ ಕರುಣೆಯಿಂದ ಬ್ರಹ್ಮನಿಗೂ ನಿಯಾಮಕನಾದವ ಜಗತ್ತನ್ನು ನಿಜವಾಗಿ ಸೃಷ್ಟಿಸುವವ, ಪಾಲಿಸುವವ, ಸಂಹರಿಸುವವ ನಾನೇ ಎಂದು ತಿಳಿಸಲು, ದೈತ್ಯನನ್ನು ಸಂಹರಿಸಲು ಜಗತ್ತನ್ನು ರಕ್ಷಿಸಲೂ ಶ್ರೀಹರಿಯು ಯಜ್ಞವರಾಹನಾಗಿ ಪ್ರಕಟನಾದ. ಆದ್ದರಿಂದ ಇಂದು ಏನೆಲ್ಲಾ ಯಜ್ಞ ಸಾಧನೆಗಳು ನಡೆಯುತ್ತವೆಯೋ ಅಂತಹ ಯೋಗಯಜ್ಞ, ಸ್ವಾಧ್ಯಾಯರೂಪ ಜ್ಞಾನಯಜ್ಞ, ದ್ರವ್ಯಯಜ್ಞ ಎಲ್ಲಾ ಯಜ್ಞಗಳಿಗೂ ಯಜ್ಞವರಾಹನೇ ನಿಯಾಮಕನಾಗಿದ್ದಾನೆ. ಜೀವನ ಯಜ್ಞವು ಈ ಯಜ್ಞನ ಸಹಾಯದಿಂದಲೇ ಕ್ಷಣ ಕ್ಷಣವೂ ನಡೆಯುತ್ತದೆ. ಆದ್ದರಿಂದ ಕ್ಷೇತ್ರ ಯಾತ್ರೆಗೆ ನಡೆದು ಹೋಗುವಾಗ, ಶಾಸ್ತ್ರಮಾರ್ಗದಲ್ಲಿ ನಡೆದುಹೋಗುವಾಗ, ದಾನಮಾರ್ಗದಲ್ಲಿ, ತಪೋಮಾರ್ಗ,ಯಜ್ಞಮಾರ್ಗಗಳಲ್ಲಿ ಬರುವ ವಿಘ್ನಗಳೇ ಅಧಿಕ. ಅದಕ್ಕೆ ಮಣ್ಣನ್ನು ಕೊನೆಯಲ್ಲಿ ಹಿಡಿದು ದೇಹಕ್ಕೆ ಮಣ್ಣನ್ನಂಟಿಸಿಕೊಳ್ಳದ ಅಜ್ಞಾನವೆಂಬ ಮಣ್ಣಿನಸೋಂಕೂ ಇಲ್ಲದ ಹರಿಯೇ ನಮ್ಮ ಅಜ್ಞಾನವೆಂಬ ಮಣ್ಣನ್ನು ಪರಿಹರಿಸಬೇಕು.

**ಒಂದು ಪ್ರಸಿದ್ಧ ಕಥೆಯಿದೆ-**

ಒಂದು ಊರಿನಲ್ಲಿ ಕೆಲವು ಕುರುಡರಿದ್ದರು. ಅವರಿಗೆ ಆನೆಯು ಹೇಗಿರುತ್ತದೆಂದು ತಿಳಿಯುವ ಕುತೂಹಲ ಉಂಟಾಯಿತು. ಅದಕ್ಕಾಗಿ ಒಂದು ಆನೆಯ ಬಳಿ ಬಂದು ಅದನ್ನು ಮುಟ್ಟಿನೋಡಿದರು. ಒಬ್ಬನು ಸೊಂಡಿಲನ್ನು ಮುಟ್ಟಿನೋಡಿ ಆನೆಯು ಹೆಬ್ಬಾವಿನಂತಿದೆ ಎಂದು ಊಹಿಸಿಕೊಂಡನು. ಇನ್ನೊಬ್ಬನು ಅದರ ಕಿವಿಯನ್ನು ಮುಟ್ಟಿ ಕೇರುವ ಮೊರದಂತಿದೆ ಎಂದು ತಿಳಿದನು. ಮತ್ತೊಬ್ಬನು ಕಾಲನ್ನು ಮುಟ್ಟಿ ಕಂಬದಂತಿದೆ ಎಂದು ಭಾವಿಸಿದನು. ಮತ್ತೊಬ್ಬ ಆನೆಯ

ಹೊಟ್ಟೆಯನ್ನು ಮುಟ್ಟಿ ಆನೆಯು ಗುಡಾಣದಂತಿದೆ ಎಂದು ನಿಶ್ಚಯಿಸಿಕೊಂಡನು. ಮತ್ತೊಬ್ಬ ಕುರುಡನು ಆನೆಯ ಬಾಲವನ್ನು ಮುಟ್ಟಿ ಹಗ್ಗದಂತಿದೆ ಎಂದು ತಿಳಿದನು. ಅಷ್ಟರಲ್ಲಿ ಆನೆ ಹೊರಟು ಹೋಯಿತು. ಕೂಡಲೇ ಕುರುಡರಲ್ಲಿ ಜಗಳ ಆರಂಭವಾಯಿತು. ಎಲ್ಲರೂ ತಮ್ಮ ತಮ್ಮ ಅನುಭವಗಳಲ್ಲಿ ತಮ್ಮ ತಮ್ಮ ವಾದವನ್ನು ಮುಂದಿಡಲಾರಂಭಿಸಿದರು. ಇದ್ದ ವಿಷಯವನ್ನು ಸರಿಯಾಗಿ ಅರಿತುಕೊಳ್ಳುವುದರಲ್ಲಿ ಪರಸ್ಪರ ಜಗಳ ಏರ್ಪಟ್ಟಿತು. ಅವರು ತಿಳಿದುಕೊಂಡಿರುವುದರಲ್ಲಿ ಕೆಲವು ಅಂಶ ಸರಿ ಕೆಲವು ಅಂಶ ತಪ್ಪು. ಜಗಳಕ್ಕೆ ಅವರ ಅವಿವೇಕ ಕಾರಣ.

ಇದರಂತೆ ಇಂದು ಈ ಜಗತ್ತಿನ ಬಗ್ಗೆ ಸಾವಿರಾರು ವಿಜ್ಞಾನಿಗಳ ಸಾವಿರ ಅನುಭವಗಳಿವೆ. ವಿಜ್ಞಾನಿಗಳ ಸಂಖ್ಯೆಯೇ ಅಧಿಕ. ಅದರಲ್ಲಿ ಕೆಲವರು ಡಾರ್ವಿನ್ ವಿಕಾಸವಾದಕ್ಕೆ ಜೋತು ಬಿದ್ದಿದ್ದಾರೆ, ಮತ್ತೆ ಕೆಲವರು ಭೂಮಿಯ ಆಳತೆ ಇಷ್ಟೇ ಎಂದು ನಿರ್ಧರಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಇವರ್‍ಯಾರಿಗೂ ಪೂರ್ಣ ಜಗತ್ತಿನ ಮಾಹಿತಿ ಇಲ್ಲ. ಕುರುಡರು ಆನೆಯ ಅಂಶವನ್ನು ಕಂಡಂತೆ ಇದೇ ಜಗತ್ತು ಎಂದು ನಿರ್ಧರಿಸುವರಾಗಿದ್ದಾರೆ. ಸರಿಯಾಗಿ ಇಪ್ಪತ್ನಾಲ್ಕು ಗಂಟೆಗಳ ಹವಾಮಾನವನ್ನೇ ಹೇಳಲಾಗದ ವಿಜ್ಞಾನಿಗಳು ಕಲ್ಪಕಾಲದ ಜಗತ್ತಿನ ಬಗ್ಗೆ ಏನು ಹೇಳಿಯಾರು? ಆದ್ದರಿಂದ, ಇಂದಿನ ವಿಜ್ಞಾನಿಗಳ ವಾದ ಎಷ್ಟೇ ಸರಿ ಎಂದು ಸಮರ್ಥಿಸಿದರೂ ಅದು ಕುರುಡರು ಮಾಡಿದ ಆನೆಯ ನಿರ್ಣಯದ ವಾದವನ್ನೇ ಹೋಲುತ್ತದೆ. ಆದರೆ ನಮ್ಮ ವರಾಹಸ್ವಾಮಿಯು ತನ್ನ ಕೋರೆದಾಡೆಯಲ್ಲಿಯೇ ಸಮಗ್ರ ಧರೆಯನ್ನು ಧರಿಸಿರುವುದರಿಂದ ಧರೆಯ ಮಣ್ಣಿನ ಕಣ ಕಣಗಳ ಪರಿಚಯ ಇರುವುದು ಅವನಿಗೆ ಮಾತ್ರ. ಒಂದು ಕೋರೆದಾಡೆಯ ಮೇಲೆ ಧರೆಯ ರಕ್ಷಣೆಯ ಆಟವನ್ನು ಆಡಿಸುತ್ತಿದ್ದಾನೆಂದರೆ ಅವನ ಸಾಮಾರ್ಥ್ಯ ಅವನ ಕಾರುಣ್ಯಗಳಿಗೆ ನಮೋ ನಮೋ ಎನ್ನದೆ ಏನು ಹೇಳಲು ಸಾಧ್ಯ!

ಸಾಧಕರೇ! ಈ ವರಾಹನ ಗುಣವನ್ನು ಇಂದು ನಾವೂ ಹೀಗೆ ತಿಳಿಯಬಹುದು. ವರಾಹನ ಮೂಗಿನ ಮೇಲೆ ಕೋರೆ ದಾಡೆಗಳಿವೆ. ಅದರಲ್ಲಿಯೇ ಭೂಮಂಡಲವಿದೆ. ವರಾಹನ ಮೂಗಿನ ನೇರದಲ್ಲಿ ಭೂಮಿಯಿದೆ. ಭೂಮಿಗೆ ಆಧಾರ ವರಾಹನ ಮೂಗು. ಆದ್ದರಿಂದ ಭೂಮಿಯನ್ನು ಅರಿಯಬೇಕೆಂದಿದ್ದರೆ ವರಾಹನ ಮೂಗನ್ನೇ ನೋಡಬೇಕು. ಇಂದು ನಾವು ಜಗತ್ತಿನಲ್ಲಿ ಯಾರಾದರೂ ಅತಿವಾದಗಳನ್ನು ಮುಂದಿಟ್ಟು ಅಧಿಕ ಪ್ರಸಂಗಿಗಳಾಗಿ ಕಂಡರೆ ಅವರಿಗೆ ನಾವು ಹೇಳುವ ಒಂದು ರೂಢಿ ಮಾತಿದೆ. 'ನಿನ್ನ ಮೂಗಿನ ನೇರಕ್ಕೆ ನೋಡಿಕೋ' 'ಅಧಿಕ ಪ್ರಸಂಗ ಮಾಡಬೇಡ ಮೂಗು ಮುರಿದುಕೊಳ್ಳುತ್ತಿ.' ಹೀಗೆಲ್ಲಾ ಹೇಳುತ್ತೇವೆ. ಶ್ರೀಕೃಷ್ಣನೂ ಗೀತೆಯಲ್ಲಿ **'ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ'** ಎಂದೇ ಹೇಳುತ್ತಾನೆ. ಈ ಮಾತುಗಳ ತಾತ್ಪರ್ಯವಿಷ್ಟೆ. ದಡ್ಡನಾಗಿ ವ್ಯವಹರಿಸುತ್ತಿದ್ದೀಯೇ. ಮೂಗಿನ ನೇರ ನೋಡು ಎಂದರೆ ವರಾಹನನ್ನು ಸ್ಮರಿಸು. ದಡ್ಡತನ ಪರಿಹಾರವಾಗುತ್ತದೆ ಎಂದು

ಅಭಿಪ್ರಾಯ. ಇಂದಿನ ವರಾಹಗಳಿಗೂ ಮೂಗಿನಲ್ಲಿ ಅಪಾರ ಗಂಧಗ್ರಹಣ ಸಾಮರ್ಥ್ಯವಿದೆ. ಎಷ್ಟು ದೂರದ ವಾಸನೆಯನ್ನು ಮೂಸಬಲ್ಲವು. ಒಂದು ರೀತಿಯಲ್ಲಿ ನಾಯಿಗಳಿಗೂ ಹಾಗೆ. ಸಕಲ ಪ್ರಾಣಿಗಳಿಗೆ ಮೂಗಿನಲ್ಲಿಯೇ ಜೀವನಕ್ಕೆ ಬೇಕಾದ ಜ್ಞಾನ ಅಧಿಕವಾಗಿದೆ. ಆದ್ದರಿಂದ ಜ್ಞಾನಮಾರ್ಗದಲ್ಲಿ ಭ್ರಷ್ಟರಾಗುವ ಸಂದರ್ಭ ಒದಗಿ ಬಂದಲ್ಲಿ ಮೂಗಿನ ದೇವತೆಯಾದ ವರಾಹನನ್ನು ವಿಶೇಷವಾಗಿ ಸ್ಮರಿಸಬೇಕು.

ಉತ್ತರಕುರುವರ್ಷದಲ್ಲಿ ವರಾಹರೂಪದಿಂದ ಶ್ರೀಹರಿಯನ್ನು ಭೂದೇವಿಯು ಭಕ್ತಿಯಿಂದ ಸ್ತುತಿಸುತ್ತಿದ್ದಾಳೆ.

ನಮ್ಮ ದೇಹದ ಸಮಗ್ರ ಚಟುವಟಿಕೆಗಳಿಗೆ ಶಕ್ತಿದಾತೃವಾಗಿ ಜೀವಾತ್ಮನಿದ್ದಾನೆ. ಜೀವನಿಲ್ಲದ ದೇಹದಲ್ಲಿ ಯಾವುದೇ ಚಟುವಟಿಕೆಗಳು ನಡೆಯವು. ಅದರಂತೆ ಬ್ರಹ್ಮಾಂಡದಲ್ಲಿಯೂ ಭಗವಂತನೆಂಬ ಚಿನ್ಮಯನಿರುವುದರಿಂದ ಜಗತ್ತಿನ ಸಕಲ ಪ್ರವೃತ್ತಿಗಳು ನಡೆಯುತ್ತಿವೆ. ನಮ್ಮ ಶರೀರದಿಂದ ಅನೇಕ ಕ್ರಿಯೆಗಳು ಅನಾಯಾಸವಾಗಿ ನಡೆಯುವಂತೆ ಭಗವಂತನೂ ಜಗತ್ತಿನ ಮೂಲಕ ಕ್ರೀಡೆಯಂತೆ ಪ್ರವೃತ್ತಿಗಳನ್ನು ನಡೆಸುತ್ತಿದ್ದಾನೆ. ಆದ್ದರಿಂದಲೇ ಜಗತ್ತಿಗೆ ಆತ್ಮನೆನಿಸಿದ್ದಾನೆ. ವರಾಹನ ಒಂದು ಶರೀರ ಜಗತ್ತದಾದರೆ ಮತ್ತೊಂದು ಶರೀರ ಯಜ್ಞ. ಆದ್ದರಿಂದಲೇ ಯಜ್ಞವರಾಹನೆನಿಸಿದ್ದಾನೆ.

**(ಸಶೇಷ)**

---

## ಶ್ರೇಯಃ ಪ್ರಾರ್ಥನೆ

ಶ್ರೀಯುತ ರಮೇಶ ದೇಶಪಾಂಡೆಯವರು ಶ್ರೀಮಠದ ಅಭಿಮಾನಿಗಳಾಗಿದ್ದು, ಕಳೆದ 15-20 ವರ್ಷಗಳಿಂದ ಶ್ರೀಮಠದಲ್ಲಿ ನಿರಂತರ ಸಂಪರ್ಕದಲ್ಲಿದ್ದು ಆರಾಧ್ಯ ದೇವರಾದ ಶ್ರೀರಾಮಚಂದ್ರದೇವರ ಬಹಳಷ್ಟು ಸೇವೆಯನ್ನು ಮಾಡಿರುತ್ತಾರೆ. ನಮ್ಮ ಪ್ರಥಮ ಶ್ರೀಕೃಷ್ಣ ಪೂಜಾಪರ್ಯಾಯದ ಎರಡು ವರ್ಷದ ಅವಧಿಯಲ್ಲಿ ತಿಂಗಳಿಗೆರಡು ಬಾರಿ ಬಂದು ಕೃಷ್ಣವಜ್ರಕವಚ ಅರ್ಪಣೆಯಲ್ಲಿ ವಿಶೇಷ ಸೇವೆಯನ್ನು ಸಲ್ಲಿಸಿರುವುದಲ್ಲದೆ, ನಮ್ಮ ಬೆಂಗಳೂರು, ಹುಬ್ಬಳ್ಳಿ, ಹರಿದ್ವಾರ, ಚಾತುರ್ಮಾಸ್ಯಗಳಲ್ಲಿ ರಾಮದೇವರ ಸೇವಾಕೈಂಕರ್ಯವನ್ನು ಸಲ್ಲಿಸಿದ್ದರು. ಇವರ ಅಗಲುವಿಕೆಯು ವೈಯಕ್ತಿಕವಾಗಿ ನಮಗೆ ಹಾಗೂ ಶ್ರೀಮಠಕ್ಕೆ ತುಂಬಲಾರದ ನಷ್ಟವಾಗಿದೆ. ಶ್ರೀರಾಮ-ಶ್ರೀಕೃಷ್ಣರ ಸೇವೆಯನ್ನು ಸಲ್ಲಿಸಿರುವ ಶ್ರೀ ರಮೇಶದೇಶಪಾಂಡೆಯವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲಿ ಹಾಗೂ ಇವರ ಕುಟುಂಬಕ್ಕೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಆರಾಧ್ಯಮೂರ್ತಿ ಶ್ರೀ ರಾಮಚಂದ್ರ-ಶ್ರೀಕೃಷ್ಣ ದೇವರಲ್ಲಿ ಪ್ರಾರ್ಥಿಸುತ್ತೇವೆ.

**-ಶ್ರೀ ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿ**

ಪುರಾಣ ಸಂದೇಶ

# ಮಾರ್ಕಂಡೇಯ ಪುರಾಣ

ವಿ|| ಅಡ್ವೆ ಲಕ್ಷ್ಮೀಶಾಚಾರ್ಯ

**ಬ್ರಹ್ಮಾಂಡೋತ್ಪತ್ತಿ**

**ಆದಿಕರ್ತಾಚ ಭೂತಾನಾಂ ಬ್ರಹ್ಮಾಗ್ರೇ ಸಮವರ್ತತ**

ಎಂಬುದಾಗಿ ಚತುರ್ಮುಖ ಬ್ರಹ್ಮನೇ ಸರ್ವಜಗತ್ ಕಾರಣನೆಂದು ದರ್ಶನ ಭಾಷೆಯಲ್ಲಿ ನಿರೂಪಿಸಲ್ಪಟ್ಟಿದೆ.

**ಬ್ರಹ್ಮಣಿ ಬ್ರಹ್ಮ ರೂಪೀ ಸಃ ಶಿವರೂಪೀ ಶಿವೇಸ್ಥಿತಃ।**

**ಪೃಥಗೇವಾವಸ್ಥಿತೋ ದೇವಃ ವಿಷ್ಣುರೂಪೋ ಜನಾರ್ದನಃ ।।**

ಎಂಬ ಪ್ರಮಾಣಾನುಸಾರವಾಗಿ ಬ್ರಹ್ಮಾಂತರ್ಯಾಮಿಯಾದ ಶ್ರೀಹರಿಯೇ ಜಗತ್ ಸೃಷ್ಟಿಗೆ ಕಾರಣ ಎಂಬುದನ್ನು ಮನಗಾಣಬೇಕು. ಈ ಪುರಾಣದ ಮಂಗಲಾಚರಣೆಯ ಶ್ಲೋಕವೂ ಈ ನಿಲುವಿಗೆ ಪೂರಕವಾಗಿದೆ. **ಆಪೋನಾರಾ ಇತಿ ಪ್ರೋಕ್ತಾಃ..............ತೇನ ನಾರಾಯಣಃ ಸ್ಮೃತಃ** ಎಂಬ ಮಾತು ಈ ಪುರಾಣದಲ್ಲೇ ಬಂದಿದೆ.

ತ್ರಿಗುಣಾತ್ಮಕವಾದ ಪ್ರಧಾನವೆಂದೆನಿಸಿದ ಅವ್ಯಕ್ತ ತತ್ವದಿಂದ ಮಹತ್ತತ್ವದ ಸೃಷ್ಟಿಯಾಯಿತು. ಮಹತ್ತತ್ವದಿಂದ ವೈಕಾರಿಕ ರಾಜಸ, ತಾಮಸಾತ್ಮಕ, ಅಹಂಕಾರ ಹುಟ್ಟಿತು. ಅಹಂಕಾರ ಪ್ರಭೇದವಾದ ತಾಮಸ ಅಹಂಕಾರದಿಂದ ಭೂತಪಂಚಕಗಳು (ಆಕಾಶ, ವಾಯು, ತೇಜಸ್ಸು, ನೀರು, ಮಣ್ಣು) ಪಂಚತನ್ಮಾತ್ರೆಗಳೂ (ಶಬ್ದ, ಸ್ಪರ್ಶ, ರೂಪ, ರಸ, ಗಂಧ) ತೈಜಸ ಅಹಂಕಾರದಿಂದ ಪಂಚಜ್ಞಾನೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ) ಪಂಚಕರ್ಮೇಂದ್ರಿಯಗಳೂ (ಕೈ, ಕಾಲು, ನಾಲಗೆ, ಗುದ, ಉಪಸ್ಥ) ಸಾತ್ವಿಕ ಅಹಂಕಾರದಿಂದ ಮನಸ್ಸು ತತ್ವದೇವತೆಗಳು, ಶರೀರಗಳ ಆವಿರ್ಭಾವವಾಯಿತು. ಇವಿಷ್ಟು ಪ್ರಾಕೃತಸರ್ಗಗಳು. ವೈಕಾರಿಕ ಸರ್ಗದಲ್ಲಿ ಮೊದಲು **'ಮುಖ್ಯಾ ನಗಾಃ ಯತಶ್ಚೋಕ್ತಾಃ'** ಎಂಬಂತೆ ಪರ್ವತಗಳ ವೃಕ್ಷಗಳ ಸೃಷ್ಟಿ. ನಂತರ ಇಪ್ಪತ್ತೆಂಟು ವಿಧದ ಪ್ರಾಣಿಗಳ ಸೃಷ್ಟಿ. (ತಿರ್ಯಕ್ ಸ್ರೋತಸ್ಸುಗಳು) ನಂತರ **ಊರ್ಧ್ವಸ್ರೋ_ತಸ್ಪತೀಯಸ್ತು ದೇವಸರ್ಗೋ ಹಿ ಸಸ್ಮೃತಃ'** ಎಂಬುದಾಗಿ ದೇವತೆಗಳ ಸೃಷ್ಟಿ ನಾಲ್ಕನೇ ಮಜಲಿನಲ್ಲಿ, **ಅರ್ವಾಕ್ ಸ್ರೋತಸ್ತು ಸಾಧಕಃ** ಎಂಬಂತೆ ಮನುಷ್ಯ ಸೃಷ್ಟಿ.

**ತೇ ಚ ಪ್ರಕಾಶಬಹುಲಾಃ ತಮೋದ್ರಿಕ್ತಾಃ ರಜೋಧಿಕಾಃ ।**

**ತಸ್ಮಾತ್ತೇ ದುಃಖಬಹುಲಾಃ ಭೂಯೋ ಭುಯಶ್ಚಕಾರಿಣಃ॥**

ಎಂಬುದಾಗಿ ಮನುಷ್ಯನ ಸ್ವಭಾವವನ್ನು ಚಿತ್ರಿಸಿದ್ದಾರೆ. ಇನ್ನು ಐದನೇ ಮಜಲಿನಲ್ಲಿ **ಪಂಚಮೋಽನುಗ್ರಹಃ ಸರ್ಗಃಸ ಚತುರ್ಧಾವ್ಯವಸ್ಥಿತಿಃ ।** ಎಂಬುದಾಗಿ ಸರ್ಗ, ವಿಪರ್ಯಯ, ಸಿದ್ಧಿ, ಶಾಂತಿ, ತುಷ್ಟಿ ಇವು ಅನುಗ್ರಹದ ಪ್ರಭೇದಗಳು. ಇವು ಐದು ವೈಕಾರಿಕ ಸೃಷ್ಟಿಯ ಸ್ತರಗಳು. **ಪ್ರಾಕೃತೋವೈಕೃತಶ್ಚೈವ ಕೌಮಾರೋ ನವಮಸ್ಮೃತಃ** ಎಂಬಂತೆ ಕೌಮಾರ ಸರ್ಗ (ಅಂಡಾತ್ ಬಹಿರ್ಜಾತಾನಾಂ ದೇವಾನಾಂ ಪುನಃ ಅಂಡಾಂತರ್ಭೂಮೌಜನ್ಮ ಕೌಮಾರಃ) ಪಾಕೃತ ವೈಕೃತ ಮಿಶ್ರ ಸರ್ಗವೆಂದಿದ್ದಾರೆ.

**ಪಾಕೃತೇಽಂಡೇ ವಿವೃದ್ಧಃಸನ್ ಕ್ಷೇತ್ರಜ್ಞೋ ಬ್ರಹ್ಮಸಂಜ್ಞಿತಃ ।**

**ಸವೈಶರೀರೀ ಪ್ರಥಮಃ ಸವಿರಾಟ್ ಪುರುಷ ಉಚ್ಯತೇ ।**

**ಆದಿ ಕರ್ತಾಚ ಭೂತಾನಾಂ ಬ್ರಹ್ಮಾಗ್ರೇ ಸಮವರ್ತತ ॥**

ಅವ್ಯಾಕೃತಾಕಾಶದಲ್ಲಿ ಪ್ರಾದುರ್ಭವಿಸಿದ ಹಿರಣ್ಮಯಾಂಡವನ್ನೇ ಶರೀರವನ್ನಾಗಿಸಿಕೊಂಡ ಚತುರ್ಮುಖ ಬ್ರಹ್ಮದೇವರು ಭಗವತ್ಪ್ರೇರಣೆಯಂತೆ ಸೃಷ್ಟಿ ಕಾರ್ಯವನ್ನು ಕೈಗೊಂಡರು. **ತಸ್ಯ ವರ್ಷ ಶತಂ ತ್ವೇಕಂ ಪರಮಾಯುರ್ಮಹಾತ್ಮನಃ** ಎಂಬಂತೆ ಬ್ರಹ್ಮದೇವರ ಆಯುಷ್ಯವೇ ಬ್ರಹ್ಮಾಂಡದ ಆಯುಷ್ಯ ಮನುಷ್ಯಮಾನದ 432 ಕೋಟಿ ವರ್ಷಗಳು ಬ್ರಹ್ಮದೇವರ ಹಗಲು ಅಷ್ಟೇ ವರ್ಷ ರಾತ್ರಿ ಕಳೆದರೆ ಒಂದು ದಿನ ಅಂದರೆ 864 ಕೋಟಿ ವರ್ಷ ಇಂತಹ 360 ದಿನಗಳು ಕಳೆದಾಗ ಒಂದು ವರ್ಷ ಅಂದರೆ 3,11,040 ಕೋಟಿ ವರ್ಷಗಳು ಇಂತಹ ನೂರು ವರ್ಷಗಳು ಆದಾಗ ಬ್ರಹ್ಮನ ಆಯುಷ್ಯ.

864 X 360 = 3,11,040 X 100

31,104,000 ಕೋಟಿ ವರ್ಷಗಳು

ಇದನ್ನು ಪರ ಎಂಬುದಾಗಿ ಕರೆಯುತ್ತಾರೆ. ಇದರ ಅರ್ಧ ಪರಾರ್ಧ.

**ಶತಂ ತಸ್ಯ ವರ್ಷಾಣಾಂ ಪರಂ ಇತ್ಯಭಿಧೀಯತೇ ।**

**ಪಂಚಾಶದ್ಭಿಸ್ತಥಾ ವರ್ಷೈಃ ಪರಾರ್ಧಮಿತಿ ಕೀರ್ತ್ಯತೇ।**

ಈಗ ಮೊದಲ ಪರಾರ್ಧ ಕಳೆದು (ಅಂದರೆ ಬ್ರಹ್ಮದೇವರ ಐವತ್ತು ವರ್ಷ ಕಳೆದು) 51ನೇ ವರ್ಷದ ಮೊದಲ ಹಗಲು ನಡೆಯುತ್ತಿದೆ. ಬ್ರಹ್ಮದೇವರ ಒಂದು ಹಗಲಲ್ಲಿ 14 ಮನ್ವಂತರಗಳು ಕಳೆದು ಹೋಗುತ್ತವೆ. ಹಿಂದಿನ ಪಾದ್ಮಕಲ್ಪ ಕಳೆದು ಈ ಶ್ವೇತವರಾಹ ಕಲ್ಪದ ಮೊದಲ ಮನ್ವಂತರ ಸ್ವಾಯಂಭುವ ಮನ್ವಂತರ.

**(ಸಶೇಷ)**

ಮುಖಪುಟಲೇಖನ

# ಗೆದ್ದುಪೋಪ ಬುದ್ಧಿ ತೋರೋ ಪದ್ಮನಾಭನೇ

-ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಕೇಶವಾದಿ ಮೂರ್ತಿಗಳಲ್ಲಿ ಪದ್ಮನಾಭರೂಪವು ಹನ್ನೊಂದನೆಯದ್ದು. ಅಶ್ವೀನ ಮಾಸದ ನಿಯಾಮಕನಾದ ಈ ಪದ್ಮನಾಭನ ಮೇಲಿನ ಬಲಗೈಯಲ್ಲಿ ಪದ್ಮವನ್ನು ಎಡಗೈಯಲ್ಲಿ ಚಕ್ರವನ್ನು ಕೆಳಗಿನ ಎಡಗೈಯಲ್ಲಿ ಗದೆಯನ್ನು ಬಲಗೈಯಲ್ಲಿ ಶಂಖವನ್ನು ಧರಿಸಿರತಕ್ಕವನನ್ನಾಗಿ ಧ್ಯಾನಿಸಬೇಕು ಎಂದು ಶ್ರೀಮಧ್ವಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ.

ಪದ್ಮನಾಭ ಶಬ್ದ ವಾಚ್ಯತ್ವವು ಭಗವಂತನಿಗೆ ಅನೇಕ ರೀತಿಯಲ್ಲಿ ಕೂಡುತ್ತದೆ.

1. **ಪದ್ಮಂ ನಾಭೌ ಯಸ್ಯ ಸಃ ಪದ್ಮನಾಭಃ** ಅಂದರೆ ಹೊಕ್ಕಳಲ್ಲಿ ಪದ್ಮವನ್ನು ಧರಿಸಿದವನು ಎಂದು ಅರ್ಥ.

2. **ಪದ್ಮಂ ನಯತೀತಿ ಪದ್ಮನಃ ಪದ್ಮನಸ್ಯ ಆಭೇವ ಆಭಾ ಯಸ್ಯಸಃ ಪದ್ಮನಾಭಃ** ಅಂದರೆ ಕಮಲದ ಅರಳುವಿಕೆಗೆ ಕಾರಣನಾದ್ದರಿಂದ ಸೂರ್ಯನಿಗೆ ಪದ್ಮನ ಎಂಬ ಹೆಸರು. ಆಸೂರ್ಯನ ಕಾಂತಿಯಂತೆ ಕಾಂತಿಯುಳ್ಳವನು ಎಂದು ಅರ್ಥ. ಪ್ರೋದ್ಯದಾದಿತ್ಯ ವರ್ಣಶ್ಚ ಎಂಬ ಗಾಯತ್ರಿಯ ಧ್ಯಾನದಲ್ಲಿಯು, ಉದ್ಯದ್ಭಾಸ್ವತ್ ಸಮಾಭಾಸಃ ಎಂಬ ಅಷ್ಟಾಕ್ಷರ ಮಂತ್ರದ ಧ್ಯಾನದಲ್ಲಿಯೂ ಕೂಡ ಭಗವಂತನನ್ನು ಈ ರೀತಿಯಾಗಿಯೇ ಧ್ಯಾನಿಸಬೇಕೆಂದು ತಿಳಿಸಿದ್ದಾರೆ.

3. **ಪದ್ಯಂತೇ ಇತಿ ಪದ್ಮಾನಿ ವೇದ ಪ್ರತಿಪಾದ್ಯಾನಿ ತೇಷು ನಾಭಿರಿವ (ಶ್ರೇಷ್ಠಃ). ಪದ್ಮನಾಭಃ** ವೇದ ಪ್ರತಿಪಾದ್ಯವಾದ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠನಾದವನು ಎಂದು ಅರ್ಥ. ವೇದದಿಂದ ಮುಖ್ಯವಾಗಿ ಪ್ರತಿಪಾದ್ಯನಾದ್ದರಿಂದ ಭಗವಂತನಿಗೆ ಈ ಅಭಿಧೇಯ.

4. **ಪದ್ಯತೇ ಪ್ರಾಪ್ಯತೇ ಮುಮುಕ್ಷುಬಿಃ ಇತಿ ಪದ್ಮಃ; ನಾಭಯತೀ ಮುಮುಕ್ಷೂಣಾಂ ಸಂಸಾರಂ ಹಿನಸ್ತೀತಿ ನಾಭಃ। ಪದ್ಮಶ್ಚಾಸೌ ನಾಭಶ್ಚ ಪದ್ಮನಾಭಃ** ಅಂದರೆ ಮೋಕ್ಷಾರ್ಥಿಗಳಿಂದ ಹೊಂದಲ್ಪಡತಕ್ಕವನಾದ್ದರಿಂದ ಪದ್ಮ. ಮೋಕ್ಷಾರ್ಥಿಗಳ ದುಃಖಕ್ಕೆ ಕಾರಣವಾದ ಸಂಸಾರವನ್ನು ನಾಶಮಾಡುವವನಾದ್ದರಿಂದ ನಾಭ. ಒಟ್ಟಿಗೆ ಪದ್ಮನಾಭ ಎಂದು ಹೆಸರು.

5. **ಪದ್ಮಂ ನಾಭಯತಿ ಇತಿ ಪದ್ಮನಾಭಃ** ಭಾಗವತತಾತ್ಪರ್ಯನಿರ್ಣಯದಲ್ಲಿ ಶ್ರೀಮಧ್ವಾಚಾರ್ಯರು ಉದಾಹರಿಸಿರುವ **ಪದ್ಮೋ ಬ್ರಹ್ಮಾ ಸಮುದ್ದಿಷ್ಟಃ ಪದ್ಮಾ ಶ್ರೀರಪಿ ಚೋಚ್ಯತೇ** ಎಂಬ ಬ್ರಾಹ್ಮದ ವಾಕ್ಯದಂತೆ ಪದ್ಮಶಬ್ದಕ್ಕೆ ಚತುರ್ಮುಖ ಬ್ರಹ್ಮ ಎಂದು ಅರ್ಥ. ಬ್ರಹ್ಮನನ್ನು ಕಲ್ಪದ ಕೊನೆಯಲ್ಲಿ ನಾಶಮಾಡುವವನಾದ್ದರಿಂದ ಪದ್ಮನಾಭ.

6. **ಪದ್ಮಃ ನಾಭೌ ಯಸ್ಯಸಃ ಪದ್ಮನಾಭಃ** ಬ್ರಹ್ಮದೇವರನ್ನು ನಾಭಿ ಕಮಲದಲ್ಲಿ ಧರಿಸಿದವನಾದ್ದರಿಂದ ಭಗವಂತ ಪದ್ಮನಾಭ.

7. **ಪದ್ಮನಸ್ಯ ಆಭಾ ಯಸ್ಮಾತ್ ಸಃ ಪದ್ಮನಾಭಃ** ಸೂರ್ಯನಲ್ಲಿ ಇರತಕ್ಕಂತಹ ಕಾಂತಿಯನ್ನು ಕರುಣಿಸಿದವನು ಎಂದು ಅರ್ಥ. ಭಗವದ್ಗೀತೆಯ 15ನೆಯ ಅಧ್ಯಾಯದಲ್ಲಿ

**ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್।**

**ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ**

ಎಂಬುದಾಗಿ ಕೃಷ್ಣನು ಈ ಅರ್ಥವನ್ನು ತಿಳಿಸಿದ್ದಾನೆ.

ಶ್ರೀಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ -

**ಪದ್ಮನಾಭ ಶುಭೋದ್ಭವ ವಂದೇ ಸಂಭೃತಲೋಕಭರಾಭರಭೂರೇ।**

ಎಂಬುದಾಗಿ ಸ್ತುತಿಸಿದ್ದಾರೆ. ಇಲ್ಲಿ ಶುಭೋದ್ಭವ ಎಂಬ ವಿಶೇಷಣವನ್ನು ಆಚಾರ್ಯರು ಭಗವಂತನಿಗೆ ಪ್ರಯೋಗಿಸಿದ್ದಾರೆ. **ಏತತ್ ಕ್ಷೀರೋದಾರ್ಣವಶಾಯಿ ಪದ್ಮನಾಭಾಭಿಧಂ ರೂಪಂ ನಾನಾವತಾರಾಣಾಂ ಮತ್ಸ್ಯಾದೀನಾಂ ವ್ಯಂಜಕಮ್।** ಕ್ಷೀರಸಾಗರದಲ್ಲಿ ಶೇಷಶಾಯಿಯಾಗಿರುವ ಭಗವಂತನ ಪದ್ಮನಾಭ ಎಂಬ ರೂಪವು ಭಗವಂತನ ಮತ್ಸ್ಯಾದಿ ಎಲ್ಲಾ ಅವತಾರರೂಪಗಳಿಗೂ ಕೂಡ ವ್ಯಂಜಕವಾಗಿದೆ ಎಂದು ತಿಳಿಸಿದ್ದಾರೆ. ಅಂದರೆ ಭಗವಂತನ ಎಲ್ಲಾ ಅವತಾರ ರೂಪಗಳೂ ಕೂಡ ಅಭಿವ್ಯಕ್ತವಾಗುವುದು ಪದ್ಮನಾಭನಿಂದ. ಅವತಾರ ಕಾರ್ಯ ಮುಗಿದನಂತರ ಸೇರುವುದು ಕೂಡ ಪದ್ಮನಾಭನನ್ನೇ ಮಂಗಳಕರಗಳಾದ ಭಗವಂತನ ಮತ್ಸ್ಯಾದಿ ರೂಪಗಳಿಗೆ ವ್ಯಂಜಕನಾದ್ದರಿಂದಲೇ ಶ್ರೀಮಧ್ವಾಚಾರ್ಯರು ಪದ್ಮನಾಭನನ್ನು ಶುಭೋದ್ಭವ ಎಂಬುದಾಗಿ ಸಂಭೋದಿಸಿದ್ದಾರೆ.

ಕನಕದಾಸರು *'ಬಿದ್ದು ಭವದನೇಕ ಜನುಮ ಬದ್ಧನಾಗಿ ಕಲುಷದಿಂದ ಗೆದ್ದು ಪೋಪ ಬುದ್ಧಿ ತೋರೋ ಪದ್ಮನಾಭನೇ'* ಎಂದು ಸ್ತುತಿಸಿದ್ದಾರೆ. ನಾನು ಈ ಸಂಸಾರಸಾಗರದಲ್ಲಿ ಮುಳುಗಿದ್ದೇನೆ. ಕ್ರಿಮಿ-ಕೀಟಾದಿ ಅನೇಕ ಜನ್ಮಗಳನ್ನು ಹೊಂದಿ ತುಂಬಾ ವ್ಯಥೆಪಟ್ಟಿದ್ದೇನೆ. ಇಂತಹ ಕಲ್ಮಶವಾದ ಸಂಸಾರ ಸಾಗರವನ್ನು ದಾಟಲು ಬೇಕಾಗುವಂತಹ ಬುದ್ದಿಯನ್ನು ನನಗೆ ಕರುಣಿಸು ಎಂದು ಕನಕದಾಸರ ಈ ಸ್ತುತಿಯ ತಾತ್ಪರ್ಯ. ಪದ್ಮನಾಭ ಶಬ್ದದ ಅರ್ಥವನ್ನು ನೋಡುವಾಗ ಮೋಕ್ಷಾರ್ಥಿಗಳಿಂದ ಪ್ರಾರ್ಥಿಸಲ್ಪಡತಕ್ಕವನು ಅವರ ಸಂಸಾರವನ್ನು ನಾಶಮಾಡುವವನು ಎಂಬ ಅರ್ಥವನ್ನು ತಿಳಿದಿದ್ದೇವೆ. ಆದ್ದರಿಂದಲೇ ಕನಕದಾಸರು ನನಗೆ ಸಂಸಾರದಿಂದ ಮುಕ್ತನಾಗುವ ಉಪಾಯವನ್ನು ತಿಳಿಸಿ ಮುಕ್ತಿಯನ್ನು ಕರುಣಿಸು ಎಂದು ಪದ್ಮನಾಭನಲ್ಲಿ ಪ್ರಾರ್ಥಿಸಿದ್ದಾರೆ. ನಾವು ಕೂಡ ಪದ್ಮನಾಭನನ್ನು ಪ್ರಾರ್ಥಿಸಿ ಸಂಸಾರಸಾಗರದ ತರಣೆಗೆ ಬೇಕಾದ ಉಪಾಯವನ್ನು ತಿಳಿಯಲು ಪ್ರಯತ್ನಿಸೋಣ.

★

# ಅಗ್ರಜನ ಅನುಗ್ರಹಕ್ಕಾಗಿ ಕಾದು ಕುಳಿತ ಅನುಜ

-ಅನಂತಕೃಷ್ಣಾಚಾರ್ಯ

ಆಚಾರ್ಯ ಶ್ರೀಮಧ್ವರ ಕೀರ್ತಿ ದಿಗ್ ದಿಗಂತಗಳಲ್ಲಿ ಪಸರಿಸಿತ್ತು. ಸಜ್ಜನರ ಗುಂಪು ಆಚಾರ್ಯರ ತತ್ವವಾದದಿಂದ ಆನಂದಭರಿತವಾಗಿತ್ತು. ಆಚಾರ್ಯರ ದರ್ಶನ; ಸರ್ವಮೂಲಗ್ರಂಥಗಳ ಶ್ರವಣ-ಮನನದಿಂದ ಭಗವಂತನ ಅನುಗ್ರಹದ ಅರಿವಾಗಿತ್ತು. ಮುಕ್ತಿಯು ಸನಿಹವಾಗುತ್ತಿತ್ತು.

ಇತ್ತ ಪಾಜಕದಲ್ಲಿ ವೃದ್ಧರಾದ ನಡಿಲ್ಲಾಯ ದಂಪತಿಗಳು ಪ್ರಾರಂಭದಲ್ಲಿ ಮಗನ ಮೇಲಿನ ಮಮತೆಯಿಂದ ಸಂನ್ಯಾಸಸ್ವೀಕಾರಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದರೂ ಬಳಿಕ ಮಗನು ಪೂರ್ಣಪ್ರಜ್ಞರಾಗಿ, ಆನಂದತೀರ್ಥರಾಗಿ ವೇದಾಂತಸಾಮ್ರಾಜ್ಯವನ್ನು ಅತ್ಯಂತ ಸಮರ್ಥವಾಗಿ ಮುನ್ನಡೆಸುತ್ತಿರುವುದನ್ನು ಕಂಡು ಆನಂದಭರಿತರಾಗಿದ್ದರು. ಶ್ರೀಮಧ್ವರೆಂಬ ಚಂದ್ರನ ನಿತ್ಯ ಸಂಬಂಧದಿಂದ, ಅವರ ಉಪದೇಶದಿಂದ, ಅವರಿಂದ ರಚಿತವಾದ ಗ್ರಂಥಗಳ ಶ್ರವಣ, ಮನನದಿಂದ ಅಜ್ಞಾನ-ವಿಪರೀತಜ್ಞಾನವೆಂಬ ಕತ್ತಲೆಯನ್ನು ನೀಗಿದವರಾಗಿ ಸಂಸಾರದ ತಾಪದಿಂದ ದೂರಾದರು. ಆಚಾರ್ಯ ಮಧ್ವರಂತಹ ದಿವ್ಯ ಚೇತನವನ್ನು ಜಗತ್ತಿಗೆ ನೀಡಿದ ಆ ದಂಪತಿಗಳು ಮುಂದೊಂದು ದಿನ ಕಾಲನ ಕರೆಗೆ ಓಗೊಟ್ಟು ಜಡದೇಹವನ್ನು ತ್ಯಜಿಸಿ ವೈಕುಂಠವನ್ನು ಸೇರಿದರೆಂಬುದು ಅತಿಶಯೋಕ್ತಿ ಅಲ್ಲವಷ್ಟೆ.

ಆಚಾರ್ಯರ ಅನುಗ್ರಹದಿಂದ ವೃದ್ಧರಾದ ತಂದೆ-ತಾಯಂದಿರ ಶುಶ್ರೂಷೆಗಾಗಿಯೇ ಜನಿಸಿದ್ದ ಆಚಾರ್ಯರ ಸಹೋದರನು ತಂದೆ-ತಾಯಂದಿರ ಮರಣದ ಬಳಿಕ ಪಾಜಕದಲ್ಲಿಯೇ ನೆಲೆಸಿದ್ದರು. ವಿಧಿಯ ವಿಲಾಸ ಯಾರನ್ನು ಬಿಡುವುದಿಲ್ಲವಷ್ಟೆ. ಅದು ಹೇಗಿದ್ದವನನ್ನು ಮತ್ತೆ ಹೇಗೂ ಮಾಡಲು ಸಮರ್ಥವಾದದ್ದು. ಆಚಾರ್ಯರ ಸಹೋದರನ ಜೀವನವೂ ಹೀಗೆಯೇ ಆಯಿತು. ವಿಧಿಯ ಹುಬ್ಬಿನ ಕುಣಿತದಿಂದ ಇದ್ದದ್ದನ್ನೆಲ್ಲಾ ಕಳೆದುಕೊಂಡರು. ಆದರೂ ಹತಾಶರಾಗಲಿಲ್ಲ. ವೇದ-ವೇದಾಂತಗಳನ್ನು ಚೆನ್ನಾಗಿ ಮನನ ಮಾಡಿದ್ದ ಅವರು '*ಆದದ್ದೆಲ್ಲ ಒಳಿತೇ ಆಯಿತು । ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು*' ಎಂದು ತಿಳಿದು ವೈರಾಗ್ಯಭಾವನೆಯನ್ನು ಹೊಂದಿದವರಾಗಿ ವಿಷ್ಣುಮಂಗಲದಲ್ಲಿದ್ದ ಅಣ್ಣಂದಿರಾದ ಆಚಾರ್ಯ ಶ್ರೀಮಧ್ವರ ಬಳಿ ಬಂದು ಪಾದಗಳಿಗೆ ಎರಗಿ ಸಂನ್ಯಾಸದೀಕ್ಷೆಯನ್ನು ನೀಡುವಂತೆ ಪ್ರಾರ್ಥಿಸಿದರು. ಎಲ್ಲವನ್ನು ಬಲ್ಲ ಆಚಾರ್ಯರಾದರೋ 'ಅದಕ್ಕೆ ತಕ್ಕ ಕಾಲ ಇನ್ನೂ ಒದಗಿ ಬಂದಿಲ್ಲ. ಕಾಲ ಕೂಡಿ ಬಂದಾಗ ನಾನೇ ಪಾಜಕಕ್ಕೆ ಬರುತ್ತೇನೆ' ಎಂದು ಹೇಳಿ ತಮ್ಮನನ್ನು ಮತ್ತೆ ಮನೆಗೆ ಕಳುಹಿಸಿದರು. ಅಣ್ಣಂದಿರಾದ ಆಚಾರ್ಯರ ಆದೇಶದಂತೆ ಮತ್ತೆ ಪಾಜಕದ ಮನೆಗೆ ಮರಳಿದ

ಸಹೋದರನು ಮೊದಲಿನಂತಿರಲಿಲ್ಲ. ಹಿಂದೆ ರಾಮಚಂದ್ರ ಕಾಡಿನಲ್ಲಿದ್ದಾಗ ಇತ್ತ ಭರತನು ರಾಮನ ಆಗಮನವನ್ನೇ ವೀಕ್ಷಿಸುತ್ತ ಎಲ್ಲ ಸುಖಭೋಗಗಳನ್ನು ತೊರೆದು ವರುಷಗಳನ್ನು ಕಳೆದಂತೆ ಆಚಾರ್ಯರ ಸಹೋದರನು ದಿನಗಳನ್ನು ಕಳೆದನು. ಶ್ರೀ ಮಧ್ವರನ್ನು ಹಗಲಿರುಳೂ ನೆನೆಯುತ್ತ ಅವರ ವಿರಹದಿಂದ ತಿನ್ನಲಿಲ್ಲ, ಮಲಗಲಿಲ್ಲ, ಕಡೆಗೆ ಮುಗುಳ್ನಗಲೂ ಇಲ್ಲ. 'ಆಚಾರ್ಯರು ಈ ಅಲ್ಪನ ಬಗ್ಗೆ ದಯೆ ತೋರುತ್ತಾರೋ; ಇಲ್ಲವೋ' ಎಂಬ ಒಂದೇ ದುಗುಡದಿಂದ ದಿನಕಳೆದರು.

ಆಚಾರ್ಯರಾದರೋ ವಿಷ್ಣುಮಂಗಲದಲ್ಲಿ ಚಾತುರ್ಮಾಸ್ಯವನ್ನು ಪೂರ್ಣಗೊಳಿಸಿ ಶರದೃತು ಮುಗಿದು ಮಾರ್ಗಶೀರ್ಷಮಾಸ ಪ್ರಾರಂಭವಾಗಲು ಅಲ್ಲಿಂದ ಪಾಜಕದತ್ತ ಹೊರಡಲು ಅಣಿಯಾದರು. ಆದರೆ ಜಯಸಿಂಹ ರಾಜನು ಆಚಾರ್ಯರನ್ನು ಬೀಳ್ಗೊಡಲು ಸಿದ್ಧನಿರಲಿಲ್ಲ. ಗುರುಗಳು ತನ್ನ ಬಳಿ ಇನ್ನಷ್ಟು ದಿನ ಇರಬೇಕೆಂದು ಮತ್ತೆ ಮತ್ತೆ ಪ್ರಾರ್ಥಿಸುತ್ತಿದ್ದನು. ಆಚಾರ್ಯರ ವಿರಹವನ್ನು ನೆನೆದು ಮರುಗುತ್ತಿದ್ದನು. ಆಚಾರ್ಯರು ತಾಯಿ ಮಗುವನ್ನು ಸಂತೈಸುವಂತೆ ಜಯಸಿಂಹ ರಾಜನನ್ನು ಸಂತೈಸಿದರು. ಆದರೂ ರಾಜ್ಯ-ಕೋಶ ಮುಂತಾದುವುಗಳನ್ನೆಲ್ಲಾ ತೊರೆದು ಆಚಾರ್ಯರೊಡನೆ ಹೊರಡುತ್ತೇನೆಂದು ಅಣಿಯಾದ ಜಯಸಿಂಹ ರಾಜನನ್ನು ವಿಹಿತ ಕರ್ತವ್ಯಗಳ ಪ್ರಜ್ಞೆ ಮೂಡಿಸಿ ಹೇಗೋ ರಾಜ್ಯದಲ್ಲಿ ನಿಲ್ಲಿಸಿ ಸಮಾಧಾನ ಪಡಿಸಿ ತ್ರಿವಿಕ್ರಮ ಪಂಡಿತರೊಡನೆ, ಇತರ ಶಿಷ್ಯರೊಡನೆ ಜಯಸಿಂಹನಿಂದ ಬಹಳ ಕಷ್ಟದಿಂದ ಬೀಳ್ಕೊಡಲ್ಪಟ್ಟವರಾಗಿ ತಮ್ಮ ಅವತಾರಭೂಮಿ ಪಾಜಕಕ್ಕೆ ಬಂದರು. ಅಲ್ಲಿ ತನ್ನ ವಿರಹವೇದನೆಯಿಂದ ಕೃಶವಾಗಿರುವ, ಸದಾ ತನ್ನ ಸ್ಮರಣೆಯಲ್ಲಿ ದಿನ ದೂಡುತ್ತಿರುವ ತಮ್ಮನನ್ನು ಕಂಡರು.

ಆಚಾರ್ಯರ ವ್ಯಕ್ತಿತ್ವ ಎಷ್ಟು ಅದ್ಭುತವಾದುದಲ್ಲವೆ. ಅವರನ್ನು ಕಂಡವರು, ಅವರ ಗುಣಗಳನ್ನು ಸವಿದವರು ಮತ್ತೆ ಅವರನ್ನು ಬಿಡಲೊಲ್ಲರು. ಆಚಾರ್ಯರ ಅಸದೃಶ ಪ್ರಭಾವವೇ ಅಂಥವರಲ್ಲಿ ಭಗವದ್ಭಕ್ತಿ-ಸಂಸಾರವಿರಕ್ತಿ-ಜ್ಞಾನದಲ್ಲಿ ಆಸಕ್ತಿಯನ್ನು ಮೂಡಿಸುವುದಕ್ಕೆ ತ್ರಿವಿಕ್ರಮ ಪಂಡಿತರು, ಜಯಸಿಂಹರಾಜ, ಆಚಾರ್ಯರ ಸಹೋದರ ಮುಂತಾದವರೇ ಸಾಕ್ಷಿ.

ಪಾಜಕದಲ್ಲಿ ಸಂನ್ಯಾಸಕ್ಕಾಗಿ ಕಾದು ಕುಳಿತಿರುವ, ಅದಕ್ಕೆ ಅವಶ್ಯವಾಗಿ ಬೇಕಾದ ಗುಣಗಳಾದ ತಂದೆ-ತಾಯಂದಿರ ಕುಲಶುದ್ಧಿ, ವೇದಾಧ್ಯಯನವನ್ನು ಮಾಡಿ ಅರ್ಥಜ್ಞಾನದ ಸಂಪಾದನೆ, ಮನಸ್ಸು-ಮಾತು-ಕಾಯ ಶುಚಿಯಾಗಿರುವಿಕೆ ಮುಂತಾದ ಯೋಗ್ಯವಾದ ಅರ್ಹತೆಗಳುಳ್ಳ, ತನ್ನ ತಂದೆ-ತಾಯಂದಿರ ಕಾರ್ಯಗಳನ್ನು ಪೂರೈಸಿ ಋಣಮುಕ್ತನಾದ, ವಿಷಯಪದಾರ್ಥಗಳನ್ನು ಉಂಡು ಬೇಡವೆಂದು ತೊರೆದು ವಿರಕ್ತವಾದ ಮನಸ್ಸುಳ್ಳ ತಮ್ಮನನ್ನು ಕಂಡು ಸಂನ್ಯಾಸಾಶ್ರಮ ದೀಕ್ಷೆಯನ್ನು ನೀಡಿ ಅನುಗ್ರಹಿಸಿದರು. ಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸು ಮಾಡುವವರೂ ಅರಿಯದ ಪ್ರಣವದ ರಹಸ್ಯಾರ್ಥಗಳನ್ನು ಉಪದೇಶಿಸಿದರು. ಪ್ರೀತಿಯ ಅಮೃತಧಾರೆಯನ್ನು ಸುರಿಸುತ್ತ ಮುಗುಳುನಗೆಯಿಂದ ಕೂಡಿದ ಕಿರುನೋಟದಿಂದ ಹರಸುತ್ತ 'ಶ್ರೀವಿಷ್ಣುತೀರ್ಥ' ಎಂದು ಹೆಸರಿಟ್ಟರು.

***(ಸಶೇಷ)***

# ಶ್ರೀವಿಷ್ಣುಪುರಾಣ

## ಶುಕ್ರನೀತಿಯನ್ನು ಪ್ರಹ್ಲಾದನು ತಿರಸ್ಕರಿಸಿದ

**-ಸ್ಫೂರ್ತಿ**

ಪ್ರಹ್ಲಾದನ ಉತ್ತರದಿಂದ ಕ್ರೋಧಭರಿತನಾದ ಹಿರಣ್ಯಕಶಿಪುವು ತನ್ನ ಬಂಟರಿಗೆ 'ದುಷ್ಟನಾದ ಇವನನ್ನು ಈ ಮಹಡಿಯಿಂದ ನೂರುಯೋಜನ ದೂರದ ಪರ್ವತದ ಬುಡಕ್ಕೆ ಎಸೆಯಿರಿ. ಈತನ ದೇಹ ಪರ್ವತದ ಕಲ್ಲು ಬಂಡೆಗೆ ಅಪ್ಪಳಿಸಲ್ಪಟ್ಟು ನುಚ್ಚುನೂರಾಗಿ ಹೋಗಲಿ' ಎಂದು ಆದೇಶಿಸಿದ. ಕೂಡಲೆ ದೈತ್ಯಭಟರು ಪ್ರಹ್ಲಾದನನ್ನು ನೂರುಯೋಜನ ದೂರಕ್ಕೆ ಎಸೆದರು. ಪ್ರಹ್ಲಾದನಾದರೋ ಹೃದಯದಲ್ಲಿ ಶ್ರೀಹರಿಯನ್ನು ಬಿಡದೆ ನೆನೆಯುತ್ತಿದ್ದ. ಅದರ ಬಲದಿಂದಲೆ ಕೆಳಕ್ಕೆ ಬೀಳುತ್ತಿರುವ ಪ್ರಹ್ಲಾದನನ್ನು ಭೂಮಿಯು ಎತ್ತಿ ಹಿಡಿದಳು. ತಾಯಿ ಮಗುವನ್ನು ರಕ್ಷಿಸುವಂತೆ ರಕ್ಷಿಸಿದಳು. ಪ್ರಹ್ಲಾದ ಮೊದಲಿನಂತೆ ಸುದೃಢವಾಗಿ; ಸ್ವಲ್ಪವೂ ವಿಕಾರಗೊಳ್ಳದವನಾಗಿ ಮರಳಿ ತಂದೆಯ ಬಳಿಗೆ ಬಂದ. ಆರೋಗ್ಯವಾಗಿ; ಸುದೃಢನಾಗಿರುವ ಮಗನನ್ನು ಕಂಡು ಹಿರಣ್ಯಕಶಿಪು ಮತ್ತೆ ಚಿತ್ತಕ್ಷೋಭೆಗೊಳಗಾದ. ಮುಂದೇನು? ಎಂದು ತಲೆಕೆಡಿಸಿಕೊಂಡ. ಕಡೆಗೊಂದು ಉಪಾಯ ಕಂಡಿತು. ಮಾಯಾವಿದ್ಯೆಯನ್ನು ಬಲ್ಲವರಲ್ಲಿ ಅತಿನಿಪುಣನಾದ ಶಂಬರಾಸುರನನ್ನು ಬರ ಹೇಳಿದ. 'ನಮಗೆ ಈತನನ್ನು ಕೊಲ್ಲಲು ಸಾಧ್ಯವಾಗುತ್ತಿಲ್ಲ. ನೀನಾದರೋ ಮಾಯಾವಿದ್ಯೆಯಲ್ಲಿ ನಿಪುಣ. ಆ ಮಾಯೆಯಿಂದ ಈತನನ್ನು ಕೊಲ್ಲು' ಎಂದು ಆದೇಶಿಸಿದ. ಹಿರಣ್ಯಕಶಿಪುವಿಗೆ ಆಶ್ವಾಸನೆಯನ್ನು ತುಂಬಿದ ಶಂಬರಾಸುರನು ಪ್ರಹ್ಲಾದನ ಮೇಲೆ ನೂರಾರು ಮಾಯೆಗಳನ್ನು ಸೃಜಿಸಿ ಪ್ರಯೋಗಿಸಿದ. ಪ್ರಹ್ಲಾದನು ಯಾವ ದುಗುಡಕ್ಕೂ ಒಳಗಾಗದೆ ಏಕಾಗ್ರಚಿತ್ತದಿಂದ ಭಗವಂತನನ್ನು ನೆನೆಯುತ್ತಲಿದ್ದ. ಭಕ್ತನಾದ ಪ್ರಹ್ಲಾದನ ರಕ್ಷಣೆಗಾಗಿ ಭಗವಂತನು ತನ್ನ ಸುದರ್ಶನ ಚಕ್ರವನ್ನೇ ಕಳುಹಿಸಿದ. ಆ ಚಕ್ರವು ಶಂಬರಾಸುರನ ನೂರಾರು ಮಾಯೆಗಳನ್ನು ಒಮ್ಮೆಲೆ ತುಂಡರಿಸಿತು. ಶಂಬರಾಸುರನು ಸೋತು ಹಿಂದಿರುಗಿದ.

ಹಿರಣ್ಯಕಶಿಪು ಮತ್ತೆ ವಾಯುವನ್ನು ಕರೆದ. ಪ್ರಹ್ಲಾದನನ್ನು ನಾಶಪಡಿಸುವಂತೆ ಆದೇಶಿಸಿದ. ಆ ಪ್ರವಹವಾಯುವು ಹಿರಣ್ಯಕಶಿಪುವಿನ ಆದೇಶದಂತೆ ಪ್ರಹ್ಲಾದನ ದೇಹದ ಒಳಹೊಕ್ಕು ಬಾಧಿಸಲು ತೊಡಗಿದನು. ಚಳಿಯಿಂದ ಮೈನಡುಗಿತು. ಒಣಗಲು ಪ್ರಾರಂಭಿಸಿತು. ಪ್ರಹ್ಲಾದನು ಇದ್ಯಾವುದನ್ನೂ ಎಣಿಸದೆ ಭಗವಂತನ ಸ್ಮರಣೆಯಲ್ಲಿಯೇ ನಿರತನಾಗಿದ್ದನು. ಭಗವಂತನು ಪ್ರಹ್ಲಾದನ ಒಳಗೆ

ಇದ್ದವನಾಗಿ ಆ ವಾಯುವನ್ನು ಕುಡಿದು ಪ್ರಹ್ಲಾದನನ್ನು ಬದುಕಿಸಿದ.

ಹೀಗೆ ಯಾವುದೇ ಪ್ರಯೋಗದಿಂದಲೂ ಪ್ರಹ್ಲಾದನು ಮತ್ತೆ ಬದುಕಿ ಉಳಿಯುತ್ತಿರುವುದನ್ನು ಕಂಡು ಹಿರಣ್ಯಕಶಿಪುವು ಕೈ ಚೆಲ್ಲಿ ಕೂತನು. ಆ ಸಮಯದಲ್ಲಿ ಶಂಡಾಮರ್ಕರು ಬಂದು ಪ್ರಹ್ಲಾದನನ್ನು ಮತ್ತೆ ಗುರುಕುಲಕ್ಕೆ ಕರೆದೊಯ್ದು ಶುಕ್ರನೀತಿಯನ್ನು ಉಪದೇಶಿಸಿದರು. ಪ್ರಹ್ಲಾದನು ಆ ಎಲ್ಲವನ್ನೂ ಕೇಳಿದನು. ಗುರುಗಳು ಮತ್ತೆ ಪ್ರಹ್ಲಾದನನ್ನು ತಂದೆಯ ಬಳಿಗೆ ಕರೆತಂದರು. ವಿನಯದಿಂದ ಬಾಗಿ ನಿಂತಿರುವ ಮಗನನ್ನು ಕಂಡು ಹಿರಣ್ಯಕಶಿಪುವು ' ಪ್ರಹ್ಲಾದ; ನೀನು ನೀತಿಶಾಸ್ತ್ರವನ್ನು ಅಧ್ಯಯನ ಮಾಡಿ ಬಂದಿರುವಿ. ಆದ್ದರಿಂದ ಮಿತ್ರ-ಶತ್ರು-ಮಧ್ಯಮರ ಬಳಿ ಹೇಗೆ ವರ್ತಿಸಬೇಕು? ಮಂತ್ರಿ- ಅಮಾತ್ಯರ, ಅರಮನೆಯ ಒಳಹೊರಗಿನವರ ಬಳಿ ಹೇಗಿರಬೇಕು? ಶತ್ರುಗಳನ್ನು ನಿಗ್ರಹಿಸುವುದು ಹೇಗೆ? ಇವೆಲ್ಲವನ್ನು ವಿವರಿಸು' ಎಂದು ಕೇಳಿದನು.

ತಂದೆಗೆ ನಮಸ್ಕರಿಸಿ ವಿನಯದಿಂದ ನಿಂತ ಪ್ರಹ್ಲಾದನು ಅಪ್ಪ, ಗುರುಗಳು ನನಗೆ ಎಲ್ಲವನ್ನೂ ವಿವರಿಸಿದರು. ನಾನೂ ಆ ಎಲ್ಲವನ್ನೂ ಕೇಳಿದೆನು. ಆದರೆ ಆ ಶುಕ್ರನೀತಿ ಸಜ್ಜನರು ಮೆಚ್ಚುವ ಮಾತಲ್ಲವೆಂಬುದು ನನ್ನ ಅಭಿಪ್ರಾಯ. ಸಾಮ-ದಾನ-ಭೇದ-ದಂಡ ಈ ಉಪಾಯಗಳು ಮಿತ್ರಾದಿಗಳನ್ನು ಸಾಧಿಸಲು ತಿಳಿಸಲಾಗಿದೆ. ಆದರೆ ನನಗೆ ಈ ಜಗತ್ತಿನಲ್ಲಿ ಮಿತ್ರ-ಶತ್ರು ಭೇದವೇ ತಿಳಿಯುತ್ತಿಲ್ಲ. ಜಗದೊಡೆಯನಾದ ಜಗನ್ನಾಥನು ಎಲ್ಲರೊಳಗೂ ನೆಲೆಸಿರಲು ಮಿತ್ರ-ಶತ್ರುವೆಂಬ ಭೇದಭಾವನೆಗೆ ಅವಕಾಶವೆಲ್ಲಿದೆ? ಆ ಭಗವಂತ ನಿನ್ನೊಳಗೂ, ಎನ್ನೊಳಗೂ, ಎಲ್ಲರೊಳಗೂ ನೆಲೆಸಿರುವಾಗ ಯಾರನ್ನು ಶತ್ರುವೆಂದು ಬೇರ್ಪಡಿಸುವುದು. ಆದ್ದರಿಂದ ಇಂತಹ ಭೇದ ಭಾವನೆಯನ್ನುಂಟುಮಾಡುವ ಮಾತುಗಳು ಸಾಕು. ಮತ್ತಷ್ಟು ಅಜ್ಞಾನ- ವಿಪರೀತ ಜ್ಞಾನವನ್ನೇ ತುಂಬುವ ಇಂತಹ ಪ್ರಯತ್ನ ಸಾಕು. ಸುಜ್ಞಾನವನ್ನುಂಟು ಮಾಡುವ ಪ್ರಯತ್ನ ಮಾಡೋಣ.

**ತತ್ಕರ್ಮ ಯನ್ನ ಬಂಧಾಯ ಸಾ ವಿದ್ಯಾ ಯಾ ವಿಮುಕ್ತಯೇ ।**
**ಆಯಾಸಾಯಾಪರಂ ಕರ್ಮ ವಿದ್ಯಾನ್ಯಾ ಶಿಲ್ಪನೈಪುಣಮ್ ॥** (ವಿ.ಪು. 1-19-41)

ಯಾವುದು ಬಂಧನಕ್ಕೆ ಸಿಲುಕಿಸುವುದಿಲ್ಲವೋ ಅದೇ ನಿಜವಾದ ಕರ್ಮ. ಯಾವುದು ಮುಕ್ತಿಗೆ ಕಾರಣವೋ ಅದೇ ನಿಜವಾದ ವಿದ್ಯೆ. ಉಳಿದದ್ದೆಲ್ಲವೂ ಕೇವಲ ಉಪಯೋಗವಿಲ್ಲದ ಶ್ರಮವನ್ನುಂಟುಮಾಡುವ ಕರ್ಮಗಳು. ಉಳಿದ ವಿದ್ಯೆಗಳೂ ಕೇವಲ ಕಲೆಗಾರಿಕೆಯಷ್ಟೆ.

**(ಸಶೇಷ)**

ಫೋಟೋ

**ಬೀಡಿನಗುಡ್ಡೆಯ ಶ್ರೀಕೃಷ್ಣ ಟೆಕ್ನಿಕಲ್ ಎಜುಕೇಶನ್ ಸೆಂಟರ್‌ನ 7ನೇ ವಾರ್ಷಿಕೋತ್ಸವ ಮತ್ತು ಪ್ರಮಾಣಪತ್ರ ವಿತರಣೆ ಸಮಾರಂಭವನ್ನು ಪಲಿಮಾರು ಮಠದ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ಉದ್ಘಾಟಿಸಿದರು.**

ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶತೀರ್ಥರ ಅಧ್ಯಕ್ಷತೆಯಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಿಂಡಿಕೇಟ್ ಬ್ಯಾಂಕಿನ ಮಹಾಪ್ರಬಂಧಕ ಶ್ರೀ ಹರಿಭಟ್, ಮಂಗಳೂರಿನ ದಿಯಾ ಸಿಸ್ಟಮ್‌ನ ಸಿ ಇ ಒ ಡಾ|| ರವಿಚಂದ್ರನ್ ಮತ್ತು ಉಡುಪಿ ಪ್ರಸಿದ್ಧ ನ್ಯಾಯವಾದಿ ಶ್ರೀ ಪದೀಪಕುಮಾರ್ ಭಾಗವಹಿಸಿದ್ದರು. ದಿವಾನರಾದ ಎಸ್. ವೇದವ್ಯಾಸ ತಂತ್ರಿಗಳು ಸ್ವಾಗತಿಸಿದರು. ಪ್ರಾಂಶುಪಾಲ ಶ್ರೀ ಸುಧೀಂದ್ರ ಪ್ರಾಸ್ತಾವಿಕ ಮಾತನಾಡಿದರು. ಮಠದ ವ್ಯವಸ್ಥಾಪಕ ಶ್ರೀ ಬಲರಾಮ ಭಟ್ಟರು ವಂದಿಸಿದರು. ಶ್ರೀ ರವೀಂದ್ರ ಗುಜ್ಜರಬೆಟ್ಟು ಕಾರ್ಯಕ್ರಮ ನಿರ್ವಹಿಸಿದರು.

---

(2ನೇ ಪುಟದಿಂದ...)

ರಾಗ ದ್ವೇಷಪೂರಕವಾಗಿ ಕರ್ಮ ಮಾಡುವವರಿಗೇ ಕರ್ಮದ ಫಲ. ಈಶ್ವರನಿಗೆ ರಾಗ-ದ್ವೇಷಗಳಿಲ್ಲ. ಜಡ ವಸ್ತುಗಳಿಗೆ ರಾಗ-ದ್ವೇಷಗಳಿಲ್ಲ. ಈಶ್ವರ ಮತ್ತು ಜಡಕ್ಕಿಂತ ಭಿನ್ನನಾದ ಜೀವನಿಗೆ ರಾಗ-ದ್ವೇಷಗಳಿವೆ. ಜೀವನ ಯೋಗ್ಯತೆ, ಜನ್ಮಾಂತರದ ಕರ್ಮ ಇವುಗಳಿಗೆ ಅನುಸಾರವಾಗಿ ಜೀವನನ್ನು ಶುಭಾಶುಭದಲ್ಲಿ ಭಗವಂತ ಪ್ರೇರಣೆಮಾಡುತ್ತಾನೆ. ಆದ್ದರಿಂದ ಜೀವನೊಬ್ಬನೇ ಅಸ್ವತಂತ್ರ ಕರ್ತನಾದ್ದರಿಂದ ಕರ್ಮಫಲವನ್ನು ಅನುಭವಿಸುವವನು ಅವನೇ ಆಗಿರುತ್ತಾನೆ. ಹೊರತು ಭಗವಂತನಲ್ಲ ಈ ರೀತಿಯಾಗಿ ಮೇಲಿನ ಎರಡು ಸಂಶಯಗಳಿಗೆ ಶಾಸ್ತ್ರಕಾರರು ತಿಳಿಸಿರುತ್ತಾರೆ. ★

# ಶನಿಶ್ಚ ಶಂ ಪ್ರಾಪಯತು

-ವಿ|| ಕುಂಭಾಸಿ ಶ್ರೀ ಶ್ರೀಪತಿ ಉಪಾಧ್ಯಾಯ

ನ್ಯಾಯಾಧೀಶನೂ ದುಃಖಕಾರಕನೂ ಆದ ಶನಿಯು ಆಬಾಲವೃದ್ಧರಿಗೂ ಪರಿಚಿತನಾಗಿದ್ದಾನೆ. ವೈಜ್ಞಾನಿಕವಾಗಿ ಈತನು ಸೌರವ್ಯೂಹದ 2ನೇ ದೊಡ್ಡ ಗ್ರಹ. ಸೂರ್ಯನಿಂದ ಅತಿ ದೂರದಲ್ಲಿದ್ದಾನೆ. ನವಗ್ರಹರಲ್ಲಿಯೇ ಅತ್ಯಂತ ಸುಂದರನಾದ ಇವನಿಗೆ ಎರಡು ಬೃಹತ್ ಉಂಗುರಗಳಿವೆ. ಇದರ ಸಾಂದ್ರತೆ 810ಗಿಂತಲೂ ಕಡಿಮೆ. ಇದೂ ಕೂಡ ವೇಗವಾಗಿ ಭ್ರಮಿಸುತ್ತದೆ. ಮಂಜುಗಡ್ಡೆಯಿಂದ ಕೂಡಿದ ಉಂಗುರ ವ್ಯವಸ್ಥೆ 60,000 ದಿಂದ 3 ಲಕ್ಷ ಕಿ.ಮೀ ವರೆಗೂ ವ್ಯಾಪಿಸಿದ್ದು ಕೇವಲ 58 ಮೀ. ದಪ್ಪವಾಗಿದೆ. ಈ ಎರಡು ಉಂಗುರವನ್ನು ವಿಭಾಗಿಸುವ ಖಾಲಿಪ್ರದೇಶ 'ಕ್ಯಾಸಿನಿ ವಿಭಾಜಕ' ಎನ್ನುತ್ತೇವೆ. ಇದಕ್ಕೆ ಇಪ್ಪತ್ತಕ್ಕೂ ಹೆಚ್ಚು ಉಪಗ್ರಹಗಳಿವೆ. ಇದರಲ್ಲಿ ಟೈಟಾನ್ ಉಪಗ್ರಹ ದೊಡ್ಡದಾಗಿದ್ದು ತನ್ನದೇ ಆದ ವಿಶೇಷ ವಾತಾವರಣವನ್ನು ಹೊಂದಿದೆ. ಶನಿಗ್ರಹವು 1427 ಬಿಲಿಯನ್ ಕಿ.ಮೀ ದೂರದಲ್ಲಿದೆ. ಇದರ ವ್ಯಾಸವು 1,20,660 ಕಿ.ಮೀ ಇದರ ಗಾತ್ರ ಭೂಮಿಯ ಅಳತೆಯ 769 ಪಟ್ಟು ಹೆಚ್ಚಿದೆ. ಇದು ಸೂರ್ಯನಿಂದ ದೂರದಲ್ಲಿದ್ದು ತಂಪಾಗಿದೆ. ಇದರ ವಾತಾವರಣದಲ್ಲಿ ಮಿಥೇನ್ ಅಮೋನಿಯಾ, ನೀರಾವಿ ಇದೆ. ಶನಿಯ ಸ್ವಯಂ ಪರಿಭ್ರಮಣ ಕಾಲ 10,656 ಗಂಟೆಗಳು. ಅರ್ಥಾತ್ 444 ದಿನಗಳು.

ಪೌರಾಣಿಕವಾಗಿ ಆದಿಯುಗದಲ್ಲಿ ಸೂರ್ಯನ ಅತಿತಾಪವನ್ನು ತಾಳಲಾರದೆ ಜೀವಿಗಳು ಬ್ರಹ್ಮದೇವರಲ್ಲಿ ಪ್ರಾರ್ಥನೆ ಮಾಡಿದವು. ಆಗ ಬ್ರಹ್ಮದೇವರು ಸೂರ್ಯನನ್ನು ಕುರಿತು ನಿನ್ನ ತಾಪವನ್ನು ಸಹಿಸಲು ದೇವತೆಗಳೇ ಸಮರ್ಥರಾಗುವುದಿಲ್ಲ. ಇನ್ನು ಜೀವಿಗಳು ಸಹಿಸುವುದಾದರೂ ಎಂತು? ಆದ್ದರಿಂದ ತೇಜಸ್ಸನ್ನು ಕಡಿಮೆ ಮಾಡಿಕೋ ಎಂದು ಉಪದೇಶಿಸಿದನು. ಹೀಗೆ ಪ್ರಜಾಪತಿಯಿಂದ ಆದಿಷ್ಟನಾದ ರವಿಯು ಕ್ರುದ್ಧನಾಗಿ ತನ್ನ ಸ್ವಭಾವರೂಪದ ಕ್ರೋಧನನನ್ನೇ ಮಗನಾಗಿ ಪಡೆದನು. ಆತನನ್ನೇ ಪ್ರಜೆಗಳು ಶನೈಶ್ಚರನೆಂದು ಕರೆಯುವರು. ವಿಶ್ವಕರ್ಮನ ಮಗಳಾದ ಸಂಜ್ಞೆಯು ಸೂರ್ಯನಿಗೆ ಪತ್ನಿಯಾದಳು. ಯಮ, ಯಮಿ ಎಂಬ ಪುತ್ರ, ಪುತ್ರಿಯರು ಇವರ ಮಕ್ಕಳಾದರು. ಸೂರ್ಯನ ತಾಪವನ್ನು ತಾಳಲಾರದೆ ಸಂಜ್ಞೆಯು ತನ್ನ ನೆರಳಿಗೆ ಚೈತನ್ಯ ನೀಡಿ ಸೂರ್ಯನೊಂದಿಗೆ ಸಂಸಾರಮಾಡುವಂತೆ ಸೂಚಿಸಿದಳು. ಸೂರ್ಯ ಹಾಗೂ ಛಾಯಾಳ ದಾಂಪತ್ಯದ ಫಲವಾಗಿ ಶನಿಯು

ಜನಿಸಿದನು. ಛಾಯಾದೇವಿ ತನ್ನ ಹಾಗೂ ಸಂಜ್ಞಾದೇವಿಯ ಮಕ್ಕಳಲ್ಲಿ ಪಕ್ಷಪಾತ ಮಾಡುತ್ತಿದ್ದಳು. ಸೂಕ್ಷ್ಮ ಬುದ್ಧಿಯ ಯಮನು ಸೂರ್ಯನಲ್ಲಿ ತಿಳಿಸಿದನು. ಆಗ ಛಾಯಾದೇವಿ ಸಿಟ್ಟಿನಿಂದ ಯಮನನ್ನು ಪ್ರೇತನಾಗುವಂತೆ ಶಪಿಸಿದಳು. ಆದರೆ ಸೂರ್ಯನು ಯಮನನ್ನು 'ಪ್ರೇತಾಧಿಪತಿ' ಯನ್ನಾಗಿ ಮಾಡಿದನು. ಯಮನನ್ನು ಯಮಧರ್ಮನನ್ನಾಗಿ ಆತನ ಸಭೆಯನ್ನು 'ಧರ್ಮಸಭೆ' ಎಂದು ಪ್ರಸಿದ್ಧಿ ಹೊಂದುವಂತೆ ಕರುಣಿಸಿದನು. ಮಾತ್ರವಲ್ಲ ಔರಸಪುತ್ರನನ್ನು ಶಪಿಸಿದ ಛಾಯೆಯನ್ನು ನಿಂದಿಸಿ ಆಕೆಯ ಪುತ್ರನಾದ ಶನಿಯನ್ನು 'ವಕ್ರದೃಷ್ಟಿ' ಉಳ್ಳವನಾಗೆಂದೂ ಆ ದೃಷ್ಟಿಗೆ ಒಳಗಾದವರು ಕಷ್ಟಕ್ಕೆ ಒಳಗಾಗಲೆಂದೂ ಶಪಿಸಿದನು. ಶನಿಯಾದರೂ ನಿಷ್ಕಾರಣವಾಗಿ ತನ್ನನ್ನು ಶಪಿಸಿದ ತಂದೆಯ ಮೇಲೆ ಕೋಪಗೊಂಡು ತನ್ನ ವಕ್ರದೃಷ್ಟಿಯನ್ನು ಸೂರ್ಯನ ಮೇಲೆಯೇ ಪ್ರಯೋಗಿಸಿದನು. ಹೀಗೆ ಪುರಾಣದಲ್ಲಿ ಶನಿಯ ಉತ್ಪತ್ತಿಯ ಬಗ್ಗೆ ಬೇರೆ ಬೇರೆಯಾದ ಕಥೆಗಳಿವೆ.

ಈ ಶನಿಗೆ ಮಕರ, ಕುಂಭರಾಶಿಗಳು ಸ್ವಕ್ಷೇತ್ರವಾಗಿದ್ದು ಈತನಿಗೆ ಕೋಣ, ಮಂದ, ಶನಿ, ರವಿಸೂನು, ಶನೈಶ್ಚರ, ಅಸಿತ, ಛಾಯಾನಂದನ ಮೊದಲಾದ ಹೆಸರುಗಳಿವೆ. ಸಂಹಿತಾದಲ್ಲಿ ನಕ್ಷತ್ರಗಳ ಸ್ಥಿತಿಯಿಂದ ವಿಶೇಷ ಫಲವು ಹೇಳಲ್ಪಟಿದೆ. ಏಕ ನಕ್ಷತ್ರದಲ್ಲಿ ಗುರು ಶನಿಗಳು 'ಪುರಪ್ರಭೇದ' ಉಂಟಾಗುತ್ತದೆ. ಆತನಿಗೆ ಚಿತ್ರ, ಪೀತ, ರಕ್ತ, ಭಸ್ಮ ಮೊದಲಾದ ವರ್ಣಗಳಿವೆ. ಈತನು ಶ್ವೇತವರ್ಣನಾಗಿ ಕಂಡುಬಂದರೆ ಬ್ರಾಹ್ಮಣರಿಗೂ, ಅನ್ಯವರ್ಣ. ಸಾದೃಶ್ಯದಿಂದ ಅನ್ಯವರ್ಣದವರ ನಾಶಕ್ಕೂ ಕಾರಣನಾಗುವನು. ಕೇಂದ್ರದಲ್ಲಿ ಶನಿ-ರವಿ-ಕುಜರು ಬಂದಾಗ ಪ್ರಪಂಚದ 1/3 ಭಾಗ ಮಾತ್ರ ಉಳಿಯುತ್ತದೆ. ಈತನಿಗೆ ಸೂರ್ಯನ ಸುತ್ತ ಭ್ರಮಿಸಲು ಮೂವತ್ತು ವರ್ಷಗಳು ಬೇಕು. ಆಲಸ್ಯ, ಜಾಡ್ಯ, ಮಾಂದ್ಯ ಇದರ ಸ್ವಭಾವ. ಕಪಿಲವರ್ಣದ ಕಣ್ಣು, ಕೃಶವಾದ ದೀರ್ಘಗಾತ್ರದ ಶರೀರ, ದೊಡ್ಡದಾದ ಹಲ್ಲು, ಕರ್ಕಶವಾದ ರೋಮ, ವಾಯುಪ್ರಕೃತಿ, ಕೊಳಕಾದ ಶರೀರ ಈತನದ್ದಾಗಿದೆ. ಕುಂಭರಾಶಿಯ ಮೊದಲ ಇಪ್ಪತ್ತು ಅಂಶಗಳು ಮೂಲತ್ರಿಕೋಣವಾಗಿದ್ದು, ಮುಂದಿನ ಹತ್ತು ಅಂಶಗಳು ಸ್ವಕ್ಷೇತ್ರಾಂಶವಾಗಿದ್ದು, ತುಲಾದ ಇಪ್ಪತ್ತನೇ ಭಾಗವು ಪರಮ ಉಚ್ಚಾಂಶವಾಗಿದ್ದು, ಮೇಷದ ಇಪ್ಪತ್ತನೇ ಅಂಶವು ಪರಮ ನೀಚಾಂಶವಾಗಿದೆ. ಈತನು ಧಾತುಗ್ರಹನು. ಕಾಲಪುರುಷನ ಕಾಲನ್ನು ಸೂಚಿಸುವನು. ಶರೀರ ಕಪ್ಪು ಬಣ್ಣದಾಗಿದ್ದು, ಪೃಷ್ಠೋದಯ ಗ್ರಹನು. ಚತುಷ್ಪಾತ್ ಗ್ರಹನು. ಪರ್ವತ, ಕಾಡುಗಳಲ್ಲಿ ಸಂಚರಿಸುವನು. ಈತನ ವಯಸ್ಸು ನೂರು. ಬ್ರಹ್ಮನು ಈತನ ದೇವತೆಯು. ಈತನಿಂದ ಪ್ರಾಣದೇವರು ಹಾಗೂ ಶಾಸ್ತಾರನನ್ನು ಚಿಂತಿಸಬೇಕು. ಕಬ್ಬಿಣ ಈತನ ದ್ರವ್ಯ, ನೀಲ ಇವನ ರತ್ನ, ಹರಿದ ವಸ್ತ್ರಕ್ಕೆ ಕಾರಕನು. ಗಂಗಾನದಿಯಿಂದ ಹಿಮಾಲಯದ ತನಕದ ಪ್ರದೇಶಕ್ಕೆ ಅಧಿಪತಿಯು. ಈತನು ತಮೋಗುಣ ಪ್ರಧಾನನು. ನಪುಂಸಕ ಗ್ರಹನು. ವಾಯುತತ್ವಕ್ಕೆ ಅಭಿಮಾನಿ. ಪ್ರಾಚೀನರ ಕಕ್ಷೆಯಲ್ಲಿ ಭೂಮಿಯಿಂದ ಅತೀದೂರದ ಗ್ರಹ. ನವೀನರಲ್ಲಿ ಈತನಿಗಿಂತಲೂ ದೂರದಲ್ಲಿ ಇಂದ್ರ, ವರುಣ

(ಯುರೇನಸ್, ನೆಪ್ಚೂನ್) ಗ್ರಹಗಳಿವೆ. ಈತನು ಸ್ನಾಯುಕಾರಕನು. ಕಷಾಯರಸಕ್ಕೆ ಕಾರಕನು. ಈತನು ವರ್ಷಾಧಿಪತಿಯು. ರಾತ್ರಿ ಬಲವುಳ್ಳವನು. ತನ್ನ ಸ್ಥಾನದಿಂದ 3,7,10ರಲ್ಲಿ ಪೂರ್ಣದೃಷ್ಟಿ ಇದೆ. ಆಯುಷ್ಯ, ಮರಣ, ಜೀವನ ಈತನಿಗೆ ಸಂಬಂಧಿಸಿದೆ. ಈತನು ರೋಗಭಾವವಾದ ಆರಕ್ಕೂ , ಮೃತ್ಯುಭಾವವಾದ ಎಂಟಕ್ಕೂ, ಕರ್ಮಭಾವವಾದ ಹತ್ತಕ್ಕೂ, ವ್ಯಯಭಾವವಾದ ಹನ್ನೆರಡಕ್ಕೂ ಕಾರಕನು. ಅಷ್ಟಮಕಾರಕನಾಗಿ ಅಷ್ಟಮದಲ್ಲಿದ್ದರೆ ಆಯುಷ್ಯ ವಿಚಾರದಲ್ಲಿ ದೋಷಪ್ರದನಾಗನು. ಈತನು ರಾಶಿಯ ಕೊನೆಯಲ್ಲಿ ಫಲಪ್ರದನು. ಸಪ್ತಮಭಾವದ ಶನಿಯು ನಿಷ್ಫಲನು. ಆದರೆ ಅಲ್ಲಿ ಅವನಿಗೆ ದಿಗ್ಬಲವಿದೆ. ಜಾತಕದ ರಾಹು ಮತ್ತು ಬುಧ ದೋಷವನ್ನು ಶನಿಯು ನಾಶ ಮಾಡುತ್ತಾನೆ. ಈತನು ವಿಯೋನಿಗಳ ಜನನದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಾನೆ. ಈತನು ಕಣ್ಣು, ಮನಸ್ಸಿಗೆ ಅಪ್ರಿಯವಾದ ಕೊಳಕು ಜಾಗದಲ್ಲಿ ಬೆಳೆಯುವ ವೃಕ್ಷಗಳನ್ನು ಸೂಚಿಸುತ್ತಾನೆ. ಕಸ ಹಾಕುವ ಜಾಗ ಈತನ ವಾಸಸ್ಥಳ. ರಾತ್ರಿ ಜನನವನ್ನು ಹೊಂದಿದವರಿಗೆ ಪಿತೃಕಾರಕನಾಗುವನು. ಗರ್ಭಸ್ಥ ಶಿಶುವಿನ ಆರನೇ ಮಾಸದಲ್ಲಿ ರೋಮ ಉತ್ಪತ್ತಿಯಾಗುವ ಕಾಲಕ್ಕೆ ಅಧಿಪತಿಯು. ಈತನು ಪವರ್ಗದ ಅಧಿಪತಿಯು. ಹಳೆಯದಾದ ಆದರೆ ದುರಸ್ತಿ ಮಾಡಿದ ಮನೆಗೆ ಕಾರಕನು. ಶನಿಯು ಕುಜ, ರಾಹು ಮಾಂದಿಯಿಂದ ಯುತನಾದರೆ ದೋಷವನ್ನು ಉಂಟು ಮಾಡುವನು. ಶನಿ ಮಾಂದಿ ಯೋಗವು ಅತ್ಯಂತ ದೋಷಪ್ರದ. ಅಶುಚಿಯ ಪಾಪದ ಸಂಕೇತ. ಗೋಚರದಲ್ಲಿ 1,12, 2, 4,5,7,8, 9, 10, ರಲ್ಲಿದ್ದಾಗ ದೋಷಪ್ರದನು. ತತ್ರಾಪಿ ಸಾಡೇಸಾತ್, ಪಂಚಮ, ಅಷ್ಟಮ, ಅರ್ಧಾಷ್ಟಮ ಶನಿಗಳು ಅತಿ ದೋಷಪ್ರದರು. ಈತನಿಗೆ ಒಂದು ರಾಶಿ ಕ್ರಮಿಸಲು 2 1/2 ವರ್ಷ ಬೇಕು. ಹೀಗೆ ಕ್ರಮಿಸುತ್ತ ದ್ವಾದಶದಲ್ಲಿ 2 1/2, ಜನ್ಮರಾಶಿಯಲ್ಲಿ 2 1/ 2 , ದ್ವಿತೀಯದಲ್ಲಿ 2 1/2 ವರ್ಷ ಬಂದಾಗ 7 1/2 ವರ್ಷದ ಶನಿಯಾಗುವುದು. ಹೀಗೆ ಜನ್ಮರಾಶಿಯಿಂದ ಪಂಚಮದಲ್ಲಿ ಹಾಗೂ ಅಷ್ಟಮದಲ್ಲಿ ಶನಿಯು ಬಂದಾಗ ಕ್ರಮವಾಗಿ ಪಂಚಮಶನಿ ಹಾಗೂ ಅಷ್ಟಮಶನಿಯ ಕಾಲವಾಗುವುದು. ಚತುರ್ಥದಲ್ಲಿ ಬಂದಾಗ ಅರ್ಧಾಷ್ಟಮ ಶನಿಯಾಗುವುದು. ಈತನ ಸರಾಸರಿ ದಿನಗತಿ ಎರಡು ಕಲೆ. ಈತನ ಸ್ತಂಭನಾಂಶ 108 ಡಿಗ್ರಿ. ಈತನ ವಕ್ರಗತಿಯ ದಿವಸಗಳು 120. ರವಿಯಿಂದ 13ಡಿಗ್ರಿ ಹತ್ತಿರ ಬಂದಾಗ ಅಸ್ತನಾಗುವುನು. ಆದರೆ ಈತನಿಗೆ ಅಸ್ತದೋಷ ಉಳಿದ ಗ್ರಹರಷ್ಟಲ್ಲ. ಗೋಚರದಲ್ಲಿ ಈತನು ರಾಶಿಯಲ್ಲಿ ಕೊನೆಯ ಆರು ತಿಂಗಳು ವಿಶೇಷ ಫಲಪ್ರದನು. ಈತನು ವಧತಾರೆಗೆ ಅಧಿಪತಿಯು. ನಾಶ ಅದರ ಫಲ. ಶನಿವಾರ ರೋಹಿಣಿ ನಕ್ಷತ್ರ ಅಮೃತ ಸಿದ್ಧಿಯೋಗ. ಶನಿವಾರ ಹಸ್ತನಕ್ಷತ್ರ ಮೃತ್ಯುಯೋಗ. ಈತನ ಬಿಂಬಮಾನ 19ಡಿಗ್ರಿ. ಜನ್ಮರಾಶಿಯ ಶನಿ ಸಂಚಾರ ಪ್ರಾಣಸಂದೇಹಕ್ಕೂ ಕಾರಣವಾಗಬಹುದು. ವ್ಯಯದ 7 1/2 ಶನಿ ಸಂಚಾರ, ಧನಕ್ಷಯ, ವಿರೋಧ. ಜನ್ಮರಾಶಿಯಲ್ಲಿ ಅನಾರೋಗ್ಯ, ಅಪಮಾನ, ದ್ವಿತೀಯದಲ್ಲಿ ಧನಕ್ಷಯ ವಿರೋಧ. ಪಂಚಮದಲ್ಲಿ ಪುತ್ರಪೀಡೆ. ಮಾನಸಿಕ ಅಶಾಂತಿ. ಚತುರ್ಥದಲ್ಲಿ ಹೃದಯಪೀಡೆ. ಬಂಧುದ್ವೇಷ.

ಅಷ್ಟಮದಲ್ಲಿ ಧನನಾಶ. ಋಣಬಾಧೆ. ಸರ್ವನಾಶಕ್ಕೆ ಕಾರಣನಾಗುವನು. ರವಿ-ಶನಿಯೋಗ ಪಾತ್ರೆ ಮಾಡುವವನನ್ನು ,ಶನಿ-ಚಂದ್ರಯೋಗ ಪುನರ್ಭೂಸುತನನ್ನೂ, ಶನಿ-ಕುಜಯೋಗ ಅತ್ಯಂತ ದುಃಖವನ್ನೂ, ಶನಿ-ಬುಧಯೋಗ ಗುರುವಚನ ಉಲ್ಲಂಘಿಸುವವನನ್ನೂ, ಗುರು-ಶನಿಯೋಗ ಕ್ಷೌರಿಕನನ್ನೂ, ಶುಕ್ರ-ಶನಿಯೋಗ ಕಾಮುಕನನ್ನೂ ಸೂಚಿಸುತ್ತದೆ.

ಈತನಿಗೆ ಕೇಂದ್ರಾಧಿಪತ್ಯವು ಶುಭ, ಕೇಂದ್ರಸ್ಥಿತಿ ಅಶುಭ. ಕೇಂದ್ರಕೋಣದಲ್ಲಿ ಉಚ್ಚ, ಸ್ವಕ್ಷೇತ್ರ ಮೂಲತ್ರಿಕೋಣಸ್ಥನಾದರೆ ಶಶಯೋಗವಾಗುವುದು. ಪುಷ್ಯ ಅನುರಾಧ, ಉತ್ತರಾಭಾದ್ರ ನಕ್ಷತ್ರದಲ್ಲಿ ಶನಿದಶೆಯು ಆರಂಭವಾಗುತ್ತದೆ. ಈತನ ದಶಾವರ್ಷ 19 ತನ ದಶಾಕಾಲದಲ್ಲಿ ಪ್ರಬಲನಾದರೆ ಗ್ರಾಮ, ಪಟ್ಟಣ ನಗರದ ಆಧಿಪತ್ಯವನ್ನೂ ಒಂದು ವರ್ಗಕ್ಕೆ ಅಧಿಪತಿಯನ್ನಾಗಿ ಮಾಡುತ್ತದೆ. ಕಪ್ಪುಪದಾರ್ಥ, ಒಂಟೆ, ಕೋಣಗಳ ಲಾಭವನ್ನೂ, ಕಬ್ಬಿಣದ ವಸ್ತುವಿನಿಂದ ಲಾಭವನ್ನು ಸೂಚಿಸುತ್ತದೆ. ಆಲಸ್ಯ,ಜಾಡ್ಯ ಈರ್ಷೆ, ವಾಯುಪ್ರಕೋಪ, ಕೊಳಕುತನ, ಆಯಾಸ, ಕೆಲಸಗಾರರಿಂದ ಕುಟುಂಬಸ್ಥರಿಂದ, ಪತ್ನಿಪುತ್ರರಿಂದ ವಿರೋಧವನ್ನುಂಟು ಮಾಡುತ್ತಾನೆ. ಈತನು ನವಮದಲ್ಲಿದ್ದರೆ ದಿಗ್ಬಲ ಹೊಂದಿದರೂ ವಿಚಾರ. ಈತನು ಶ್ರಮಿಕವರ್ಗಕ್ಕೂ ನ್ಯಾಯಾಧೀಶರಿಗೂ ಸೂಚಕನಾಗಿರುತ್ತಾನೆ. ಕಾವೇರಿನದಿಗೆ ಕಾರಕನಾಗಿದ್ದಾನೆ. ಕುರುಕ್ಷೇತ್ರ, ಪ್ರಭಾಸ, ಈತನಿಗೆ ಸಂಬಂಧಿಸಿದ ಪ್ರದೇಶವಾಗಿದೆ. ನೀಚರು, ಮಲಿನರು. ಬಲಹೀನರೂ, ಪುರುಷತ್ವ ಇಲ್ಲದವರು, ಬಂಧನದಲ್ಲಿರುವವರಿಗೂ ಈ ಶನಿಯೇ ಕಾರಕನು. ರೂಪವರ್ಜಿತರು ಮುದುಕರು, ಹಂದಿಸಾಕುವವರು, ವ್ಯಾಧರು, ಬಿಲ್ಲಾಳುಗಳು, ವಿಧವೆ, ವಿದುರ, ಸ್ಮಶಾನದ ಕಾವಲುಗಾರ, ಸುಳ್ಳು ಸಾಕ್ಷಿಗಾರರು, ದಿಗಂಬರರು, ಭೂತಾರಾಧಕರು. ನ್ಯಾಯವಾದಿಗಳಿಗೂ ಈ ಶನಿಯು ಸೂಚಕನು. ಶಮೀವೃಕ್ಷ (ಸಮಿಧೆ) ಕೃಷಿಸಲಕರಣೆ ಅಪಘಾತ, ರೋಗ, ಮರಣ, ಉತ್ಪಾತ, ಸಾಲಗಳಿಗೂ ಕಾರಕನು. ಜಾತಕದಲ್ಲಿ ಶನಿಯು ಅನಿಷ್ಟ ಸ್ಥಿತನಾದಾಗ ಶನಿವಾರವ್ರತ, ಶನಿಪೂಜೆ, ಶನಿಮಂತ್ರಜಪ, (23 ಸಾವಿರ) ವೇಂಕಟೇಶಪೂಜೆ, ಮೃತ್ಯುಂಜಯ ಜಪ, ರುದ್ರಜಪ, ರುದ್ರಪಾರಾಯಣ, ತಿಲದಾನ, ತೈಲದೀಪ, ಕಂಬಳಿ, ಕಪ್ಪುಬಟ್ಟೆ, ಎಮ್ಮೆದಾನ, ಅಶ್ವತ್ಥಪೂಜೆ, ಗೋಸೇವೆ ನೀಚಾನ್ನದಾನ, ಪ್ರಾಣದೇವರ ಆರಾಧನೆ, ಸುಂದರಕಾಂಡ ಪಾರಾಯಣ, ವಾಯುಸ್ತುತಿ ಪುರಶ್ಚರಣೆ, ವಿಷ್ಣುಸಹಸ್ರನಾಮ, ವೇಂಕಟೇಶಸ್ತೋತ್ರಜಪ, ಕೃಷ್ಣಮಂತ್ರ ಜಪ, ಶನಿಶಾಂತಿ, ತಿಲಹೋಮ, ಮೃತ್ಯುಂಜಯ ಹೋಮ, ನವಗ್ರಹಹೋಮ, ಪವಮಾನ ಹೋಮ, ತುಲಾಭಾರ, ಪ್ರತಿಕೃತಿದಾನ, ಅನ್ನದಾನಗಳಿಂದ ಅರಿಷ್ಟಪರಿಹಾರ, ಮಧ್ಯಮ ಬೆರಳಿನ ಕೆಳಗೆ ಶನಿಪರ್ವವಿದೆ.  ನೀಲಧಾರಣೆ, ಶನಿದೋಷ ಪರಿಹಾರ. ತಿರುಪತಿ ಯಾತ್ರೆ, ಶ್ರೀನಿವಾಸ ಕಲ್ಯಾಣಗಳಿಂದ ಶುಭವಾಗುವುದು. ತ್ರಿಮಧುರದಿಂದ ದುರ್ವಾಯುಷ್ಯ ಹೋಮದಿಂದಲೂ ಶುಭವಾಗುವುದು. ಕೃಸರಾನ್ನದಿಂದ ಹೋಮಮಾಡುವುದು ಶ್ರೇಯಸ್ಕರ. ★

## ನೆರೆ ಸಂತ್ರಸ್ಥರಿಗಾಗಿ ನೆರವು ನೀಡಿದವರ ಹೆಸರು

| | |
|---|---|
| ಉಡುಪಿ ಶ್ರೀಪಲಿಮಾರು ಮಠ ಮಲ್ಲೇಶ್ವರಂ ಬೆಂಗಳೂರು. | 1,00,000 |
| ಶ್ರೀಸೀತಾರಾಮ ಚಾರಿಟೇಬಲ್ ಟ್ರಸ್ಟ್ | 1,20,000 |
| ಶ್ರೀಕೃಷ್ಣದೇವರು(ಗುಪ್ತದಾನ) | 50,000 |
| ಅರವಿಂದ್ ಗಂಭೀರ್ | 31,000 |
| ಡಾ॥ ಶ್ರೀಧರ್ ಎಮ್. ಎಸ್ ಜಯನಗರ | 15,000 |
| ಶ್ರೀರಾಮಾಂಜನೇಯ ರಾಘವೇಂದ್ರಸ್ವಾಮಿಗಳ ಮಠದ ಸಿಬ್ಬಂದಿವರ್ಗ | 12,000 |
| ಶ್ರೀನಿವಾವಾಸನ್ ವಿ.ವಿ ಚೆನ್ನೈ | 10,000 |
| ಪ್ರೇಮ ಸುಧಾ ನಾಗರಾಜರಾವ್ ಬನಶಂಕರಿ | 10,000 |
| ರಾಘವೇಂದ್ರ ಆರ್. ಆರ್ ಜಯನಗರ | 10,000 |
| ಜಯಲಕ್ಷ್ಮಿ ಚಾಮರಾಜಪೇಟೆ | 6,000 |
| ನರೇಂದ್ರ | 5,001 |
| ಉಷಾವತಿ ಎನ್.ವಿ | 5,000 |
| ನಾರಾಯಣರಾವ್ ಬಿ.ಕೆ. ಚೋಡುವಪಾಳ್ಯ | 5,001 |
| ಶ್ರೀನಿವಾಸನ್ | 5,001 |
| ಗುಪ್ತದಾನಿಗಳು | 5,000 |
| ಗುಪ್ತಿದಾನಿಗಳು | 5,000 |
| ಬಾಲಚಂದ್ರ | 5,001 |
| ಸುರೇಶ್ ಬಾಳಿಗ | 5,000 |
| ಕೇಶವ್ ಬಿ. ದೇಸಾಯಿ | 5,000 |
| ಕೃಷ್ಣಸ್ವಾಮಿ ಎಂ. ಆರ್ ಚಾಮರಾಜಪೇಟೆ | 5,000 |
| ಗಾಯತ್ರಿ ಶ್ರೀನಾಥ್ ಜಯನಗರ | 5,000 |
| ಶಾಂತಾಬಾಯಿ ಬಿ.ಎಸ್. ಜಯನಗರ | 5,000 |
| ಶ್ರೀರಾಮ ಭಜನಾಮಂಡಳಿ ಚಾಮರಾಜಪೇಟೆ | 3,001 |
| ಸುಮ ವೆಂಕಟೇಶ ಮೂರ್ತಿ ಮಲ್ಲೇಶ್ವರಂ | 3,000 |

| | |
|---|---|
| ಪ್ರಸಾದ್ ಮಲ್ಲೇಶ್ವರಂ | 2,000 |
| ಸುಧೀಂದ್ರ ಮಯ್ಯ | 2,000 |
| ಹರೀಶ್ ನಾಡಿಗ್ | 2,001 |
| ಶ್ರೀಕೃಷ್ಣವಾದಿರಾಜ ಭಜನಾಮಂಡಳಿ ಚಾಮರಾಜಪೇಟೆ | 2,000 |
| ಎಸ್. ಪದಕಿ ಚಾಮರಾಜಪೇಟೆ | 2,000 |
| ರಾಘವೇಂದ್ರರಾವ್ ಸಿ.ಆರ್ ಚಾಮರಾಜಪೇಟೆ | 2,001 |
| ಆನಂದ್ ರಾವ್ ಸಿ.ಆರ್ ಹನುಮಂತನಗರ | 2,000 |
| ಸುಧೀಂದ್ರಾಚಾರ್ಯ ಎಸ್. ಎ. ಚಾಮರಾಜಪೇಟೆ | 2,000 |
| ಲಕ್ಷ್ಮೀನಾರಾಯಣರಾವ್ ಚಾಮರಾಜಪೇಟೆ | 2,222 |
| ವೆಂಕಟೇಶ್ ಎಲ್ ಉತ್ತರಹಳ್ಳಿ | 1,000 |
| ಶ್ರೀಕಂಠರಾವ್ ಮಲ್ಲೇಶ್ವರಂ | 1,000 |
| ರಮಾ ಲಕ್ಷ್ಮಣ್ | 1,002 |
| ರಮೇಶ್ ಕೆ. | 1,001 |
| ಅಭೀದ್ ಕೆ. | 1,000 |
| ಗೀತಮ್ಮ ಬಿ.ಕೆ ಗವೀಪುರಂ | 1,000 |
| ನಾರಾಯಣ ಮೂರ್ತಿ ಚಾಮರಾಜಪೇಟೆ | 1,000 |
| ನಾಗರತ್ನಮ್ಮ ಚಾಮರಾಜಪೇಟೆ | 1,000 |
| ಶ್ರೀನಿವಾಸ ನವಲಗುಂದ ಚಾಮರಾಜಪೇಟೆ | 1,000 |
| ಪ್ರಮೋದ್ ವೈವಿಕಾರ್ | 1,000 |
| ಗುರುರಾವ್ ಎಮ್. ಆರ್ ಚಾಮರಾಜಪೇಟೆ | 1,001 |
| ರಮೇಶ್ ಭಟ್ ಕೆ | 1,010 |
| ಶ್ರೀಪ್ರತಿಷ್ಠಾನ ಇಂದ್ರಪುರ ಶಿರ್ವ ಉಡುಪಿ | 1,111 |
| ಶಾಮಲ ಎನ್ ರಾವ್ ಮತ್ತಿಕೇರೆ | 1,000 |
| ಗುರುರಾಜ್ ಜೋಶಿ ಬೆಳಗಾಂ | 1,000 |
| ಆನಂದರಾವ್ ಹೆಚ್. ವಿ. ಚಾಮರಾಜಪೇಟೆ | 1,000 |
| ಗುರುರಾಜರಾವ್ ಬಿ. ಗುಟ್ಟೇನಹಳ್ಳಿ | 1,000 |
| ಬಾಲಮುರಳಿ | 1,001 |
| ಭಾಮದೇವಿ | 1,001 |

| | |
|---|---|
| ಗೋಪಿ ಜೆ.ಪಿ ನಗರ | 1,001 |
| ಪದ್ಮಾವತಿ ಶ್ರೀನಗರ | 1,000 |
| ಶ್ರೀಕೃಷ್ಣ ಚಾಮರಾಜಪೇಟೆ | 1,000 |
| ಪದ್ಮ ನಾಗರಾಜರಾವ್ ಚಾಮರಾಜಪೇಟೆ | 1,000 |
| ವಸಂತಕುಮಾರ್ ಎಮ್. ಎಸ್ | 1,000 |
| ಭವಾನಿ ಶ್ರೀವತ್ಸ | 1,000 |
| ಗುರುರಾಜರಾವ್ ಡಿ.ಎನ್ | 1,001 |
| ಕೆ. ಶೇಷಗಿರಿ ಚಾಮರಾಜಪೇಟೆ | 1,001 |
| ನಿತಿನ್ ಆಚಾರ್ಯ ಜೆ.ಪಿ. ನಗರ | 1,000 |
| ನಾಗರಾಜರಾವ್ | 1,001 |
| ಶ್ರೀಕಾಂತ | 1,002 |
| ವೇಲಾಯುಧಂ | 1,000 |
| ಆನಂದ್ | 1,001 |
| ಶಶಿಧರ್ ರಾವ್ | 1,000 |
| ಮುರಳೀಧರ್ ಹೆಚ್.ಎಸ್ | 1,000 |
| ರಮಣ್ ರಾವ್ | 1,000 |
| ಸೀತಾರಾಂ ಶರ್ಮ | 1,000 |
| ಎನ್. ಆರ್ ನಾಗೇಂದ್ರ ರಾವ್ | 1,001 |
| ಲಲಿತಾಂಬ ಎ.ಎಸ್ | 1,000 |
| ಪ್ರಹ್ಲಾದ್ ಜೋಶಿ | 1,000 |
| ಗೋಪಿನಾಥ ಚಾಮರಾಜಪೇಟೆ | 1,000 |
| ಶ್ರೀಪಾದಾಚಾರ್ಯ ಚಾಮರಾಜಪೇಟೆ | 1,000 |
| ಗಣೇಶ್ | 1,000 |
| ಗಿರಿಧರ್ ಚಾಮರಾಜಪೇಟೆ | 1,000 |
| ರಾಮಚಂದ್ರ ಚಾಮರಾಜಪೇಟೆ | 1,000 |
| ಉಮರ್ಜಿಪ್ರಹ್ಲಾದಾಚಾರ್ಯ ಕೆಂಗೇರಿ | 1,000 |

**ಪ್ರಶ್ನೋತ್ತರ ಪದಬಂಧ**

# ನೆನಪಿನ ಅಂಗಳ

ವಿ|| ಶಂಕರನಾರಾಯಣಾಚಾರ್ಯ

1) ಪರಶುರಾಮನ ರಥದ ಸಾರಥಿ ಯಾರು?

2) ಸೂರ್ಯನ ರಥದಲ್ಲಿರುವ ಕುದುರೆಗಳೆಷ್ಟು?

3) ''ಕುಂಭೀಪಾತ'' ಇದೇನು?

4) ಕಲಿಯುಗದ ಅವಧಿ ಎಷ್ಟು?

5) ಕ್ಷತ್ರಿಯ ಸಂಹಾರ ಮಾಡಿದ ವಿಷ್ಣುವಿನ ಅವತಾರ ಯಾವುದು?

6) ಸರಸ್ವತಿಯ ಕೈಯಲ್ಲಿರುವ ವೀಣೆಯ ಹೆಸರೇನು?

7) ನಾರದರ ವೀಣೆ ಯಾವುದು?

8) ರಾವಣ ನುಡಿಸಿದ ವೀಣೆ ಯಾವುದು?

9) ಅಗ್ನಿಯ ಹೆಂಡತಿ ಯಾರು?

10) ಅಹಲ್ಯೆ ಯಾರ ಮಗಳು?

**ಉತ್ತರಗಳು**

1) ಮಾತಲಿ 2) ಶನಿ 3) ಭಗದತ್ತ 4 ) ಜಯಂತ, ವಸಂತ,ಮನ್ಮಥ 5) ಪೂರ್ವ 6) ವರುಣ
7) ಐರಾವತ 8) ವಾಯುದೇವರು 9) ಅಮರಾವತಿ 10) ಮಾರ್ಗಶಿರ-ಶುದ್ಧ-ಏಕಾದಶಿ

| | | | | | | |
|---|---|---|---|---|---|---|
| 1 ಜ | ನ | 2 ಪ | ದ | | 3 ಬ | ಲ |
| ರಾ | | ರಿ | | 4 ಜಾ | ವ | |
| 5 ಸಂ | ಕೋ | ಚ | | 6 ಗ | ಣೇ | 7 ಶ |
| ಧ | | 8 ಯ | ಕಾ | ರ | | ರ |
| | 9 ಬಂ | | | ಣೆ | | ಪಂ |
| 10 ಕಾ | ದ | 11 ವೀ | 12 ಗಾ | | 13 ಬೀ | ಜ |
| 14 ಕ | ರು | ಣೆ | ಯ | ಆ | ಗ | ರ |

**ಎಡದಿಂದ ಬಲಕ್ಕೆ**

1) ಕೊಡದಂತೆ ಕಿವಿಯುಳ್ಳವ (4)

5) ದರದರನೆ ಉದುರಿದ ಹಲ್ಲು (2)

6) ಮಲಗಲು ಬೇಕಾದ ಶಯ್ಯೆ (2)

7) ಯುದ್ಧವನ್ನು ಹೊಂದಿರುವವ (2)

8) ತಿರುಗಿದ ಮಾರ್ಗ (2)

10) 'ಬೆಂಕಿ' ದೇವತೆ ತಿರುಗಿದ್ದಾನೆ (2)

11) ದಾಸರು ಹೊಗಳಿದ ರಾಮ (6)

13) ಸಂಸಾರದ ಬಗೆಗಿನ ಕಷ್ಟ (2)




ಉತ್ತರ ಮುಂದಿನ ಸಂಚಿಕೆಯಲ್ಲಿ

**ಮೇಲಿನಿಂದ ಕೆಳಕ್ಕೆ**

1) ಆನೆಗೆ ಅನುಗ್ರಹಿಸಿದವ (6)

2) ಭರಭರನೆ ಬಂದ ನಕ್ಷತ್ರ (3)

3) ಎರಡಕ್ಷರದ ಬಾಗಿಲು (2)

4) ಸಂಸ್ಕೃತದ ಸೀಸ (2)

9) ವಂತಿಕೆ ಬೇಡ! ಇದು ಹೂ (4)

10) ಅನುಸರಿಸುವವ (4)

12) 'ಕಿರಾತಾರ್ಜುನೀಯ' ಬರೆದವ (3)